
ವಾರ್ತಾ

ವಾರ್ಷಿಕ ಚಂದಾ ರೂ.25/–

# ಜನಪದ

ಅಕ್ಟೋಬರ್ 2020



Downloaded From: www.kpscvaani.com



ಸೆಪ್ಟೆಂಬರ್ 22 ರಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ವಿಧಾನಸೌಧದಲ್ಲಿ ಮಾನವ ಹಕ್ಕುಗಳ ಆಯೋಗದ ಮಾನವ ಹಕ್ಕುಗಳ ರಕ್ಷಣೆ ಮೊಬೈಲ್ ಆ್ಯಪ್ ಅನ್ನು ಲೋಕಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಧೀರೇಂದ್ರ ಹೆಚ್. ವಘೇಲಾ, ಆಯೋಗದ ಸದಸ್ಯರಾದ ಕೆ.ಬಿ.ಚಂಗಪ್ಪ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಜೆ.ಸಿ.ಮಾಧುಸ್ವಾಮಿ ಅವರು ಉಪಸ್ಥಿತರಿದ್ದರು.



ಕೋವಿಡ್–19 ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳಡಿ ಆರ್ಥಿಕ ಸ್ಪಂದನ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಗೋವಿಂದ ಎಂ ಕಾರಜೋಳ, ಡಾ.ಸಿ.ಎನ್. ಅಶ್ವಥ್ ನಾರಾಯಣ್, ಲಕ್ಷ್ಮಣ್ ಸವದಿ, ಸಹಕಾರ ಸಚಿವರಾದ ಎನ್.ಟಿ.ಸೋಮಶೇಖರ್ ಉಪಸ್ಥಿತರಿದ್ದರು.

Downloaded From: www.kpscvaani.com

ವಾರ್ತಾ

# ಜನಪದ

ಸಂಪುಟ–04 • ಸಂಚಿಕೆ–01 • ಅಕ್ಟೋಬರ್ 202



**05** ಶಿಕ್ಷಕಸ್ನೇಹಿಯಾಗಿ ಪರಿವರ್ತನೆಗೊಳ್ಳುತ್ತಿರುವ ಶಿಕ್ಷಣ ಇಲಾಖೆ
• ಸ್ಮಿತಾ. ಆರ್

**11** ಸಾಂಸ್ಕೃತಿಕ ನಗರಿಯಲ್ಲಿ ಡಾ॥ ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕೆ ಶಂಕುಸ್ಥಾಪನೆ
• ಕೆ. ಎನ್. ವಿಜಯಾನಂದ

**13** ಕಾಯಕ ಸಂಸ್ಕೃತಿ–ಗಾಂಧಿ ಮಾರ್ಗ
• ಸುಮ ಚಂದ್ರಶೇಖರ್

**16** ಗಾಂಧೀಜಿಯ ಮೊದಲ ಕರಾವಳಿ ಭೇಟಿಗೆ ಶತಮಾನ
• ವಿನೀತ್ ರಾವ್

**20** ಲಾಲ್‌ಬಹದ್ದೂರ್ ಶಾಸ್ತ್ರಿ ಅವರ ಸರಳ ಜೀವನ
• ಶಾರ್ವಿ

**23** ಅಂದದ ಅಂಬಾವಿಲಾಸ ಅರಮನೆ
• ವಿದ್ಯಾ.ವಿ.ಹಾಲಭಾವಿ

**25** ವಿಶ್ವ ವಿಖ್ಯಾತ ಮೈಸೂರು ದಸರಾದ ವೈಶಿಷ್ಟ್ಯತೆ
• ಬನ್ನೂರು ಕೆ.ರಾಜು

**31** ಭಾರತ ರತ್ನ ಪ್ರಣವ್ ಮುಖರ್ಜಿ–ಅಪರೂಪದ ಮುತ್ಸದ್ಧಿ
• ಡಾ.ಕೆ.ಪುಟ್ಟಸ್ವಾಮಿ

**35** ಮುಳ್ಳಯ್ಯನಗಿರಿ: ಕರ್ನಾಟಕದ ಅತ್ಯುನ್ನತ ಶಿಖರ
• ಡಾ.ಮಂಜುಳಾ ಹುಲ್ಲಹಳ್ಳಿ

**38** ಕೊರೊನಾ ಸಂಕಷ್ಟದಲ್ಲೂ ಬಂಪರ್ ಪಪಾಯ ಬೆಳೆದ ಕೃಷಿಕ
• ಗವಿಸಿದ್ಧಪ್ಪ ಹೊಸಮನಿ

**39** ರಾಷ್ಟ್ರೀಯ ಏಕತಾ ಮೂರ್ತಿಗೊಂದು ನಮನ
• ಡಾ.ಕೆ.ಎನ್.ಕವನ

**41** ಹಸಿದವರ ಹೊಟ್ಟೆ ತಣಿಸುವ ಕಾರ್ಯದಲ್ಲಿ ನಿರತರಾಗಿರುವ ಯುವರಾಜ
• ಉಷಾ ವಿಶ್ವನಾಥ್

**43** ಅಧಿಕ ಇಳುವರಿಗೆ ಮೊಟ್ಟೆ ಚಿಕಿತ್ಸೆ
• ಕಿಶನ್ ರಾವ್ ಕುಲಕರ್ಣಿ

**45** ಆದಿಕವಿ ವಾಲ್ಮೀಕಿಯ ಅಂತರಂಗ
• ಡಾ.ಗುರರಾಜ ಪೊ. ಶೆಟ್ಟಿಹಳ್ಳಿ

**47** ಖಾದಿ ರಕ್ಷಣೆ ನಮ್ಮೆಲ್ಲರ ಹೊಣೆ
• ರೇಣುಕಾ ಎಂ.ಎಂ

**49** ಹೈನುಗಾರಿಕೆಯಲ್ಲಿ ಸಾಧನೆ ಮಾಡಿರುವ ಯುವ ರೈತ ಮಹಿಳೆ
• ಡಾ. ರವಿಪ್ರಸಾದ್ ಸಜ್ಜನ್ ಎಂ

**50** ಪದಬಂಧ–11
• ವಿದ್ಯಾ ವಿ. ಹಾಲಭಾವಿ

ಪ್ರಧಾನ ಸಂಪಾದಕರು
**ಡಾ॥ ಪಿ. ಎಸ್. ಹರ್ಷ, ಐಪಿಎಸ್**
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
**ಡಿ.ಪಿ. ಮುರಳೀಧರ್**
ಜಂಟಿ ನಿರ್ದೇಶಕರು

**ಕೆ. ರೋಹಿಣಿ**
ಉಪ ನಿರ್ದೇಶಕರು

ಉಪ ಸಂಪಾದಕರು
**ಬಿ. ಜಿ. ಪೂರ್ಣಿಮ**

ಪ್ರಕಾಶಕರು
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ,
ಬೆಂಗಳೂರು – 560 001
Ph : 080-22028103 / 22028023
email : varthajanapada@yahoo.co.in
www.dipr.karnataka.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 560 010

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From: www.kpscvaani.com

# ಓದುಗರಿಂದ...




ನಮ್ಮ ರಾಜ್ಯದ ಸಾರ್ವಜನಿಕ ಗ್ರಂಥಾಲಯಗಳು ಬದಲಾದ ಕಾಲಮಾನದಲ್ಲಿ ಆಧುನಿಕ ಮಾಹಿತಿ ತಂತ್ರಜ್ಞಾನದ ಸಹಯೋಗದೊಂದಿಗೆ ಡಿಜಿಟಲ್ ಸೇವೆಯನ್ನು ಓದುಗರಿಗೆ ಒದಗಿಸಲು ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಮಹತ್ವದ ಹೆಜ್ಜೆ ಇಟ್ಟಿರುವುದು ಸ್ವಗತಾರ್ಹ ಸಂಗತಿ. ಶ್ರೀಯುತ ನಾಗರಾಜ ನಾಯಕ ಅವರು ಸಾರ್ವಜನಿಕ ಗ್ರಂಥಾಲಯಗಳ ಡಿಜಿಟಲ್ ಸ್ವರೂಪದ ಬಗ್ಗೆ ವಿಸ್ತೃತವಾಗಿ ತಮ್ಮ ಲೇಖನದ ಮೂಲಕ ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಟ್ಟಿರುವುದಕ್ಕಾಗಿ ಅವರಿಗೆ ನನ್ನ ಅನಂತ ಧನ್ಯವಾದಗಳು.

**-ವಿನಯ್ ಕುಮಾರ್, ಬೆಂಗಳೂರು**

ಸೆಪ್ಟೆಂಬರ್ ಮಾಹಿಯ ಜನಪದದಲ್ಲಿ ಮೂಡಿಬಂದಿರುವ ಮಾದರಿ ಶಿಕ್ಷಕರ ಕುರಿತು ಲೇಖನ ಬರೆದಿರುವ ಲೇಖಕ ವೆಂಕಟೇಶ್ ಪ್ರಸಾದ್ ಅವರಿಗೆ ನನ್ನ ನಮನಗಳು. ಸರ್ಕಾರಿ ಶಿಕ್ಷಕರು ಎಂದರೆ ಮೂಗು ಮುರಿಯುವವರೆ ಹೆಚ್ಚು. ಆದರೆ ಈ ಮಾದರಿ ಶಿಕ್ಷಕರು ಇಲಾಖೆಯಿಂದ ಯಾವ ಸಹಾಯವನ್ನು ಕೋರದೆ ಸ್ವಯಂ ಪ್ರೇರಣೆಯಿಂದ 'ಆನ್‌ಲೈನ್ ಪಾಠ' ಸೌಲಭ್ಯವಿಲ್ಲದ ಹಳ್ಳಿಗಾಡಿನ ಮಕ್ಕಳ ವಾಸಸ್ಥಳಕ್ಕೆ ತೆರಳಿ, ಆ ಮಕ್ಕಳಿಗೆ ಕೊರೊನಾ ಸೋಂಕಿನ ಕುರಿತು ಅರಿವು ಮೂಡಿಸುವ ಜೊತೆಗೆ ವಿದ್ಯಾದಾನ ಮಾಡುತ್ತಿರುವುದು ಅಭಿನಂದನಾರ್ಹವಾದ ವಿಚಾರ. ಉಳಿದ ಶಿಕ್ಷಕರಿಗೆ ಇವರ ಕೆಲಸ ಸ್ಫೂರ್ತಿ ನೀಡಲಿ.

**-ಅಶೋಕ, ಬಸವರಾಜಪುರ**

ಜೋಗ ಜಲಪಾತವನ್ನು ವರ್ಣನೆ ಮಾಡುವುದು ತುಂಬಾ ಕಷ್ಟಕರ. ಆದರೆ ಜನಪದದಲ್ಲಿ 'ಕನ್ನಡ ನಾಡಿನ ಸುಂದರ ಪ್ರವಾಸಿ ತಾಣ ಜೋಗದ ಜಲಪಾತ' ಲೇಖನ ಬರೆದಿರುವ ಮಂಜುನಾಥ್ ಅವರು ಜೋಗದ ಜಪಪಾತವನ್ನು ಸುಂದರವಾಗಿ ವರ್ಣಿಸಿದ್ದಾರೆ. ಅವರು ಲೇಖನದ ಕೊನೆಯಲ್ಲಿ ಹೇಳಿರುವಂತೆ ಜೊಗ ನೋಡಿದ ಮೇಲೆ ಪ್ರಕೃತಿಯ ಮಾತೆಗೊಂದು ಸಲಾಂ ಹೇಳಬೇಕು ಎಂದು ಎಲ್ಲರಿಗೂ ಅನಿಸುತ್ತದೆ.

**-ಅರ್ಪಿತಾ ಎಂ ಡಿ, ದೊಡ್ಡಬಳ್ಳಾಪುರ**

ಕೊರೊನಾ ಸಂಕಷ್ಟದಲ್ಲಿ ಗ್ರಾಮೀಣ ಭಾಗದ ಬಹಳಷ್ಟು ಜನರಿಗೆ ನಿಜವಾಗಲು ನರೇಗಾ ಯೋಜನೆಯು ಬದುಕನ್ನು ಮತ್ತೆ ಕಟ್ಟಿಕೊಟ್ಟಿದೆ. ಸೆಪ್ಟೆಂಬರ್ ವಾರ್ತಾ ಜನಪದ ಸಂಚಿಕೆಯಲ್ಲಿ ಈ ಕುರಿತು ಪ್ರಕಟಿಸಲಾಗಿರುವ ಲೇಖನ ವಾಸ್ತವಾಂಶದಿಂದ ಕೂಡಿದೆ.

ನಮ್ಮ ಹಳ್ಳಿಯಿಂದ ಬೆಂಗಳೂರಿಗೆ ಕೆಲಸ ಅರಸಿ ಸಾಕಷ್ಟು ಯುವಕರು ತೆರಳಿದ್ದರು. ಆದರೆ ಕೊರೊನಾ ಕಾರಣದಿಂದ ಉದ್ಯೋಗ ಕಳೆದುಕೊಂಡು ಮತ್ತೆ ಹಳ್ಳಿಗೆ ವಾಪಸ್ಸಾದರು. ವಯಸ್ಸಾದ ತಂದೆ-ತಾಯಿಗೆ ಇದು ಬಹಳಷ್ಟು ನೋವನ್ನು ಉಂಟು ಮಾಡಿತು. ಕೆಲಸ ಕಳೆದುಕೊಂಡು ಜೀವನ ಹೇಗೆ ನಡೆಸುವುದು ? ಹೇಗೆ ಹೊಟ್ಟೆ ತುಂಬಿಸಿಕೊಳ್ಳುವುದು? ಎಂಬ ಚಿಂತೆ ಕಾಡತೊಡಗಿತು. ಉದ್ಯೋಗ ಕಳೆದುಕೊಂಡು ಹಳ್ಳಿಗೆ ವಾಪಸ್ಸಾದ ಗ್ರಾಮೀಣ ಜನರಿಗೆ ಸರ್ಕಾರ ನರೇಗಾ ಯೋಜನೆ ಮೂಲಕ ಮತ್ತೆ ಉದ್ಯೋಗವನ್ನು ಒದಗಿಸಿಕೊಟ್ಟಿದೆ. ಅದಕ್ಕಾಗಿ ಈ ಮೂಲಕ ಮುಖ್ಯಮಂತ್ರಿಗಳಿಗೆ ಧನ್ಯವಾದವನ್ನು ತಿಳಿಸಲು ಬಯಸುತ್ತೇನೆ.

**-ಚನ್ನಬಸಪ್ಪ, ಹಾವೇರಿ**

ನಿಮ್ಮ ಪತ್ರಿಕೆಯ ಪ್ರತಿ ಸಂಚಿಕೆಯಲ್ಲಿ ಕೃಷಿಗೆ ಸಂಬಂಧಿಸಿದಂತೆ ಒಂದಾದರೂ ಲೇಖನವಿದ್ದೇ ಇರುತ್ತದೆ. ಹಾಗಾಗಿ ರೈತನಾದ ನಾನು ತಪ್ಪದೇ ನಿಮ್ಮ ಪತ್ರಿಕೆಯ ಓದುಗನಾಗಿದ್ದೇನೆ. ಸೆಪ್ಟೆಂಬರ್ ಸಂಚಿಕೆಯಲ್ಲಿ ಯುವ ರೈತ ಯಮನೂರ ಶ್ಯಾಮಣ್ಣ ಅವರು ವಿವಿಧ ಬೆಳೆಗಳನ್ನು ಬೆಳೆಯುವುದಕ್ಕಿಂತ ಬೀಜೋತ್ಪಾದನೆ ಮಾಡುವ ಮೂಲಕ ಅಧಿಕ ಆದಾಯಗಳಿಸುತ್ತಿರುವುದನ್ನು ಓದಿದ ನಂತರ ನನಗೂ ಬೀಜೋತ್ಪಾದನೆ ಮಾಡುವುದೇ ಸರಿ ಎನಿಸುತ್ತಿದೆ. ಹಾಗಾಗಿ ಮುಂದಿನ ದಿನಗಳಲ್ಲಿ ಇವರ ಪದ್ಧತಿಯನ್ನು ನಾನು ಅಳವಡಿಸಿಕೊಳ್ಳುತ್ತೇನೆ. ಕೃಷಿಗೆ ಸಂಬಂಧಿಸಿದಂತೆ ಇನ್ನೂ ಹೆಚ್ಚು ಲೇಖನಗಳನ್ನು ಪ್ರಕಟಿಸುವಂತೆ ಕೋರುವೆ.

**-ಲಿಂಗಣ್ಣ, ಮದ್ದೂರು**

ಸರ್ಕಾರ ಸಾರ್ವಜನಿಕ ಗ್ರಂಥಾಲಯಗಳಿಗೆ ಡಿಜಿಟಲ್ ಸ್ವರೂಪ ನೀಡುತ್ತಿರುವುದು ಉತ್ತಮ ಬೆಳವಣಿಗೆ ಎಂದೇ ಹೇಳಬೇಕು. ಸುರೇಶ್ ಕುಮಾರ್ ಅವರು ಶಿಕ್ಷಣ ಇಲಾಖೆಯ ಸಚಿವರಾಗಿ ಅಧಿಕಾರ ಸ್ವೀಕರಿಸಿದಾಗಿನಿಂದ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಶಿಕ್ಷಣ ಇಲಾಖೆಗೆ ಆಧುನಿಕ ಸ್ಪರ್ಶ ನೀಡುತ್ತಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ಗ್ರಂಥಾಲಯಗಳಿಗೆ ಹೋಗಿ ಓದಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಓದುವ ಹವ್ಯಾಸ ಇರುವವರಿಗೆ ಡಿಜಿಟಲ್ ಲೈಬ್ರರಿಗಳು ಸಹಕಾರಿಯಾಗಲಿದೆ.

**-ಸುನಂದಾ ನಾಗರಾಜ್, ಧಾರವಾಡ**

ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಾದ ಬಿ.ಫೌಜಿಯಾ ತರನ್ನುಮ್ ಅವರು ಚಿಕ್ಕಬಳ್ಳಾಪುರ ಜಿಲ್ಲೆಯ 58 ಅಂಗನವಾಡಿ ಕೇಂದ್ರಗಳಿಗೆ ಚಿನ್ನಾರಿ ಛಾಂಪ್ಸ್ ಹೆಸರಿನಲ್ಲಿ ನರೇಗಾ ಅನುದಾನ, ಮತ್ತು ಸ್ಥಳೀಯ ದಾನಿಗಳು, ಖಾಸಗಿ ಸಿ.ಎಸ್.ಆರ್ ಅನುದಾನದಲ್ಲಿ ನವರೂಪ ನೀಡಿರುವುದು ಶ್ಲಾಘನೀಯವಾದುದು. ಹಾಗೆಯೇ ರಾಜ್ಯದಲ್ಲೇ ಮೊದಲ ಬಾರಿಗೆ ಅಂಗನವಾಡಿ ಮಕ್ಕಳಿಗೆ ವಿನೂತನ ಮಾದರಿಯಲ್ಲಿ ಪಠ್ಯಪುಸ್ತಕವನ್ನು ರೂಪಿಸಿ ಅಂಗನವಾಡಿ ಕಾರ್ಯಕರ್ತೆಯರಿಂದ ಬೋಧಿಸುವ ಕಾರ್ಯಕ್ಕೂ ಮುಂದಾಗಿದ್ದಾರೆ ಎಂಬ ವಿಚಾರ ತಿಳಿದು ತುಂಬಾ ಸಂತೋಷವಾಯಿತು. ಇವರ ಕಾರ್ಯ ನಿಜಕ್ಕೂ ಮೆಚ್ಚುವಂತಹದು. ಇಂತಹ ಉತ್ತಮ ಕೆಲಸ ಮಾಡುತ್ತಿರುವ ಅಧಿಕಾರಿಗಳ ಕುರಿತು ಬೆಳಕು ಚೆಲ್ಲಿದ ಪತ್ರಿಕಾ ಸಂಪಾದಕ ವರ್ಗಕ್ಕೆ ಧನ್ಯವಾದಗಳು.

**-ಪುಷ್ಪಲತಾ, ಅರಸೀಕೆರೆ**

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ಷಿಕ ಚಂದಾ ರೂ.25/-

**ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/- ಅನ್ನು ಕಡ್ಡಾಯವಾಗಿ ಸೇವಾಸಿಂಧುವಿನ ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.**

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ-ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ-ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From: www.kpscvaani.com



## ಶಿಕ್ಷಕಸ್ನೇಹಿಯಾಗಿ ಪರಿವರ್ತನೆಗೊಳ್ಳುತ್ತಿರುವ

# ಶಿಕ್ಷಣ ಇಲಾಖೆ

ಸ್ಮಿತಾ. ಆರ್

**ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಸೇರಿದಂತೆ ಅವರ ಎಲ್ಲಾ ಸೇವಾ ವಿಷಯಗಳನ್ನು ಅತ್ಯಂತ ಪಾರದರ್ಶಕವಾಗಿ ಮಾಡುವ ನಿಟ್ಟಿನಲ್ಲಿ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ಮೂಲಕ ಶಿಕ್ಷಕ ಸ್ನೇಹಿಯಾಗಿ ರಾಜ್ಯ ಶಿಕ್ಷಣ ಇಲಾಖೆ ಪರಿವರ್ತನೆಗೊಳ್ಳುತ್ತಿದೆ.**

ರಾಜ್ಯ ಸರ್ಕಾರದಲ್ಲಿ ಅತಿ ದೊಡ್ಡ ಇಲಾಖೆಗಳಲ್ಲಿ ಒಂದಾಗಿರುವ ಶಿಕ್ಷಣ ಇಲಾಖೆಯನ್ನು ಸುಧಾರಿಸುವಲ್ಲಿ ಅನೇಕ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರ ಜಾರಿಗೆ ತರುತ್ತಿದೆ. ಈ ನಿಟ್ಟಿನಲ್ಲಿ ಶಿಕ್ಷಕರ ವರ್ಗಾವಣೆ ಸೇರಿದಂತೆ ಇಲಾಖೆಯಿಂದ ಪಡೆಯುವ ಸೇವೆಗಳು ಮತ್ತು ಸಮಸ್ಯೆಗಳಿಗೆ ಪರಿಹಾರವನ್ನು ತಾವಿರುವ ಸ್ಥಳದಿಂದಲೇ ಅತಿ ಶೀಘ್ರದಲ್ಲಿ ಪಡೆದುಕೊಳ್ಳಲು **"ಶಿಕ್ಷಕರ ಮಿತ್ರ"** ಮೊಬೈಲ್ ಆ್ಯಪ್ ಹಾಗೂ **"ಶಿಕ್ಷಣ ವಾಣಿ"** ಸಹಾಯವಾಣಿಯನ್ನು ಅಭಿವೃದ್ಧಿಪಡಿಸಿದ್ದು, ಆಗಸ್ಟ್ 29ರಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ವಿಧಾನಸೌಧದಲ್ಲಿ "ಶಿಕ್ಷಕ ಮಿತ್ರ" ಆ್ಯಪ್ ಅನ್ನು ಬಿಡುಗಡೆ ಮಾಡಿದರು.

ಜೀವನ ಹಾಗೂ ಸಮಯ ಈ ವಿಶ್ವದ ಅತಿ ದೊಡ್ಡ ಶಿಕ್ಷಕರು, ಜೀವನ ಸಮಯದ ಸದುಪಯೋಗ ಕಲಿಸಿದರೆ, ಸಮಯ ಬದುಕಿನ ಮೌಲ್ಯ ತಿಳಿಸುತ್ತದೆ ಎಂದು ದಿವಂಗತ ಮಾಜಿ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ಅವರು ಹೇಳಿರುವ ಮಾತುಗಳನ್ನು ಅಕ್ಷರಶಃ ಪಾಲಿಸುತ್ತಿರುವ ರಾಜ್ಯ ಸರ್ಕಾರ, ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗಳನ್ನು ತರಲು ಸನ್ನದ್ಧವಾಗಿದೆ. ಉತ್ತಮ ಶಿಕ್ಷಣಕ್ಕೆ ಶಿಕ್ಷಣ ನೀಡುವ ಶಿಕ್ಷಕರರನ್ನು ಅವಲಂಭಿಸಿರುತ್ತದೆ. ಅವರ ಜೀವನವನ್ನು ಸರಳ ಹಾಗೂ ಸುಂದರಗೊಳಿಸಿದಷ್ಟು ಉತ್ತಮ ಸಮಾಜವನ್ನು ಸೃಷ್ಟಿಸುವ ಅವಕಾಶ ಹೆಚ್ಚುತ್ತಾ ಹೋಗುತ್ತದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯು ಅತಿ ದೊಡ್ಡ ಇಲಾಖೆಯಾಗಿದ್ದು, ಇದರ ವ್ಯಾಪ್ತಿಯಲ್ಲಿ ಸುಮಾರು 2.50 ಲಕ್ಷ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರು ಹಾಗೂ ತತ್ಸಮಾನ ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇ-ಆಡಳಿತ



Downloaded From: www.kpscvaani.com



**ಪ್ಲೇ ಸ್ಟೋರ್‌ನಲ್ಲಿ "ಶಿಕ್ಷಕ ಮಿತ್ರ" ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ನಂತರ ಲಿಂಕ್ ಕ್ಲಿಕ್ ಮಾಡಿ, ಯೂಸರ್ ಐಡಿ ಹಾಗೂ ಕೆಜಿಐಡಿ ನಂಬರ್ ಹಾಕಬೇಕು. ಬಳಿಕ ಪಾಸ್‌ವರ್ಡ್ ಬದಲಾಗಿ forgot password ಕ್ಲಿಕ್ ಮಾಡಬೇಕು. ಆಗ ಮೊಬೈಲ್‌ಗೆ ಬರುವ ಒಟಿಪಿ ನಮೂದಿಸಿದರೆ ಹೊಸ ಪಾಸ್‌ವರ್ಡ್ ಕ್ರಿಯೇಟ್ ಮಾಡಿಕೊಂಡು ಶಿಕ್ಷಕ ಮಿತ್ರಕ್ಕೆ ಲಾಗಿನ್ ಆಗಬೇಕು.**

ಇಲಾಖೆಯ ನೆರವಿನಲ್ಲಿ ಅಭಿವೃದ್ಧಿ ಪಡಿಸಲಾಗಿರುವ "ಶಿಕ್ಷಕ ಮಿತ್ರ ಆ್ಯಪ್" ನಲ್ಲಿ ಸರ್ಕಾರಿ ಶಾಲಾ ಶಿಕ್ಷಕರ ಸೇವಾ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗಿದೆ. ಸಂಗ್ರಹಿಸಲಾದ ಮಾಹಿತಿ ಆಧಾರದ ಮೇಲೆ ಶಿಕ್ಷಕರ ಸೇವಾ ಸೌಲಭ್ಯಗಳನ್ನು ಇನ್ನು ಮುಂದೆ ಆನ್ ಲೈನ್ ಸೇವಾ ತಂತ್ರಾಂಶಗಳ ಮೂಲಕವೇ ಶಿಕ್ಷಕರ ತರಬೇತಿ, ಸೇವಾ ವಿಷಯಗಳು ಮತ್ತು ವರ್ಗಾವಣೆ ಪ್ರಕ್ರಿಯೆಗಳು ನಡೆಯಲಿದೆ.

ನೌಕರರು ಹಾಗೂ ಶಿಕ್ಷಣ ಸಂಸ್ಥೆಗಳು ಇಲಾಖಾ ಸೇವೆಗಳನ್ನು ಪಡೆಯಲು ಅರ್ಜಿ ಹಾಗೂ ದಾಖಲೆಗಳನ್ನು ಕಚೇರಿಗೆ ಸಲ್ಲಿಸಿ ಪಡೆಯಬೇಕಾಗಿತ್ತು. ಈ ಸೇವೆಗಳನ್ನು ಆನ್ ಲೈನ್ ತಂತ್ರಾಂಶದಲ್ಲಿ ಅಳವಡಿಸಿರುವುದರಿಂದ ನೌಕರರು ಆನ್ ಲೈನ್‌ನಲ್ಲೇ ಅರ್ಜಿಗಳನ್ನು ಸಲ್ಲಿಸಿ ಸೇವೆಗಳನ್ನು ಪಡೆಯಬಹುದು. ಕೆಲವು ಸೇವೆಗಳನ್ನು ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸದೆ ಇದ್ದರೂ ಇಲಾಖೆಯಿಂದ ಅವುಗಳನ್ನು ನೀಡಲಾಗುವುದು. (ಉದಾಹರಣೆಗೆ: ಖಾಯಂಪೂರ್ವ ಸೇವಾ ಅವಧಿ ಘೋಷಣೆ, ಕಾಲಮಿತಿ ವೇತನ ಬಡ್ತಿ)

ಆದ್ದರಿಂದ ಇನ್ನು ಮುಂದೆ ವರ್ಗಾವಣೆ ಬಯಸುವ ಶಿಕ್ಷಕರು ತಮ್ಮ ಮೊಬೈಲ್‌ನಲ್ಲಿ 'ಶಿಕ್ಷಕ ಮಿತ್ರ" ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಂಡು, ತಂತ್ರಾಂಶ ಚಾಲನೆಗೊಳ್ಳುತ್ತಿದ್ದಂತೆ ತಾವಿರುವ ಸ್ಥಳದಿಂದಲೇ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಬಹುದು.

ಅರ್ಜಿಗೆ ಸಂಬಂಧಿಸಿದ ಪ್ರಗತಿಯ ಮಾಹಿತಿಯನ್ನೊಳಗೊಂಡ ಸಂದೇಶ ಮೊಬೈಲ್‌ಗೆ ಮರು ರವಾನೆ ಆಗಲಿದೆ. ನಂತರ ವರ್ಗಾವಣೆ ವೇಳಾಪಟ್ಟಿಗೆ ಅನುಗುಣವಾಗಿ ಆ್ಯಪ್‌ನಲ್ಲಿ ಮಾಹಿತಿಗಳು ಅಪ್‌ಡೇಟ್ ಆಗಲಿದೆ.

**ವೈಶಿಷ್ಟ್ಯತೆಗಳು:**

ಶಿಕ್ಷಕರು ಅರ್ಜಿಗಳನ್ನು ಸಲ್ಲಿಸಲು ತಂತ್ರಾಂಶದಲ್ಲಿ ಲಾಗಿನ್ ಅವಕಾಶ ಕಲ್ಪಿಸಲಾಗಿದೆ. ಶಿಕ್ಷಕರು ತಮ್ಮ ಸೇವಾ ವಿವರಗಳನ್ನು ಲಾಗಿನ್‌ನಲ್ಲಿ ವೀಕ್ಷಿಸಬಹುದು. ಅರ್ಜಿಗಳನ್ನು ಶಿಕ್ಷಕರು ತಮ್ಮ ಮೊಬೈಲ್‌ನಿಂದ ದಿನದ ಯಾವುದೇ ಸಮಯದಲ್ಲಿ ಎಲ್ಲಿಂದಾದರೂ ಸಲ್ಲಿಸಬಹುದು. ಸ್ವಯಂಚಾಲಿತ ಕಾರ್ಯದ ಹರಿವಿನಿಂದ ಕಡತಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವುದರಿಂದ ಸೇವೆಯನ್ನು ನಿಗದಿತ ಕಾಲಮಿತಿಯೊಳಗೆ ನೀಡಲಾಗುವುದು. ಅರ್ಜಿದಾರರು ಸಲ್ಲಿಸಿದ ಅರ್ಜಿಯ ಸ್ವೀಕೃತಿ ಪ್ರಕ್ರಿಯೆ ಹಾಗೂ ಮಂಜೂರಾತಿ ಸೂಚನೆಯನ್ನು ಎಸ್‌ಎಂಎಸ್ ಗೇಟ್‌ವೇ ಮೂಲಕ ತಿಳಿಸಲಾಗುವುದು.

ಶಿಕ್ಷಕರು ಮೊಬೈಲ್‌ನಲ್ಲಿ **'ಶಿಕ್ಷಕ ಮಿತ್ರ'** ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿಕೊಂಡು ತಾವು ಕುಳಿತಲ್ಲೇ ತಮ್ಮ ಸೇವಾ ವಿಷಯಗಳನ್ನು, ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ. ಆ್ಯಪ್ ಮೂಲಕ ನಿರ್ದಿಷ್ಟ ಸಮಸ್ಯೆಗಳನ್ನು ಇಂತಿಷ್ಟು ದಿನಗಳಲ್ಲಿ ಬಗೆಹರಿಸುವ ಬಗ್ಗೆ ಕಾಲಾವಧಿ ನಿರ್ಧರಿಸಲಾಗಿದೆ. ಹಾಗಾಗಿ, ಈ



Downloaded From: www.kpscvaani.com



**ಇನ್ನು ಮುಂದೆ ಶಿಕ್ಷಕರು ತಮ್ಮ ಮೊಬೈಲ್‌ನಲ್ಲಿ ಈ "ಶಿಕ್ಷಕ ಮಿತ್ರ" ಆ್ಯಪ್ ಅನ್ನು ಡೌನ್ ಲೋಡ್ ಮಾಡಿಕೊಂಡು ಕುಳಿತಲ್ಲೆ ಸೇವಾ ವಿಷಯ ಹಾಗೂ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು. ಈ ಬಾರಿಯಿಂದ ಸಾರ್ವತ್ರಿಕ ವರ್ಗಾವಣೆ ಅರ್ಜಿಯನ್ನು ಸಹ ಈ ಆ್ಯಪ್ ಮೂಲಕವೇ ಸಲ್ಲಿಸಬೇಕು. ಇದು ಇನ್ನು ಮುಂದೆ ಶಿಕ್ಷಕರ ಅಲೆದಾಟಕ್ಕೆ ಇತಿಶ್ರಿ ಹಾಡಲಿದೆ.**

-ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಗಳು

ಬಾರಿಯಿಂದ ಸಾರ್ವತ್ರಿಕ ವರ್ಗಾವಣೆ ಅರ್ಜಿಯನ್ನು 'ಶಿಕ್ಷಕ ಮಿತ್ರ' ಆ್ಯಪ್ ಮೂಲಕವೇ ಸಲ್ಲಿಸಬೇಕು.

**ಶಿಕ್ಷಣ ವಾಣಿ**

ಅತ್ಯಂತ ಆಸಕ್ತಿ ಮತ್ತು ಉತ್ಸಾಹದಿಂದ ವಿನೂತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಾ ಇಲಾಖೆಯನ್ನು ಮುನ್ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರೂ ಆಗಿರುವ ಎಸ್. ಸುರೇಶ್ ಕುಮಾರ್ ಅವರ ಮಹತ್ವಾಕಾಂಕ್ಷೆಯ ಯೋಜನೆಯೇ "ಶಿಕ್ಷಣವಾಣಿ". ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಲು ಮತ್ತು ಅವುಗಳನ್ನು ನಿಗದಿತ ಅವಧಿಯಲ್ಲಿ ತ್ವರಿತವಾಗಿ ಪರಿಹರಿಸುವ ನಿಟ್ಟಿನಲ್ಲಿ ಕುಂದು-ಕೊರತೆ ನಿವಾರಣೆಗಾಗಿ ಈ ವೇದಿಕೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಸಾರ್ವಜನಿಕರು, ವಿದ್ಯಾರ್ಥಿಗಳು, ಇಲಾಖಾ ಸಿಬ್ಬಂದಿ, ಎಸ್.ಡಿಎಂ.ಸಿ., ಪೋಷಕರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ತಮ್ಮ ಅಹವಾಲನ್ನು ಶಿಕ್ಷಕವಾಣಿ ಮೂಲಕ ನೋಂದಾಯಿಸಬಹುದಾಗಿರುತ್ತದೆ.

**ಶಿಕ್ಷಕ ಮಿತ್ರ ಆ್ಯಪ್ ಮೂಲಕ ಶಿಕ್ಷಕರು ತಮ್ಮ ರಜೆ ಅರ್ಜಿ, ಗಳಿಕೆ ರಜೆ ನಗದೀಕರಣ, ಹಬ್ಬದ ಮುಂಗಡ, ವಿದೇಶಿ ಪ್ರವಾಸ ಕೈಗೊಳ್ಳಲು ನಿರಾಕ್ಷೇಪಣಾ ಪತ್ರ, ಉನ್ನತ ಶಿಕ್ಷಣಕ್ಕೆ ಅನುಮತಿ, ವಾರ್ಷಿಕ ಕಾರ್ಯನಿರ್ವಹಣಾವರದಿ, ನಿವೇಶನ, ಕಟ್ಟಡ, ವಾಹನ ಖರೀದಿಗೆ ಪರವಾನಗಿ, ಸ್ಥಿರ ಮತ್ತು ಚರಾಸ್ತಿ ಖರೀದಿಗೆ ಅನುಮತಿ, ಪಾಸ್ ಪೋರ್ಟ್ ಅಥವಾ ಪಾಸ್ ಪೋರ್ಟ್ ನವೀಕರಣಕ್ಕೆ ನಿರಾಕ್ಷೇಪಣಾ ಪತ್ರ ಇತರೆ ಭತ್ಯೆಗಳು, ಜಿ.ಪಿ.ಎಫ್ ಮುಂಗಡ ಅಥವಾ ಭಾಗಶ: ವಾಪಸಾತಿ ಇವೇ ಮುಂತಾದ ಹಲವಾರು ಸೇವೆಗಳ ಪ್ರಯೋಜನವನ್ನು ಪಡೆದುಕೊಳ್ಳಬಹುದು.**

ಇಲಾಖೆಯು ಅಭಿವೃದ್ಧಿ ಪಡಿಸಿದ ಕುಂದು-ಕೊರತೆ ನಿವಾರಣಾ ವ್ಯವಸ್ಥೆ (Grievance Redressal System) ತಂತ್ರಾಂಶವಾದ ಶಿಕ್ಷಣ ವಾಣಿ ತಂತ್ರಾಂಶದ ಮೂಲಕ ದೂರುದಾರರು ನೇರವಾಗಿ ತಮ್ಮ ಅಹವಾಲನ್ನು ನೋಂದಾಯಿಸಲು ಅವಕಾಶ ಕಲ್ಪಿಸಲಾಗಿದೆ. ಮೊಬೈಲ್ ಸಂಖ್ಯೆಯನ್ನು ದುರುಪಯೋಗ ಪಡಿಸಿಕೊಳ್ಳದಂತೆ ದೂರನ್ನು ದಾಖಲಿಸಲು ದೂರುದಾರರು ತಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಗೆ ಬರುವ ಒಟಿಪಿ ದಾಖಲಿಸುವುದನ್ನು ಕಡ್ಡಾಯಗೊಳಿಸಿದೆ.

ಅಲ್ಲದೆ ಸಾರ್ವಜನಿಕರು ಇಲಾಖೆಯ ವಾಟ್ಸ್ಯಾಪ್ ಸಂಖ್ಯೆ-9483045130 ಗೆ ಅಥವಾ ಇ-ಮೇಲ್ ವಿಳಾಸ shikshanavani.edn@gmail.com ಗೆ ಸಂದೇಶ ಕಳಿಸುವ ಮೂಲಕವೂ ತಮ್ಮ ಅಹವಾಲನ್ನು ನೋಂದಾಯಿಸಬಹುದಾಗಿದೆ.

ತಂತ್ರಜ್ಞಾನ ಬಳಕೆಯ ಅನಾನುಕೂಲ ಇರುವವರಿಗೆ ಕೂಡ ಇಲಾಖೆಯು ಟೋಲ್ ಫ್ರೀ ಸಂಖ್ಯೆ 1800-425-7302 ಗೆ ಕರೆ ಮಾಡಿ ತಮ್ಮ ಅಹವಾಲನ್ನು ನೋಂದಾಯಿಸಲು ಅವಕಾಶ ಕಲ್ಪಿಸಿದೆ. ಸಾರ್ವಜನಿಕರು ಟೋಲ್ ಫ್ರೀ ದೂರವಾಣಿ ಸಂಖ್ಯೆಗೆ ಕರೆ ಮಾಡಿದ ಸಂದರ್ಭದಲ್ಲಿ ಕರೆ ಕೇಂದ್ರದ ನುರಿತ ಸಿಬ್ಬಂದಿಯು ಅಗತ್ಯ ಸಂಪರ್ಕ ಮಾಹಿತಿ ಪಡೆದು ಶಿಕ್ಷಣ ವಾಣಿ ತಂತ್ರಾಂಶದಲ್ಲಿ ಅಹವಾಲನ್ನು ದಾಖಲಿಸುತ್ತಾರೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಸಾರ್ವಜನಿಕರು ಮೇಲೆ ತಿಳಿಸಿದ ಎಲ್ಲಾ ವಿಧಾನಗಳ ಮೂಲಕ ಶಿಕ್ಷಣವಾಣಿಗೆ ಅಹವಾಲನ್ನು ದಾಖಲಿಸುವುದರೊಂದಿಗೆ ಇಲಾಖೆಯ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಪ್ರಗತಿ ಪಡೆಯುವ ಜೊತೆಗೆ ತಮ್ಮ ಅಮೂಲ್ಯ ಸಲಹೆಗಳನ್ನು ದಾಖಲಿಸಲೂ ಅವಕಾಶ ನೀಡಲಾಗಿದೆ.

ಮೇಲೆ ತಿಳಿಸಿದ ಯಾವುದೇ ವಿಧಾನದಿಂದ ಅಹವಾಲು ನೋಂದಾಯಿಸಿದ ತಕ್ಷಣ ದೂರುದಾರರ ಮೊಬೈಲ್ ಸಂಖ್ಯೆಗೆ ದೂರಿನ ನೋಂದಣಿ ಸಂಖ್ಯೆ ರವಾನೆಯಾಗುವುದು. ನಂತರ ಸಂಬಂಧಪಟ್ಟ ಅಧಿಕಾರಿಯ ಲಾಗಿನ್‌ಗೆ ಸ್ವಯಂಚಾಲಿತವಾಗಿ ಅಹವಾಲು ವರ್ಗಾವಣೆಯಾಗುವುದು.

ಮೊಬೈಲ್ ಮೂಲಕವೇ ಸಾರ್ವಜನಿಕರು ತಮ್ಮ ದೂರಿನ ಸ್ಥಿತಿಗತಿಯನ್ನು ತಿಳಿಯಬಹುದಾಗಿರುತ್ತದೆ. ಯಾವುದೇ ಅಹವಾಲು ನಿಗದಿತ ಅವಧಿಯೊಳಗೆ ಪರಿಹರಿಸದಿದ್ದಲ್ಲಿ



Downloaded From: www.kpscvaani.com

ಶಿಕ್ಷಕರು ತಮ್ಮ ಕೆಲಸಗಳಿಗಾಗಿ ಶಾಲೆಗೆ ರಜೆ ಹಾಕಿ ಕಚೇರಿಗೆ ಅಲೆಯುವುದನ್ನು ತಪ್ಪಿಸುವ ಸಲುವಾಗಿಯೇ "ಶಿಕ್ಷಕ ಮಿತ್ರ" ಆ್ಯಪ್ ಅನ್ನು ಇ-ಆಡಳಿತ ಇಲಾಖೆಯಿಂದ ಅಭಿವೃದ್ಧಿ ಪಡಿಸಲಾಗಿದೆ. ಸಾರ್ವಜನಿಕ ವರ್ಗಾವಣೆ ಅರ್ಜಿ ಸೇರಿದಂತೆ ಶಿಕ್ಷಕರ ಬಹುತೇಕ ಸಮಸ್ಯೆಗಳಿಗೆ ಈ ಆ್ಯಪ್‌ನಲ್ಲಿ ಪರಿಹಾರ ಸಿಗಲಿದೆ.

–ಎಸ್. ಸುರೇಶ್ ಕುಮಾರ್, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.



ಅದನ್ನು ಸ್ವಯಂಚಾಲಿತವಾಗಿ ಮುಂದಿನ ಹಂತದ ಅಧಿಕಾರಿಗೆ ವರ್ಗಾಯಿಸಲಾಗುವುದು. ಒಟ್ಟಾರೆಯಾಗಿ ಸಾರ್ವಜನಿಕರ ಅಹವಾಲಿಗೆ ನಿಯಮಾನುಸಾರ ಪರಿಹಾರ ನೀಡಲು ಅಗತ್ಯ ಕ್ರಮ ವಹಿಸಲಾಗಿದೆ.

ಅಹವಾಲಿನ ಪ್ರತಿ ಹಂತದ ಸ್ಥಿತಿಯನ್ನು ಸಂಬಂಧಿಸಿದ ದೂರುದಾರರ ಮೊಬೈಲ್‌ಗೆ ಸಂದೇಶವನ್ನು ಕಳುಹಿಸಲಾಗುವುದು. ಅಹವಾಲಿಗೆ ಸಂಬಂಧಿಸಿದ ಅಧಿಕಾರಿಯು ಪರಿಹಾರ ನೀಡಿ ಮುಕ್ತಾಯಗೊಳಿಸಿದ ನಂತರ ಅವರು ನೀಡಿದ ಪರಿಹಾರವು ತೃಪ್ತಿಕರವಾಗದಿದ್ದಲ್ಲಿ ದೂರುದಾರರಿಗೆ ಅದೇ ದೂರನ್ನು ಪುನ: ತೆರೆಯಲು ಅವಕಾಶ ಕಲ್ಪಿಸಲಾಗಿದೆ. ದೂರುಗಳು ನಿಗದಿತ ಅವಧಿಯಲ್ಲಿ ನಿವಾರಣೆಯಾಗದಿದ್ದಲ್ಲಿ ಸ್ವಯಂಚಾಲಿತವಾಗಿ ಮೇಲಧಿಕಾರಿಗಳು/ಇಲಾಖಾ ಮುಖ್ಯಸ್ಥರಿಗೆ ವರ್ಗಾವಣೆಯಾಗುತ್ತದೆ.

ಶಿಕ್ಷಣ ವಾಣಿ ತಂತ್ರಾಂಶವನ್ನು ಸಾರ್ವಜನಿಕ ಸ್ನೇಹಿಯಾಗಿ ಅಭಿವೃದ್ಧಿ ಪಡಿಸಲಾಗಿದೆ. ತಮ್ಮ ಅಹವಾಲನ್ನು ನಿಖರವಾಗಿ ದಾಖಲಿಸಲು ಅನುಕೂಲವಾಗುವಂತೆ ನಿರೀಕ್ಷಿತ ದೂರುದಾರರನ್ನು ಸಮುದಾಯ, ಶಾಲೆ, ಸಿಬ್ಬಂದಿ, ವಿದ್ಯಾರ್ಥಿಗಳು, ಎಸ್.ಡಿ.ಎಂ.ಸಿ., ಎಂದು ಐದು ವರ್ಗಗಳಾಗಿ ವಿಂಗಡಿಸಿ ಅವುಗಳನ್ನು ವಿಷಯಾಧಾರಿತವಾಗಿ ಉಪವರ್ಗಗಳಾಗಿ ಪಟ್ಟಿ ಮಾಡಲಾಗಿದೆ.

ಸರ್ಕಾರಿ, ಖಾಸಗಿ ಅನುದಾನಿತ, ಖಾಸಗಿ ಅನುದಾನರಹಿತ ಶಾಲೆಗಳು ಹಾಗೂ ಶಿಕ್ಷಣ ಇಲಾಖೆಯ ಕಛೇರಿಗಳಿಗೆ ಸಂಬಂಧಿಸಿದ ಶಾಲೆಯ ಭೌತಿಕ ಸೌಲಭ್ಯ, ಶೈಕ್ಷಣಿಕ ಸಮಸ್ಯೆಗಳು, ಸರ್ಕಾರದಿಂದ ನೀಡಲಾಗುತ್ತಿರುವ ಪ್ರೋತ್ಸಾಹದಾಯಕ ಯೋಜನೆಗಳ ಬಗ್ಗೆ, ಆಡಳಿತಾತ್ಮಕ ವಿಷಯಗಳು, ಶಾಲೆ ಅಥವಾ ಸಿಬ್ಬಂದಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಾರ್ವಜನಿಕರು ತಮ್ಮ ಅಗತ್ಯತೆಗನುಗುಣವಾಗಿ ಆಯ್ಕೆ ಮಾಡಿಕೊಂಡು ಅಹವಾಲನ್ನು ದಾಖಲಿಸಬಹುದಾಗಿರುತ್ತದೆ.

ವಿದ್ಯಾರ್ಥಿಗಳು ತಮ್ಮ ಶಾಲೆಯ ಭೌತಿಕ ಸೌಲಭ್ಯಗಳು, ಶೈಕ್ಷಣಿಕ ಸೌಲಭ್ಯಗಳು, ಬೋಧನಾ ವಿಧಾನ, ಶಾಲಾ ಸಿಬ್ಬಂದಿಯ ದುರ್ವರ್ತನೆ, ಶಾಲೆಯ ಅಗತ್ಯತೆಗಳು, ಮಕ್ಕಳ ಹಕ್ಕುಗಳು ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮ ಅಹವಾಲನ್ನು ದಾಖಲಿಸಬಹುದಾಗಿರುತ್ತದೆ.

ಇಲಾಖಾ ಸಿಬ್ಬಂದಿಯು ತಮ್ಮ ದೂರುಗಳನ್ನು ದಾಖಲಿಸುವ ಸಂದರ್ಭದಲ್ಲಿ ಮೇಲ್ಕಂಡ ಎಲ್ಲಾ ಅಂಶಗಳ ಜೊತೆಗೆ ತಮ್ಮ ಸೇವಾ ಸೌಲಭ್ಯಗಳ ನಿಗದಿತ ಅವಧಿಯಲ್ಲಿ ದೊರೆಯಲು ಉಂಟಾಗಿರುವ ಅಡೆತಡೆಗಳಿಗೆ ಸಂಬಂಧಿಸಿದಂತೆಯೂ ಅಹವಾಲು ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ.

ಮನವಿದಾರರ ಅಗತ್ಯತೆಯಂತೆ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ವಿಷಯಗಳನ್ನು ಸೇರಿಸಲು ಅವಕಾಶವಿರುತ್ತದೆ.

ವಿದ್ಯಾರ್ಥಿಗಳು ತಮ್ಮ ಶಾಲೆಯ ಭೌತಿಕ ಸೌಲಭ್ಯಗಳು, ಶೈಕ್ಷಣಿಕ ಸೌಲಭ್ಯಗಳು, ಬೋಧನಾ ವಿಧಾನ, ಶಾಲಾ ಸಿಬ್ಬಂದಿಯ ದುರ್ವರ್ತನೆ, ಶಾಲೆಯ ಅಗತ್ಯತೆಗಳು, ಮಕ್ಕಳ ಹಕ್ಕುಗಳು ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮ ಅಹವಾಲನ್ನು ದಾಖಲಿಸಬಹುದಾಗಿರುತ್ತದೆ.



Downloaded From: www.kpscvaani.com



**"ಶಿಕ್ಷಣ ವಾಣಿ"** ಸಹಾಯವಾಣಿ ಕೇಂದ್ರವು 24 ಗಂಟೆ ಕಾರ್ಯನಿರ್ವಹಿಸಲಿದ್ದು, ಬೆಳಿಗ್ಗೆ 09–00 ಗಂಟೆಯಿಂದ ಸಾಯಂಕಾಲ 7.00 ಗಂಟೆಯವರೆಗೆ ಎರಡು ಶಿಫ್ಟ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತದೆ. ಪ್ರಾರಂಭಿಕ ಹಂತದಲ್ಲಿ ಐದು ಜನ ತರಬೇತಿ ಹೊಂದಿದ ಸಿಬ್ಬಂದಿಯು ಕರೆ ಕೇಂದ್ರದಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ. ಅಗತ್ಯತೆಗನುಗುಣವಾಗಿ ಮುಂದಿನ ದಿನಗಳಲ್ಲಿ ಸಿಬ್ಬಂದಿ ಸಂಖ್ಯೆಯನ್ನು ಇಲಾಖೆಯು ಹೆಚ್ಚಿಸಲಿದೆ.

ಶಿಕ್ಷಣ ವಾಣಿಯ ಮೆಲ್ವಿಚಾರಣೆಗಾಗಿ ಇಲಾಖೆಯ ಇಬ್ಬರು ಹಿರಿಯ ಸಹಾಯಕ ನಿರ್ದೇಶಕರು ಕಾರ್ಯ ನಿರ್ವಹಿಸಲಿದ್ದಾರೆ. ಒಟ್ಟಾರೆಯಾಗಿ ಪ್ರತಿ ಹಂತದಲ್ಲಿಯೂ ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಶಿಕ್ಷಣ ವಾಣಿಯು ಕಾರ್ಯನಿರ್ವಹಿಸಲಿದೆ.

**ಪರಿವರ್ತನ (EM Dashboard)**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರಾದ ಎಸ್. ಸುರೇಶ್ ಕುಮಾರ್ ರವರು ರಾಜ್ಯ ಸರ್ಕಾರದ ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಇಲಾಖೆಯ ಎಲ್ಲಾ ಯೋಜನೆಗಳು ಮತ್ತು ಕಾರ್ಯಕ್ರಮಗಳ ಪ್ರಗತಿ ಮತ್ತು ಕಾರ್ಯಕ್ಷಮತೆಯ ಸಂಪೂರ್ಣ ಚಿತ್ರಣ ಮತ್ತು ಒಳನೋಟಕ್ಕಾಗಿ ಒಂದು ಡ್ಯಾಶ್‌ಬೋರ್ಡ್‌ನ ಅಗತ್ಯತೆಯ ಕುರಿತು ಚಿಂತನೆ ಮಾಡಿದ್ದರು. ಅದರಂತೆ ಪ್ರಸ್ತುತ ಇಲಾಖೆಯ ಎಲ್ಲಾ ಯೋಜನೆಗಳು ಮತ್ತು ಕಾರ್ಯಕ್ರಮಗಳ ಪ್ರಗತಿ ಮತ್ತು ಕಾರ್ಯಕ್ಷಮತೆಯ ಸಂಪೂರ್ಣ ಚಿತ್ರಣವನ್ನು ನೀಡಲು "ಪರಿವರ್ತನ" ವೆಬ್ ಪೋರ್ಟಲ್ (ಇ.ಎಂ. ಡ್ಯಾಶ್ ಬೋರ್ಡ್) ಅನ್ನು ಅಭಿವೃದ್ಧಿ ಪಡಿಸಲಾಗಿದೆ. ಈ ಮೊದಲು ಇಲಾಖೆಯ ವಿವಿಧ ನಿರ್ದೇಶನಾಲಯಗಳು ಬಳಸುತ್ತಿರುವ ವಿವಿಧ ತಂತ್ರಾಂಶಗಳ ಮೂಲಕ ಮಾಹಿತಿಯನ್ನು ಪಡೆದುಕೊಳ್ಳಬೇಕಿತ್ತು.

ಪರಿವರ್ತನ (ಇ.ಎಮ್.ಡ್ಯಾಶ್ ಬೋರ್ಡ್) ದಲ್ಲಿ ಪ್ರಸ್ತುತ ಇಲಾಖೆಯಲ್ಲಿ ಬಳಸುತ್ತಿರುವ ಬಹು ಐಟಿ ವ್ಯವಸ್ಥೆಗಳಿಂದ ಸಂಬಂಧಿಸಿದ ಮಾಹಿತಿಯನ್ನು ಸಂಯೋಜಿಸಿ ಇಲಾಖೆಯ ಉನ್ನತ ಮಟ್ಟದ ನಿರ್ವಹಣೆಯಲ್ಲಿರುವವರಿಗೆ ಅದನ್ನು ಪ್ರಸ್ತುತಪಡಿಸಿ ಇಲಾಖೆಯ ಕಾರ್ಯಕ್ಷಮತೆ ಮತ್ತು ಪ್ರಗತಿಯ ಒಂದು ನೋಟವನ್ನು ನೀಡುವುದರೊಂದಿಗೆ ಮತ್ತಷ್ಟು ಆಳಕ್ಕೆ ಇಳಿದು ಸೂಕ್ಷ್ಮ ಮಟ್ಟದ ಮಾಹಿತಿಯನ್ನು ವೀಕ್ಷಿಸಲು ಅವಕಾಶವಿದೆ.

ಪರಿವರ್ತನ(ಇ.ಎಮ್.ಡ್ಯಾಶ್‌ಬೋರ್ಡ್)ದಲ್ಲಿ ಈ ಕೆಳಗಿನ ವಿಚಾರವಾಗಿ ಮಾಹಿತಿಯನ್ನು ಪಡೆಯಬಹುದಾಗಿದೆ.

**ಸಚಿವರ ನಿರ್ದೇಶನಗಳು:** ಸಚಿವರು ಹೊರಡಿಸಿದ ನಿರ್ದೇಶನಗಳನ್ನು ಇಲ್ಲಿ ನಮೂದಿಸಬಹುದಾಗಿದ್ದು, ಇಲಾಖೆಯ ಸಂಬಂಧಿಸಿದ ಅಧಿಕಾರಿಗಳಿಗೆ ಸಮಯ ನಿಗದಿಗೊಳಿಸಿ ಈ ನಿರ್ದೇಶನವನ್ನು ಕಳುಹಿಸಿ, ಅಧಿಕಾರಿಗಳು ತಮ್ಮ ಅನುಪಾಲನೆಯನ್ನು ನಮೂದಿಸಬಹುದಾಗಿದೆ. ಹೊರಡಿಸಿರುವ ನಿರ್ದೇಶನಗಳಿಗೆ ಸಚಿವರ ಕಚೇರಿಯಲ್ಲಿ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಬಹುದು.

**ಶಾಲೆಗಳು:** ಈ ವಿಭಾಗವು ಶಾಲೆಗಳಿಗೆ ಸಂಬಂಧಿಸಿದ ವಿವರಗಳನ್ನು ಒದಗಿಸುತ್ತದೆ. ಶಾಲೆಗಳ ಸಂಖ್ಯೆ, ಶಾಲೆಗಳಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳು, ಶಾಲಾ ಸೌಲಭ್ಯಗಳು ಮತ್ತು ಶಾಲಾ ಶಿಕ್ಷಕರ ಕುರಿತ ಮಾಹಿತಿಯನ್ನು ಡ್ಯಾಶ್‌ಬೋರ್ಡ್‌ನಲ್ಲಿ ಡ್ರಿಲ್–ಡೌನ್ ಮಾಡುವ ಮೂಲಕ ಶೈಕ್ಷಣಿಕ ಜಿಲ್ಲಾ ಹಂತ ಮತ್ತು ಬ್ಲಾಕ್ ಹಂತದವರೆಗಿನ ವಿವರಗಳನ್ನು ಪಡೆಯಬಹುದಾಗಿದೆ.

**ವಿದ್ಯಾರ್ಥಿಗಳು:** ಈ ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿವರಗಳನ್ನು ಒದಗಿಸುತ್ತದೆ. 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳ ಸಾಧನೆಯ ಮಾಹಿತಿ ಲಭ್ಯವಿರುತ್ತದೆ.



Downloaded From: www.kpscvaani.com




ಜಿಲ್ಲಾವಾರು ಮತ್ತು ಬ್ಲಾಕ್‌ವಾರು ಮಾಹಿತಿಯೊಂದಿಗೆ, ಶಾಲೆಗಳ ವಿಧಗಳು, ಪ್ರಾಕಾರಗಳು ಮತ್ತು ಮಾಧ್ಯಮಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದು.

**ಶಿಕ್ಷಕರು(ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳು):** ಶಿಕ್ಷಕರಿಗೆ ಸಂಬಂಧಿಸಿದ ವಿವರಗಳನ್ನು ಈ ವಿಭಾಗವು ಒದಗಿಸುತ್ತದೆ. ಶಿಕ್ಷಕರ ಸಂಖ್ಯೆ, ವಿಷಯವಾರು ಶಿಕ್ಷಕರ ಸಂಖ್ಯೆ, ಶೈಕ್ಷಣಿಕ ಅರ್ಹತೆ, ಶಿಕ್ಷಕರ ಅನುಭವ, ಶಿಕ್ಷಕರ ತರಬೇತಿ ಮತ್ತು ಶಿಕ್ಷಕ ಮಿತ್ರ ಕುರಿತು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದವರೆಗಿನ ವಿವರವನ್ನು ಪಡೆದುಕೊಳ್ಳಲು ಅವಕಾಶವಿದೆ.

**ಪರೀಕ್ಷೆಗಳು:** ಈ ವಿಭಾಗವು ಎಸ್.ಎಸ್.ಎಲ್.ಸಿ ಪರೀಕ್ಷಾ ಮಂಡಳಿಗೆ ಸಂಬಂಧಿಸಿದ ವಿವರಗಳನ್ನು ಒದಗಿಸುತ್ತದೆ. ಉದಾಹರಣೆಗೆ – ಒಟ್ಟಾರೆ ಫಲಿತಾಂಶಗಳು, ಶೇಕಡಾವಾರು ಉತ್ತೀರ್ಣ, ಶಾಲೆಯ ಪ್ರಕಾರವಾರು , ಲಿಂಗಾವಾರು , ಸಾಮಾಜಿಕ ವರ್ಗವಾರು, ಪ್ರದೇಶವಾರು (ನಗರ/ಗ್ರಾಮೀಣ), ಮಾಧ್ಯಮವಾರು, ಗ್ರೇಡ್‌ವಾರು ಫಲಿತಾಂಶ, ಜಿಲ್ಲಾವಾರು ಫಲಿತಾಂಶ ಹಾಗೂ ಪದವಿಪೂರ್ವ ಶಿಕ್ಷಣ ಮಂಡಳಿಯ ಫಲಿತಾಂಶವನ್ನು ಕಾಲೇಜುವಾರು, ಮಾಧ್ಯಮವಾರು, ಲಿಂಗವಾರು ಮತ್ತು ಸ್ಟ್ರೀಮ್‌ವಾರು ಒದಗಿಸುತ್ತದೆ.

**ಇಲಾಖೆಯ ಆಡಳಿತ:** ಈ ವಿಭಾಗದಲ್ಲಿ ಮಧ್ಯಾಹ್ನ ಉಪಹಾರ ಯೋಜನೆಗೆ ಸಂಬಂಧಿಸಿದ ಜಿಲ್ಲಾವಾರು ಅನುದಾನದ ವಿವರ, ದಾಖಲಾತಿ ವಿವರ ಮತ್ತು ಅಡುಗೆಯವರ(ಸಿ.ಸಿ.ಹೆಚ್) ವಿವರಗಳು ಲಭ್ಯವಾಗುತ್ತದೆ.

**ಯೋಜನೆ ಮತ್ತು ಆಯವ್ಯಯ:** ಇಲಾಖೆಯ ವಿವಿಧ ಯೋಜನೆಗಳು ಮತ್ತು ಆಯವ್ಯಯದಡಿಯಲ್ಲಿ ಮಾಡಲಾದ ಈ ಪ್ರಕಾರದ ಅವಕಾಶಗಳ ವಿವರ ಲಭ್ಯವಿರುತ್ತದೆ. ಮುಂದುವರೆದ ಯೋಜನೆಗಳ ವರ್ಷವಾರು ಅನುದಾನದ ವಿವರ, ಅನುದಾನ ಬಿಡುಗಡೆ ಮತ್ತು  ಬಳಕೆಯ ಮಾಹಿತಿ, ಹೊಸ ಯೋಜನೆಗಳ ಮಾಹಿತಿ, ನೆರೆ ಪೀಡಿತ ಶಾಲೆಗಳ ಪುನರ್ ನಿರ್ಮಾಣ, ಈ ಎಲ್ಲಾ ವಿವರಗಳು ಜಿಲ್ಲಾ, ಬ್ಲಾಕ್ ಮತ್ತು ಶಾಲಾ ಹಂತದವರೆಗೆ ಲಭ್ಯವಾಗುತ್ತದೆ.

**ಲೋಕ ಶಿಕ್ಷಣ:** ಈ ವಿಭಾಗದಲ್ಲಿ ಲೋಕ ಶಿಕ್ಷಣ ನಿರ್ದೇಶನಾಲಯಕ್ಕೆ ಸಂಬಂಧಿಸಿದ ಆರ್ಥಿಕ ಅಂಶಗಳು ಮತ್ತು ಸಾಕ್ಷರತಾ ಕಾರ್ಯಕ್ರಮಗಳ ಮಾಹಿತಿ ಇರುತ್ತದೆ. ಯೋಜನಾವಾರು ಅನುದಾನದ ವಿವರ, ಬಿಡುಗಡೆಯಾದ ಅನುದಾನ ಮತ್ತು ವರ್ಷವಾರು ಅನುದಾನದ ಬಳಕೆ ಹಾಗೂ ಸಾಕ್ಷರತಾ ಕಾರ್ಯಕ್ರಮಗಳ ಅನುಷ್ಠಾನದ ವಿವರಗಳಿರುತ್ತದೆ.

**ಗ್ರಂಥಾಲಯ:** ಗ್ರಂಥಾಲಯ ಇಲಾಖೆಗೆ ಸಂಬಂಧಿಸಿದ ವಿವರ ಈ ವಿಭಾಗದಲ್ಲಿ ಲಭ್ಯವಾಗುತ್ತದೆ. ಡಿಜಿಟಲ್ ಲೈಬ್ರರಿ ಅನುಷ್ಠಾನಕ್ಕೆ ಅನುಮೋದಿತ ಅನುದಾನ, ಬಿಡುಗಡೆ ಹಾಗೂ ವೆಚ್ಚ ಹಾಗೂ ಜಿಲ್ಲಾವಾರು ವಿವಿಧ ಗ್ರಂಥಾಲಯಗಳ ವಿವರವನ್ನೂ ಇಲ್ಲಿ ಪಡೆಯಬಹುದು.

**ವಿಶ್ಲೇಷಣೆ:** ಈ ವಿಭಾಗದಲ್ಲಿ ದತ್ತಾಂಶದ ಹೋಲಿಕೆಯನ್ನು ತೋರಿಸುವ ವಿಶ್ಲೇಷಣಾತ್ಮಕ ಪಟ್ಟಿಯನ್ನು ಒದಗಿಸುತ್ತದೆ. ಉದಾಹರಣೆ– ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿನ ಶಾಲೆಗಳ(ಪ್ರಕಾರಗಳು) ಸರಾಸರಿ ಸಂಖ್ಯೆ, ಪ್ರತಿ ಶಾಲೆಗೆ ತರಗತಿ ಕೊಠಡಿಗಳ ಸರಾಸರಿ ಸಂಖ್ಯೆ, ಪ್ರತಿ ಶಾಲೆಗೆ ಲಭ್ಯವಿರುವ ಶೌಚಾಲಯಗಳ ಸರಾಸರಿ, ಪ್ರತಿ ಶಾಲೆಗೆ ಬಾಲಕಿಯರ/ಬಾಲಕರ ಸರಾಸರಿ ಇತ್ಯಾದಿ ವಿವರಗಳು ಲಭ್ಯವಿರುತ್ತದೆ.

ಒಟ್ಟಿನಲ್ಲಿ ಡ್ಯಾಶ್ ಬೋರ್ಡ್‌ನಲ್ಲಿ ಇಲಾಖೆಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಪರಿಶೀಲನೆ ನಡೆಯಲಿದೆ. ತಂತ್ರಜ್ಞಾನ ಆಧಾರಿತ ಈ ವ್ಯವಸ್ಥೆಯಿಂದ ಶಿಕ್ಷಕರು ಇನ್ನು ಮುಂದೆ ತಮ್ಮ ಅಗತ್ಯಗಳಿಗೆ ಶಾಲಾ ಸಮಯದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಇಲಾಖೆಯ ಕಚೇರಿಗಳಿಗೆ ಅಲೆದಾಡುವುದು ತಪ್ಪಲಿದೆ. ಇದರಿಂದ ಅವರು ಪಾಠ ಪ್ರವಚನಗಳ ಕಡೆಗೆ ಹೆಚ್ಚು ಗಮನ ನೀಡಲು ಸಾಧ್ಯವಾಗಲಿದೆ.



Downloaded From: www.kpscvaani.com



# ಸಾಂಸ್ಕೃತಿಕ ನಗರಿಯಲ್ಲಿ ಡಾ. ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕೆ ಶಂಕುಸ್ಥಾಪನೆ





**ಸಾಂಸ್ಕೃತಿಕ ನಗರಿ ಮೈಸೂರಿನ ಹೊರವಲಯದ ಹಾಲಾಳು ಗ್ರಾಮದಲ್ಲಿ ಡಾ.ವಿಷ್ಣುವರ್ಧನ್ ಸ್ಮಾರಕ ಭವನ ನಿರ್ಮಾಣಕ್ಕೆ ಸರ್ಕಾರವು ಅಡಿಗಲ್ಲು ಹಾಕುವ ಮೂಲಕ ವಿಷ್ಣುವರ್ಧನ್ ಅಭಿಮಾನಿಗಳಿಗೆ ಮತ್ತು ಕುಟುಬಂಸ್ಥರಿಗೆ ಸಂತಸವನ್ನು ತಂದುಕೊಟ್ಟಿದೆ.**

ಕೆ.ಎನ್. ವಿಜಯಾನಂದ

ಮೇರು ನಟ ಡಾ.ವಿಷ್ಣುವರ್ಧನ್ ಅವರ ಅಪಾರ ಅಭಿಮಾನಿಗಳು ಮತ್ತು ಕುಟುಂಬದವರ ಬಹುವರ್ಷಗಳ ಬೇಡಿಕೆಯಾದ ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕೆ ಸೆಪ್ಟೆಂಬರ್ 15 ರಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಆನ್‌ಲೈನ್ ಮೂಲಕ ಶಂಕುಸ್ಥಾಪನೆಯನ್ನು ನೆರವೇರಿಸಿದರು.

ಡಿಸೆಂಬರ್ 30 2009 ರಂದು ಮೈಸೂರಿನಲ್ಲಿ ನಿಧನರಾದ ಡಾ.ವಿಷ್ಣುವರ್ಧನ್ ಅವರ ಅಂತ್ಯಕ್ರಿಯೆಯನ್ನು ಬೆಂಗಳೂರಿನ ಕೆಂಗೇರಿ ಬಳಿ ಇರುವ ಅಭಿಮಾನ್ ಸ್ಟುಡಿಯೋದಲ್ಲಿ ನೆರವೇರಿಸಲಾಯಿತು. ಅವರ ಹೆಸರಿನಲ್ಲಿ ಸ್ಮಾರಕವನ್ನು ನಿರ್ಮಾಣ ಮಾಡುವಂತೆ ಅಭಿಮಾನಿಗಳು ಒತ್ತಾಯಿಸಲಾರಂಭಿಸಿದರು.

ಕನ್ನಡ ಸಿನಿಮಾರಂಗದಲ್ಲಿ ಡಾ. ರಾಜ್‌ಕುಮಾರ್ ನಂತರದ ಸ್ಥಾನವನ್ನು ಡಾ.ವಿಷ್ಣುವರ್ಧನ್ ಅವರು ಪಡೆದುಕೊಳ್ಳುತ್ತಾರೆ. ತಮ್ಮ ನಟನಾ ಕೌಶಲ್ಯದಿಂದ ಸುಮಾರು ನಾಲ್ಕು ದಶಕಗಳ ಕಾಲ ಕನ್ನಡ ಚಲನಚಿತ್ರರಂಗದಲ್ಲಿ ತೊಡಗಿದ್ದ ಅವರು, ಅಪಾರ ಅಭಿಮಾನಿ ಬಳಗವನ್ನು ಹೊಂದಿದ್ದರು. ಅಭಿಮಾನಿಗಳು ಅವರಿಗೆ "ಅಭಿನವ ಭಾರ್ಗವ", "ಸಾಹಸಸಿಂಹ" ಎಂಬ ಬಿರುದನ್ನು ನೀಡಿದ್ದರು. ಅಭಿಮಾನಿಗಳು ಮತ್ತು ಕುಟುಂಬ ಸದಸ್ಯರ ಆಸೆಯಂತೆ ವಿಷ್ಣುವರ್ಧನ್ ಅವರ ಕಲಾ ಸೇವೆಯನ್ನು ಪರಿಗಣಿಸಿ ರಾಜ್ಯ ಸರ್ಕಾರವು ಸ್ಮಾರಕ ನಿರ್ಮಾಣ ಮಾಡುವ ನಿರ್ಧಾರವನ್ನು ಕೈಗೊಂಡಿತು. ಹಾಗಾಗಿ 2010–11 ನೇ ಸಾಲಿನ ಆಯವ್ಯಯದಲ್ಲಿ ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕೆ 11 ಕೋಟಿ ರೂ ಅನುದಾನವನ್ನು ಕೂಡ ಒದಗಿಸಲಾಯಿತು.

ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕೆ ಭೂಮಿ ಒದಗಿಸುವ ವಿಚಾರವನ್ನು ಒಳಗೊಂಡಂತೆ ಹಲವಾರು ಸಮಸ್ಯೆಗಳು ಎದುರಾದ ಹಿನ್ನೆಲೆಯಲ್ಲಿ ವಿಷ್ಣುವರ್ಧನ್ ಸ್ಮಾರಕ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಸಾಧ್ಯವಾಗಿರಲಿಲ್ಲ. ಅವರ ಸ್ಮಾರಕವನ್ನು ಬೆಂಗಳೂರಿನಲ್ಲಿ ಮಾಡಬೇಕೆಂದು ಕೆಲವು ಅಭಿಮಾನಿಗಳು ಅಭಿಪ್ರಾಯಪಟ್ಟರೆ, ಕೆಲವರು ಅವರ ಹುಟ್ಟುರಾದ ಮೈಸೂರಿನಲ್ಲೇ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿದರು. ಆದರೆ ವಿಷ್ಣುವರ್ಧನ್ ಅವರಿಗೆ ತಮ್ಮ ಹುಟ್ಟೂರಾದ ಮೈಸೂರು ಅಂದರೆ ತುಂಬಾ ಅಚ್ಚುಮೆಚ್ಚಿನ ಜಾಗವಾಗಿತ್ತು. ಅವರು ತಮ್ಮ ಅಂತಿಮ ದಿನಗಳನ್ನು ಸಹ ಮೈಸೂರಿನಲ್ಲೇ ಕಳೆದಿದ್ದರು. ಹಾಗಾಗಿ ಅವರ ಕುಟುಂಬಸ್ಥರು ಮೈಸೂರಿನಲ್ಲೇ ಸ್ಮಾರಕ ನಿರ್ಮಾಣ ಮಾಡುವುದು ಸೂಕ್ತ ಎಂದು ಸರ್ಕಾರಕ್ಕೆ ಮನವಿ ಮಾಡಿದರು.



Downloaded From: www.kpscvaani.com

**ಇಂದಿನ ದಿನವನ್ನು ನಾನು ಎಂದೆಂದಿಗೂ ಮರೆಯಲಾಗದು. ನಮ್ಮ ಕುಟುಂಬದವರು ಸತತ ಹತ್ತು ವರ್ಷಗಳಿಂದ ಅವರ ಹೆಸರಿನಲ್ಲಿ ಸ್ಮಾರಕ ನಿರ್ಮಾಣ ಮಾಡಲು ಪ್ರಯತ್ನಪಟ್ಟೆವು. ಅದಕ್ಕೆ ಇಂದು ಪ್ರತಿಫಲ ಸಿಕ್ಕಿತು. ಒಂದು ಒಳ್ಳೆಯ ಕೆಲಸ ಆಗಬೇಕಾದರೆ ನೋವನ್ನು ತಡೆದುಕೊಳ್ಳಲೇ ಬೇಕು. ತಡವಾಗಿದ್ದಕ್ಕೆ ನಾನು ಯಾರನ್ನೂ ದೂಷಿಸುವುದಿಲ್ಲ. ತಾಳ್ಮೆಯಿಂದ ನಮ್ಮ ಬೇಡಿಕೆಯನ್ನು ಆಲಿಸಿ, ಅದನ್ನು ಕಾರ್ಯರೂಪಕ್ಕೆ ತಂದುಕೊಟ್ಟ ಮುಖ್ಯಮಂತ್ರಿಗಳಿಗೆ, ಸಹಕರಿಸಿದ ಅಭಿಮಾನಿಗಳಿಗೆ ಹಾಗೂ ಅಧಿಕಾರಿಗಳಿಗೆ ಧನ್ಯವಾದಗಳು.**

**–ಡಾ.ಭಾರತಿ ವಿಷ್ಣುವರ್ಧನ್**

ಹಿಂದಿನ ಸರ್ಕಾರವು ಅವರ ಮನವಿಯಂತೆ ಐತಿಹಾಸಿಕ ಹಿನ್ನೆಲೆ ಇರುವ ಮೈಸೂರು ತಾಲೂಕಿನ ಕಸಬಾ ಹೋಬಳಿಯ ಹಾಲಾಳು ಗ್ರಾಮದ ಉದ್ಬೂರು ಗೇಟ್ ಬಳಿ 5 ಎಕರೆ ಜಾಗವನ್ನು ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕೆ ಜಾಗವನ್ನು ಮಂಜೂರು ಮಾಡಿತು. ಜಾಗ ಮಂಜೂರಾದರೂ ಕೂಡ ನಿರ್ಮಾಣ ಕಾಮಗಾರಿಯನ್ನು ಶೀಘ್ರವಾಗಿ ಪ್ರಾರಂಭಿಸಲು ಸಾಧ್ಯವಾಗಲಿಲ್ಲ. ಹೊಸ ಸರ್ಕಾರ ರಚನೆಯಾಗಿ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸದ ನಂತರ ವಿಷ್ಣುವರ್ಧನ್ ಪತ್ನಿ ಡಾ. ಭಾರತಿ ವಿಷ್ಣುವರ್ಧನ್, ಅಳಿಯ ಅನಿರುದ್ಧ ಅವರು ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಸ್ಮಾರಕ ನಿರ್ಮಾಣ ಕಾರ್ಯ ಬಹುವರ್ಷಗಳಿಂದ ಆರಂಭವಾಗದಿರುವ ಬಗ್ಗೆ ಚರ್ಚೆ ನಡೆಸಿದರು. ಮುಖ್ಯಮಂತ್ರಿಗಳು ಕೂಡಲೇ ಕಾಮಗಾರಿ ಆರಂಭಿಸುವ ಭರವಸೆಯನ್ನು ನೀಡಿದರು. ಆದರೆ ಪ್ರವಾಹ, ಕೋವಿಡ್–19 ನಿಂದಾಗಿ ಕಾಮಗಾರಿಗೆ ಚಾಲನೆ ನೀಡಲು ಸಾಧ್ಯವಾಗಿರಲಿಲ್ಲ.

ಈಗಷ್ಟೇ ಜನಜೀವನ ಸಹಜ ಸ್ಥಿತಿಗೆ ಬಂದಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ವರ್ಚುವಲ್ ವೇದಿಕೆ ಮೂಲಕ ಶುಭಕೋರಿ, ಸ್ಮಾರಕ ನಿರ್ಮಾಣ ಕಾರ್ಯ ಆದಷ್ಟು ಬೇಗ ಪೂರ್ಣಗೊಳಿಸಬೇಕು. ಇನ್ನೂರಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿರುವ ವಿಷ್ಣುವಧನ್ ಅವರು ಕನ್ನಡ ನಾಡು ನುಡಿಗೆ ನೀಡಿರುವ ಕೊಡುಗೆ ಅಪಾರವಾದುದು. ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ವಿಷ್ಣುವರ್ಧನ್ ಸ್ಮಾರಕ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಇದರಿಂದ ಅವರ ಅಪಾರ ಅಭಿಮಾನಿಗಳಿಗೆ ಸಂತೋಷವಾಗಿದೆ. ಅಲ್ಲದೆ ಡಾ.ವಿಷ್ಣುವರ್ಧನ್ ಅವರ ತವರು ಜಿಲ್ಲೆ ಮೈಸೂರಿನಲ್ಲಿ ಅವರ ಸ್ಮಾರಕ ನಿರ್ಮಾಣವಾಗುತ್ತಿರುವುದು ಬಹಳ ಸಂತೋಷವನ್ನುಂಟು ಮಾಡಿದೆ. ನಾಗರಹಾವು ಚಿತ್ರದಿಂದ ಆಪ್ತರಕ್ಷಕ ಚಿತ್ರದವರೆಗೆ ಅವರು ಅನೇಕ ಪಾತ್ರಗಳಲ್ಲಿ ನಟಿಸುವ ಮೂಲಕ ಎಲ್ಲಾ ವರ್ಗದ ಜನರ ಹೃದಯ ಸಿಂಹಾಸನದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ ಎಂದರು. ವಿಷ್ಣುವರ್ಧನ್ ಅವರು ಅಪ್ರತಿಮ ಕಲಾವಿದ ಮಾತ್ರವಲ್ಲದೆ ತಮ್ಮ ವ್ಯಕ್ತಿತ್ವದಲ್ಲೂ ಬಹಳಷ್ಟು ಶ್ರೇಷ್ಠ ಗುಣಗಳನ್ನು ಹೊಂದಿದ್ದು, ಯುವಜನರಿಗೆ ಸ್ಫೂರ್ತಿಯ ಸೆಲೆಯಾಗಿದ್ದರು ಎಂದು ಅಭಿಪ್ರಾಯಪಟ್ಟರು. ಸ್ಮಾರಕ ನಿರ್ಮಾಣ ಈಗಾಗಲೇ ಬಹಳಷ್ಟು ತಡವಾಗಿದೆ. ಆದ್ದರಿಂದ ಕಾಮಗಾರಿಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಭರವಸೆ ನೀಡಿದರು.

**ಕನ್ನಡ ಸೇರಿದಂತೆ ತಮಿಳು, ತೆಲುಗು, ಮಲಯಾಳಂ, ಹಿಂದಿ ಭಾಷೆಗಳಲ್ಲಿ ನಟಿಸಿದ್ದ ಡಾ.ವಿಷ್ಣುವರ್ಧನ್ ಅವರಿಗೆ ಬೆಂಗಳೂರು ವಿಶ್ವವಿದ್ಯಾಲಯವು 2005ರಲ್ಲಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ ಹಾಗೂ ಇವರ ಸ್ಮರಣಾರ್ಥ ಭಾರತ ಸರ್ಕಾರ 2013ರಲ್ಲಿ ಅಂಚೆ ಚೀಟಿಯನ್ನು ಸಹ ಹೊರತಂದಿದೆ.**

ಸತತ 38 ವರ್ಷಗಳ ಕಾಲ ನೂರಾರು ಸದಭಿರುಚಿಯ ಚಿತ್ರಗಳನ್ನು ಮಾಡುವ ಮೂಲಕ ಜನರ ಮನಸ್ಸಿನಲ್ಲಿ ಹೇಗೆ ಶಾಶ್ವತವಾದ ಸ್ಥಾನವನ್ನು ಪಡೆದುಕೊಂಡಿದ್ದಾರೆಯೋ ಹಾಗೆಯೇ ಅವರ ಸ್ಮರಣಾರ್ಥ ನಿರ್ಮಾಣ ಮಾಡಲಾಗುತ್ತಿರುವ ಸ್ಮಾರಕವು ಪ್ರಖ್ಯಾತಿಯನ್ನು ಹೊಂದುವ ಮೂಲಕ ಯುವ ಪ್ರತಿಭೆಗಳು ಬೆಳೆಯಲು ಸಹಾಯವಾಗಲಿ ಎಂದು ಹಾರೈಸಿದರು.

ಆನ್‌ಲೈನ್ ಸಂಪರ್ಕದಲ್ಲಿ ಮುಖ್ಯಮಂತ್ರಿಗಳೊಂದಿಗೆ ಉಪಮುಖ್ಯಮಂತ್ರಿಗಳಾದ ಗೋವಿಂದ ಎಂ ಕಾರಜೋಳ, ಮೈಸೂರು ಜಿಲ್ಲಾ ಉಸ್ತುವಾರಿ ಮತ್ತು ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್, ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಕೆ.ಸುಧಾಕರ್ ಅವರು ಉಪಸ್ಥಿತರಿದ್ದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಡಾ. ಪಿ.ಎಸ್. ಹರ್ಷ ಅವರ ನೇತೃತ್ವದಲ್ಲಿ ಇಲಾಖೆಯ ಅಧಿಕಾರಿಗಳು ಮೈಸೂರು ಜಿಲ್ಲಾಡಳಿತದೊಂದಿಗೆ ಸಮನ್ವಯ ಮಾಡಿಕೊಂಡು ಆನ್‌ಲೈನ್ ಮುಖಾಂತರ ಮುಖ್ಯಮಂತ್ರಿಗಳಿಂದ ಶಂಕುಸ್ಥಾಪನೆ ಕಾರ್ಯವನ್ನು ಅಚ್ಚುಕಟ್ಟಾಗಿ ನೆರವೇರಿಸಲಾಯಿತು.

ಸರ್ಕಾರ ಸ್ಮಾರಕ ನಿರ್ಮಾಣಕ್ಕೆ ನೀಡಿರುವ ಒಟ್ಟು ಐದು ಎಕರೆ ಜಮೀನಿನಲ್ಲಿ ಸುಮಾರು ಎರಡು ಎಕರೆ ಪ್ರದೇಶದಲ್ಲಿ ಸ್ಮಾರಕ ಭವನ ನಿರ್ಮಾಣವಾಗಲಿದೆ. ತಳಮಹಡಿ ಮತ್ತು ನೆಲಮಹಡಿ ಸೇರಿ ಒಟ್ಟು 1,45,470 ವಿಸ್ತೀರ್ಣದ ಕಟ್ಟಡದಲ್ಲಿ ಸಭಾಂಗಣ, ಕಲಾವಿದರ ಕೊಠಡಿ, ಕ್ಲಾಸ್ ರೂಂಗಳು ಒಳಗೊಂಡಿರುತ್ತದೆ. ಈಗಾಗಲೇ 5 ಕೋಟಿ ರೂ ಅನುದಾನವನ್ನು ಕಾಮಗಾರಿ ಗುತ್ತಿಗೆ ಪಡೆದಿರುವ ಕರ್ನಾಟಕ ಪೊಲೀಸ್ ಹೌಸಿಂಗ್ ಕಾರ್ಪೊರೇಷನ್ ನಿಯಮಿತ ಸಂಸ್ಥೆಯವರಿಗೆ ಬಿಡುಗಡೆ ಮಾಡಲಾಗಿದೆ. ಸ್ಮಾರಕದ ಮುಂದೆ ನೀರಿನ ಚಿಲುಮೆ ಹಾಗೂ ವಿಷ್ಣುವರ್ಧನ್ ಅವರ 6 ಅಡಿ ಪ್ರತಿಮೆಯನ್ನು ನಿರ್ಮಾಣ ಮಾಡಲಾಗುತ್ತದೆ. ಪುಣೆಯ ಫಿಲ್ಮ್ ಅಂಡ್ ಟೆಲಿವಿಷನ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯಾದ ಶಾಖೆಯನ್ನು ಸಹ ಇಲ್ಲಿ ಆರಂಭಿಸಲಾಗುವುದರಿಂದ ಉದಯೋನ್ಮುಖ ಕಲಾವಿದರು ತರಬೇತಿ ಪಡೆದು, ಚಿತ್ರರಂಗದಲ್ಲಿ ಅವಕಾಶಗಳನ್ನು ಪಡೆದುಕೊಳ್ಳಲು ಅವಕಾಶ ದೊರೆಯಲಿದೆ.

ಶಂಕುಸ್ಥಾಪನಾ ಕಾರ್ಯಕ್ರಮದಲ್ಲಿ ವಿಷ್ಣುವರ್ಧನ್ ಅವರ ಪುತ್ರಿ ಕೀರ್ತಿ, ಅಳಿಯ ಅನಿರುದ್ಧ್, ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್, ಜಿಲ್ಲಾಧಿಕಾರಿ ಬಿ.ಶರತ್, ಎಸ್.ಪಿ. ಸಿ.ಬಿ.ರಿಷ್ಯಂತ್, ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಪರಿಮಳಾ ಶ್ಯಾಮ್ ಸೇರಿದಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ■



Downloaded From: www.kpscvaani.com



ಕಾಯಕ ಸಂಸ್ಕೃತಿ

# ಗಾಂಧಿ ಮಾರ್ಗ

ಸುಮ ಚಂದ್ರಶೇಖರ್



**ಯಾವ ಸೈನ್ಯಕ್ಕೂ ಅಧಿಪತಿಯಾಗದ, ಬ್ಯಾಂಕಿನಲ್ಲಿ ತನ್ನ ಹೆಸರಲ್ಲಿ ಹಣದ ಲೆಕ್ಕವೂ ಇಲ್ಲದ, ತನ್ನದೆನ್ನುವ ಒಂದು ಗುಡಿಸಲಿನ ಸೂರೂ ಇಲ್ಲದ, ಸೂಜಿಯ ಮೊನೆಯೂರುವಷ್ಟೂ ತನ್ನ ಹೆಸರಿನ ನೆಲದ ನೆಲೆಯಿಲ್ಲದ, ನೆಲೆ ಉಳಿಸಿಕೊಳ್ಳದ, ಪರಂಪರೆಯ ಒಂದಿನಿತೂ ದಾಖಲೆ ಉಳಿಸಿಕೊಳ್ಳಬೇಕೆಂಬ ಹಂಬಲವಿಲ್ಲದ, ಏಕಮೇವ ವ್ಯಕ್ತಿ ಇದ್ದುದಾಗಿದ್ದರೆ ಜಗತ್ತಿನಲ್ಲಿ ಪ್ರಾಯಶಃ ಒಬ್ಬನೆ ಇರಬೇಕು! ಬೊಚ್ಚು ಬಾಯಿಯ, ಗುಂಡು ಕನ್ನಡಕ, ಮಾನ ಮುಚ್ಚುವಷ್ಟೇ ಬಟ್ಟೆ, ಒಂದು ಜೊತೆ ಚಪ್ಪಲಿ, ಕೈಗೊಂದು ಊರುಗೋಲು, ಇಷ್ಟನ್ನು ಮಾತ್ರ ವೈಯಕ್ತಿಕವಾಗಿ ಬಳಸಿದ ಮಕ್ಕಳ ಮನಸ್ಸಿನ 'ಬಾಪೂಜಿ' ಜಗತ್ತಿಗೊಬ್ಬನೇ, ಯುಗಕ್ಕೊಬ್ಬನೇ ಹೊರತು ಮತ್ತೊಬ್ಬನಿಲ್ಲ, ಮತ್ತು ಇರಲಾರ.**

**ಈ** ದೇಶಕ್ಕೆ ಮಹಾತ್ಮ ಗಾಂಧಿ ಸ್ವಾತಂತ್ರ್ಯವನ್ನಷ್ಟೆ ಅಲ್ಲ, ಇಡೀ ಜಗತ್ತಿಗೆ ಶಾಂತಿಯ, ಸೋದರತ್ವದ, ಸ್ವಾವಲಂಬನೆಯ ಪಾಠವನ್ನೂ ಕಲಿಸಿ ಕೊಟ್ಟರು. ಅದರಲ್ಲೂ, ನಮ್ಮ ಕೆಲಸವನ್ನು ನಾವೇ ಮಾಡಿಕೊಳ್ಳಬೇಕು. ಮತ್ತೊಬ್ಬರಿಗೆ ಹೊರೆ ಆಗದಂತೆ ಜೀವಿಸಬೇಕು ಎಂಬುದು ಅವರ ತತ್ವ ಆಗಿತ್ತು.


ಪ್ರತಿಯೊಬ್ಬನೂ ಸಾಧ್ಯವಾದಷ್ಟು ಮಟ್ಟಿಗೆ ತನ್ನ ತನ್ನ ಕೆಲಸಗಳನ್ನು ತಾನೇ ಮಾಡಬೇಕು. ತನ್ನ ಕೆಲಸಗಳನ್ನು ತಾನೇ ಮಾಡಿದಾಗ ಒಂದು ಅಪೂರ್ವ ಆನಂದ ಸಿಗುತ್ತದೆ. ಕಾಯಕದ ಸುಖ ಸೌಂದರ್ಯ ಗೌರವದ ಅನುಭವ ಆಗುತ್ತದೆ ಎಂದು ಹೇಳುವ ಮೂಲಕ ಗಾಂಧಿ ಶ್ರಮ ಸಂಸ್ಕೃತಿಯ ಮೌಲ್ಯವನ್ನು ಉದ್ದೀಪನಗೊಳಿಸಿದರು.



Downloaded From: www.kpscvaani.com



ಸೋಮಾರಿತನದಿಂದ ಮನುಷ್ಯ ಕಲ್ಲಿನಂತೆ ತಟಸ್ಥವಾಗುತ್ತಾನೆ. ಕೆಲಸ ಮಾಡುವವನಿಗೆ ಅದರ ಸೃಷ್ಟಿ ಕ್ರಿಯೆಯಿಂದ ಸಿಗುವ ಆನಂದಕ್ಕೆ ಕೊನೆಯೇ ಇಲ್ಲ. ದುಡಿಯದೇ ಸತ್ತವರಿದ್ದಾರೆ. ದುಡಿದು ಸತ್ತವರಿಲ್ಲ, ದುಡಿದು ಸವೆದವರಿದ್ದಾರೆ. ಅವರು ಆರೋಗ್ಯವಂತರಾಗಿದ್ದಾರೆ. ದುಡಿಯದೇ ಕುಳಿತವರ ದೇಹ ಅನಾರೋಗ್ಯದ ಗೂಡಾಗಿದೆ. ಪ್ರತಿಯೊಬ್ಬರು ಕಾಯಕದಿಂದಲೇ ಬದುಕಿದರೆ ಈ ಭೂಮಿ ಸ್ವರ್ಗವಾದೀತು. ಎಂಬ 'ಕಾಯಕ ಸಂಸ್ಕೃತಿ'ಯನ್ನು ಗಾಂಧೀಜಿ 'ಹರಿಜನ' ಪತ್ರಿಕೆಯಲ್ಲಿ ಬರೆದರು.



ಪ್ರತಿಯೊಬ್ಬರು ಕೆಲಸ ಮಾಡಿದರೆ ಭಾರತದಲ್ಲಿ ಖಂಡಿತ ನಿರುದ್ಯೋಗ ಸಮಸ್ಯೆಯೇ ಇರುವುದಿಲ್ಲ. ನಮಗೆ ಕೆಲಸದ ಬೆಲೆ, ಗೌರವ, ಪ್ರೀತಿಸುವ ಗುಣಗೊತ್ತಿರಬೇಕು. ಪ್ರಾಮಾಣಿಕವಾಗಿ ಕೆಲಸ ಮಾಡುವವರು ಎಂದೂ ಉಪವಾಸವಿರಲಾರರು. ಆದರೆ ಗಾಂಧೀಜಿಯವರ **'ಶ್ರಮ ಸಂಸ್ಕೃತಿ'** ಅವರ ಹಿಂದೆಯೇ ಹೊರಟು ಹೋಯಿತು. ಸಮಗ್ರ ಭಾರತದಲ್ಲಿ ಕೆಳಮಟ್ಟದಿಂದ ಮೇಲಿನ ಹಂತದವರೆಗೂ ನೋಡಿದಾಗ, ವೃತ್ತಿ ಗೌರವ ಇಲ್ಲದೆ, ವೃತ್ತಿಯ ಬಗ್ಗೆ ಪ್ರೀತಿ ಇಲ್ಲವಾಗಿ, ಕೆಲಸ ಕಳ್ಳರು ಹೆಚ್ಚಾಗಿ ಬುದ್ಧಿ ದಾರಿದ್ರ್ಯ ಎಲ್ಲೆ ಮೀರಿದೆ ಎನಿಸುತ್ತದೆ.

ದುಡಿಯದೇ ತಿನ್ನುವವ ಪರಾವಲಂಬಿ. ದುಡಿದು ಬದುಕುವುದೆಂದರೆ ಆರೋಗ್ಯದಿಂದ ಸ್ವಾವಲಂಬಿಯಾಗಿ ಬಾಳುವುದು. ಇದು ಸಂತೋಷವನ್ನು ಸಂತೃಪ್ತಿಯನ್ನು ಉಂಟುಮಾಡಿ ತುಂಬು ಜೀವನ ನಡೆಸಲು ಸಹಕಾರಿಯಾಗಬಲ್ಲದು. "ದುಡಿಯುವವನಿಗೆ ಅನ್ನ, ಕುಳಿತು ತಿನ್ನುವವನಿಗೆ ಅನ್ನವಿಲ್ಲ. ಎಲ್ಲರೂ ದುಡಿಯಬೇಕು ಎಲ್ಲರಿಗಾಗಿ ದುಡಿಯಬೇಕು. ದುಡಿದಿರುವುದನ್ನು ಸಮಾಜಕ್ಕೆ ಒಪ್ಪಿಸಬೇಕು. ಎಲ್ಲರಿಗಾಗಿ ಒಬ್ಬನು ಒಬ್ಬನಿಗಾಗಿ ಎಲ್ಲರೂ" ಎಂಬ ತತ್ವದಲ್ಲಿ 'ಕಾಯಕ ಸಂಸ್ಕೃತಿ'ಯನ್ನು ಕಾಣುತ್ತೇವೆ. ಆದರೆ ಭಾರತ ಪ್ರಜಾಪ್ರಭುತ್ವ ದೇಶ ಹೀಗಾಗಿ ಈ ತತ್ವ ಯಥಾವತ್ತಾಗಿ ಆಚರಣೆಯಲ್ಲಿ ಸಾಧ್ಯವಾಗುತ್ತಿಲ್ಲ.



Downloaded From: www.kpscvaani.com

**"ಎಲ್ಲ ಹಕ್ಕುಗಳ ಮೂಲ ಇರುವುದೇ ನಮ್ಮ ಕಾಯಕದಲ್ಲಿ, ನಮ್ಮ ಕಾಯಕವನ್ನು ಮಾಡುವ ಮೂಲಕ ಹಕ್ಕುಗಳನ್ನು ಪಡೆದುಕೊಳ್ಳೋಣ" ಎಂಬುದೊಂದು ಗಾಂಧೀಜಿಯ ಬಹುದೊಡ್ಡ ಚಿಂತನೆಯಾಗಿತ್ತು. ನಾವು ಏನಾದರೂ ಪಡೆದುಕೊಳ್ಳಬೇಕೆನ್ನುವ ಹಂಬಲದಿಂದಲೇ ಹೋರಾಟಕ್ಕಿಳಿಯುತ್ತೇವೆ. ಆದರೆ ಗಾಂಧೀಜಿ ನಮ್ಮೊಳಗೇ ಇರುವ ನಮ್ಮ ಹಕ್ಕುಗಳನ್ನು ಪಡೆಯಲು ನಾವೇ ಸ್ವತಃ ಶ್ರಮಿಸಬೇಕೆಂದು ತೋರಿಸಿದವರು. ಹಾಗೆ ಶ್ರಮಿಸುವ ಮೂಲಕ ಹಕ್ಕುಗಳನ್ನು ಅನುಭವಿಸಬೇಕೆನ್ನುವ ಧೋರಣೆ ಅವರದ್ದು.**

ಶ್ರಮ ಇಲ್ಲದೆ ಸಂಪತ್ತು ಗಳಿಸುವುದು ಪಾಪವೆಂಬ ಗಾಂಧೀಜಿಯ ಚಿಂತನೆಯನ್ನು ಅವಲೋಕಿಸಿದಾಗ ಬಸವಣ್ಣನವರ ಕಾಯಕ-ಪ್ರಸಾದ-ದಾಸೋಹ ತತ್ವ ನೆನಪಿಸುತ್ತದೆ. ಕಾಯಕ ಮಾಡದೇ ಊಟ ಮಾಡುವ ಅರ್ಹತೆ ಇರುವುದಿಲ್ಲ. ಕಾಯಕವೆಂದರೆ ಸತ್ಯಶುದ್ಧವಾದ ಕಾಯಕ ಅಲ್ಲಿ ಭ್ರಷ್ಟಾಚಾರವಷ್ಟೇ ಅಲ್ಲ ವಿಚಾರವೂ ಇರಬಾರದೆಂಬುದು ಶರಣರ ನಿಲುವಾಗಿತ್ತು.

ಗಾಂಧೀಜಿಯವರ ಆದರ್ಶ ರಾಜ್ಯ ನಿರ್ಮಾಣದಲ್ಲಿ ಇಂತಹ ತತ್ವಗಳಿಗೆ ಬೆಲೆಯಿದೆ. ಇದರ ಆಚರಣೆ ಅಗತ್ಯವಾಗಿದೆ. ಭಾರತದ ಇಂದಿನ ಜ್ವಲಂತ ಸಮಸ್ಯೆಗಳಾಗಿರುವ ಬಡತನ, ನಿರುದ್ಯೋಗ, ಆಹಾರ ಕೊರತೆ ಇತ್ಯಾದಿ ಸಮಸ್ಯೆಗಳಿಗೆ ನಾವು ಗಾಂಧಿ ಮಾರ್ಗವನ್ನು ಬಿಟ್ಟು ದೂರ ನಡೆಯುತ್ತಿರುವುದೇ ಕಾರಣವೆನಿಸುತ್ತದೆ.

ವಿದೇಶಿ ಅವಲಂಬನೆ ಅಥವಾ ಆರ್ಥಿಕ ಚಿಂತನೆ ಬಿಟ್ಟು, ರೈತರ ಸಮಸ್ಯೆಗಳಿಗೆ ಸ್ಪಂದಿಸಿದರೆ ಗಾಂಧೀಜಿಯವರ ಕನಸನ್ನು ನನಸು ಮಾಡಲು ಸಾಧ್ಯ. ಅದಕ್ಕಾಗಿ ದೃಢ ಸಂಕಲ್ಪ ಬೇಕು. ಗಟ್ಟಿ ನಿರ್ಧಾರ ಅಗತ್ಯ. ಗಾಂಧೀಜಿಯವರ ಮಾರ್ಗ ಮತ್ತು ಮೌಲ್ಯಗಳು ಮೇಲ್ನೋಟಕ್ಕೆ ಅಪ್ರಸ್ತುತವಾಗಿ ಕಂಡು ಬಂದರೂ, ಮುಕ್ತ ಆಳಕ್ಕಿಳಿದು ನೋಡಿದರೆ ಅವು ಪ್ರಸ್ತುತ ಮಾತ್ರವಲ್ಲ ಅನಿವಾರ್ಯ ಎಂಬುದು ಕಂಡುಬರುತ್ತದೆ.

ಸ್ವದೇಶೀ ಮೂಲ ಮಂತ್ರದಿಂದ ಉತ್ತೇಜಿತರಾಗಿ, ಅಹಿಂಸೆ ಮತ್ತು ಸತ್ಯಾಗ್ರಹಗಳಂತಹ ವಿಶಿಷ್ಟ ಮಾರ್ಗದಲ್ಲಿ ಹೋರಾಡಿ ಸ್ವಾತಂತ್ರ್ಯ ಸಂಪಾದನೆಯ ಗುರಿ ಸಾಧಿಸಿಕೊಂಡು ರಾಷ್ಟ್ರೀಯರಾದ ನಮ್ಮಲ್ಲಿ, ಸ್ವದೇಶೀಯತೆ ಮುಂದುವರಿಯಬೇಕಾಗಿತ್ತು, ಹಾಗೆಯೇ ಸ್ವಾಭಿಮಾನ ಮತ್ತು ಸ್ವಾವಲಂಬನೆಗಳ ತ್ರಿವೇಣಿ ಸಂಗಮ ರೂಪುಗೊಳ್ಳಬೇಕಾಗಿತ್ತು. ಆ ಮೂಲಕ ವಿಶಿಷ್ಟ ರಾಷ್ಟ್ರೀಯತೆ ಕಂಡು ಬರಬೇಕಾಗಿತ್ತು. ಆದರೆ ಆಗಿದ್ದಾದರೂ ಏನು? ವಿದೇಶಿಯರು ಈ ದೇಶವನ್ನು ಬಿಟ್ಟು ಹೋದರೂ, ಅವರ ವಿದೇಶಿಯತೆಯನ್ನು ನಾವು ಬಿಡಲಿಲ್ಲ, ಆದರೇ ಅವರ ವಾರಸುದಾರರು ನಾವು ಎಂಬಂತೆ ಮೈಗೂಡಿಸಿಕೊಂಡಿದ್ದೇವೆ.

ಅಸಂಖ್ಯಾತ ಮತ್ತು ಅಪ್ರತಿಮ ದೇಶಪ್ರೇಮಿಗಳ ತ್ಯಾಗ-ಬಲಿದಾನಗಳಿಂದ ಪಡೆದ ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವ ನಮ್ಮಲ್ಲಿ ವಿಶೇಷವಾಗಿ ಯುವ ಪೀಳಿಗೆಯಲ್ಲಿ ಕೃತಜ್ಞತಾ ಭಾವನೆ ಮೂಡಬೇಕಾಗಿತ್ತು. ಜವಾಬ್ದಾರಿ ವರ್ತನೆಯೂ ಬೆಳೆಯಬೇಕಾಗಿತ್ತು.

ಶತಶತಮಾನಗಳ ಕಾಲ, ಪರಕೀಯರ ಆಡಳಿತಕ್ಕೆ ಒಳಪಟ್ಟು ಶೋಷಿಸಲ್ಪಟ್ಟಿದ್ದ ಈ ರಾಷ್ಟ್ರದಲ್ಲಿ, ಅಗತ್ಯಾಧಾರಿತವಾದ ಜನೋಪಯೋಗಿ ಅಭಿವೃದ್ಧಿ ಕಾರ್ಯಗಳನ್ನು ಶುದ್ಧ ಸೇವಾ ಮನೋಭಾವದಿಂದ, ಪ್ರಾಮಾಣಿಕತೆಯಿಂದ ಮತ್ತು ದಕ್ಷತೆಯಿಂದ ನಿರ್ವಹಿಸಿಕೊಂಡು ಹೋಗುವ ಆಡಳಿತಯಂತ್ರ ಅಸ್ತಿತ್ವಕ್ಕೆ ಬರಬೇಕಾಗಿತ್ತು. ಅದು ಸರಳವಾದ ಸಾಧನ ಸೂತ್ರವಾಗಿ ಇರಬೇಕಾಗಿತ್ತು. ಆದರೆ ಆಗಿದ್ದು ಮಾತ್ರ ತದ್ವಿರುದ್ಧವೇ. ಅಸ್ತಿತ್ವಕ್ಕೆ ಬಂದಿರುವ ಆಡಳಿತ ಯಂತ್ರ ಶ್ರೇಣಿಕೃತವಾದದ್ದಾಗಿದೆ. ವ್ಯಾಪಕವಾದದ್ದೂ ಆಗಿದೆ.

ಹಳ್ಳಿಗಳ ತವರಾದ ಈ ರಾಷ್ಟ್ರದಲ್ಲಿ ಕೃಷಿ ಪ್ರಧಾನವಾಗಿ ಬೆಳೆದು ಸಾಮಾಜಿಕ ಆರೋಗ್ಯ ಮತ್ತು ಬಾಂಧವ್ಯಗಳನ್ನು ಹೊಂದಿತ್ತು. ಆ ಸುಸ್ಥಿತಿಯನ್ನು ಗಂಭೀರವಾಗಿ ಗಮನಿಸಿ, ಸ್ವಾತಂತ್ರ್ಯಾ ನಂತರದಲ್ಲಿ ಕೃಷಿಯನ್ನು ರಾಷ್ಟ್ರೀಯ ಕಸಬು ಎಂದು ದೃಢೀಕರಿಸಿ ಅದರ ಸುಧಾರಣೆ - ಸಂವರ್ಧನೆಗಳಿಗೆ ಒತ್ತು ನೀಡಲೇಬೇಕಾಗಿತ್ತು. ಯುವ ಪೀಳಿಗೆಗೆ(ವಿದ್ಯಾವಂತರೂ ಸೇರಿದಂತೆ) ಒಲವು ಮೂಡಿಸಬೇಕಾಗಿತ್ತು ಉಳಿಸಿ ಉತ್ತಮೀಕರಿಸಬೇಕಾಗಿತ್ತು. ಆದರೆ ಒಂದು ರೀತಿಯಲ್ಲಿ ಕೃಷಿಯ ಹೆಮ್ಮರಕ್ಕೆ ಕೊಡಲಿಯನ್ನು ಎತ್ತಿದಂತಾಯಿತು. ಯೋಜಿತ ಅಭಿವೃದ್ಧಿಯ ಹೆಸರಿನಲ್ಲಿ ಜಾರಿಗೆ ಬಂದ ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗಾರಿಕಾವಲಯಕ್ಕೆ ದೊರಕಿದ ಪ್ರೋತ್ಸಾಹ ಮತ್ತು ಒಲವು ಕೃಷಿವಲಯಕ್ಕೆ ದೊರಕಲಿಲ್ಲ. ಪರಿಣಾಮವಾಗಿ ಗ್ರಾಮೀಣಾ ಕಸುಬು ಕೃಷಿ ಮತ್ತು ಅದರ ಅನುಸಂಬಧಿ ಗೃಹಕೈಗಾರಿಕೆಗಳು, ಹಳ್ಳಿಗಾಡಿನ ಉದ್ಯಮಗಳು ಇಳಿಮುಖವಾಗಿ ಕಣ್ಮರೆಯಾದವು. ಹಳ್ಳಿಗಳಲ್ಲಿ ಇದ್ದು ಮಾಡಬಹುದಾಗಿದ್ದ ಉದ್ಯೋಗಗಳನ್ನು ಮಾಡಲೊಪ್ಪದೆ, ಅದೇ ರೀತಿಯ ಕೂಲಿಯ ಕೆಲಸವನ್ನು ಹುಡುಕುತ್ತ ನಗರಾಭಿಮುಖವಾಗುವವರ ಸಂಖ್ಯೆ ಹೆಚ್ಚತೊಡಗಿತು.

ವಿಶ್ವದಲ್ಲಿಯೇ, ಒಂದು ಪುಟ್ಟ ವಿಶ್ವವಾಗಿ ರೂಪುಗೊಂಡಿರುವ ವಸುಧೆಯೇ ಏಕ ಕುಟುಂಬ ಎಂದು ಸಾರಿರುವ ಈ ರಾಷ್ಟ್ರದಲ್ಲಿ ಸ್ವಾತಂತ್ರ್ಯ ಹಾಗೂ ಸಂವಿಧಾನೋತ್ತರಗಳಲ್ಲಿ ಸಾಮಾಜಿಕ ಭಾವೈಕ್ಯತೆ, ಧಾರ್ಮಿಕ ಸೌಹಾರ್ದತೆ ಮತ್ತು ರಾಷ್ಟ್ರೀಯತೆ ಭಾವೈಕ್ಯತೆ ಅಥವಾ ರಾಷ್ಟ್ರೀಯ ಮುಖ್ಯವಾಹಿನಿ ಇವುಗಳ ಸ್ಥಾಪನೆ ಬಲವರ್ಧನೆಗಳ ಬಗ್ಗೆ ಆದ್ಯತೆ ನೀಡಲೇಬೇಕಾಗಿತ್ತು. ಆದರೆ ವಿದ್ಯಾವಂತರ ಸಂಖ್ಯೆ ಹೆಚ್ಚಿದ ಮೇಲೂ ಸಾಮಾಜಿಕ ಸಂಘರ್ಷಗಳು, ಜಾತಿ-ಜಾತಿಗಳ ಮೇಲಾಟಗಳು ಅವ್ಯಾಹತವಾಗಿ ನಡೆಯುತ್ತಾ, ತಳಮಟ್ಟದ ನೆಮ್ಮದಿಯನ್ನು (ಸಾಮಾಜಿಕ ನೆಮ್ಮದಿಯನ್ನು) ಕೆಡಿಸುತ್ತಿವೆ.

ಸಮಾಜದಲ್ಲಿರುವ ಕಟ್ಟಕಡೆಯವರಿಂದ ಪ್ರಾರಂಭವಾಗಿ ಎಲ್ಲರ ಪೀಳಿಗೆಯ ಗುರಿಯನ್ನು ಅವರು ಸಾಧಿಸ ಬಯಸಿದ್ದರು. ಯಾರೇ ಆಗಲಿ, ಸ್ಥಾನ-ಸಂಪಾದನೆಗಳನ್ನು ಅನುಭವಿಸುವ ಸಂದರ್ಭದಲ್ಲಿ ಕಟ್ಟಕಡೆಯವರನ್ನು ನೆನೆಪಿಸಿಕೊಳ್ಳಬೇಕೆಂದು ಗಾಂಧೀಜಿ ನೀಡಿರುವ ಕರೆ ಗಮನಾರ್ಹ.



Downloaded From: www.kpscvaani.com



1920ರಲ್ಲಿ ಗಾಂಧೀಜಿ (ಅಸಹಕಾರ ಚಳವಳಿಯ ಆರಂಭಿಕ ಅವಧಿಯಲ್ಲಿ)

## ಗಾಂಧೀಜಿಯ ಮೊದಲ

# ಕರಾವಳಿ ಭೇಟಿಗೆ ಶತಮಾನ

ವಿನೀತ್ ರಾವ್

**ರೌಲೆಟ್ ಕಾಯಿದೆಯ ವಿರುದ್ಧವಾಗಿ ಚಳುವಳಿ ಸಂಘಟಿಸುವ ಉದ್ದೇಶದಿಂದ ಆಗಸ್ಟ್ 19, 1920 ರಂದು ಮಂಗಳೂರಿಗೆ ಮೊದಲ ಬಾರಿಗೆ ಗಾಂಧೀಜಿಯವರು ಆಗಮಿಸಿದ ಭೇಟಿಗೆ ಒಂದು ಶತಮಾನ ಪೂರೈಸಿದೆ.**

ಸುಮಾರು ನೂರು ವರ್ಷಗಳ ಹಿಂದಿನ ಕಾಲವದು. ಬ್ರಿಟಿಷ್ ಆಳ್ವಿಕೆಯ ಅತಿರೇಕಗಳಿಂದ ಇಡೀ ಭಾರತವೇ ರೋಸಿಹೋಗಿತ್ತು. ಪ್ರಥಮ ವಿಶ್ವ ಯುದ್ಧದ ತರುವಾಯ ಭಾರತದ ಜನತೆ 1918–19ರ ಸ್ಪ್ಯಾನಿಷ್ ಫ್ಲೂ ಎಂಬ ವಿಶ್ವವ್ಯಾಪಿ ಮಹಾಮಾರಿಯಿಂದ ತತ್ತರಿಸಿ ಹೇಗೋ ಚೇತರಿಸಿಕೊಳ್ಳುತ್ತಿರುವಂತೆಯೇ 1919ರ ಕರಾಳವಾದ ರೌಲೆಟ್ ಕಾಯ್ದೆಯು ಜನತೆಯ ಸ್ವಾತಂತ್ರ್ಯವನ್ನು ಮತ್ತಷ್ಟು ಮೊಟಕುಗೊಳಿಸಿತ್ತು. ಆ ಹೊತ್ತಿಗೆ ಗಾಂಧೀಜಿ ರೌಲೆಟ್ ಕಾಯಿದೆಯ ವಿರುದ್ಧವಾಗಿ 1919ರ ಏಪ್ರಿಲ್ 6 ರಂದು ದೇಶ ವ್ಯಾಪಿ ಸತ್ಯಾಗ್ರಹವನ್ನು ನಡೆಸಿದರು.

ಆದರೆ ಬ್ರಿಟಿಷ್ ಆಳ್ವಿಕೆಯಲ್ಲಿನ ದಬ್ಬಾಳಿಕೆಯ ಪರಮಾವಧಿ ಎಂಬಂತೆ 1919ರ ಏಪ್ರಿಲ್ 13 ರಂದು ಜನರಲ್ ಡೈಯರನು ಎಸಗಿದ ಜಲಿಯನ್ ವಾಲಾಬಾಗ್ ಹತ್ಯಾಕಾಂಡವು ಮಾನವತೆಯ ಸಾಕ್ಷಿಪ್ರಜ್ಞೆಯನ್ನೇ ಅಲುಗಾಡಿಸಿ ಹಾಕಿತ್ತು. ಈ ಘಟನೆಯಿಂದ ಭಾರತದ ಮೂಲೆಮೂಲೆಗಳಲ್ಲಿ ಜನರು ಶೋಕ ತಪ್ತರಾದರು ಹಾಗೂ ಬ್ರಿಟಿಷ್ ಆಳ್ವಿಕೆಯನ್ನು ಕೊನೆಗಾಣಿಸಲು ಹೊಸದಾಗಿ ಚಳುವಳಿಯನ್ನು ನಡೆಸಲು ದೃಢವಾದ ಸಂಕಲ್ಪವನ್ನು ಮಾಡಿದರು. ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಬ್ರಿಟಿಷ್ ಸರಕಾರ ಯಾವ ಮಟ್ಟಕ್ಕೂ ಇಳಿದು ಪಾಶವೀ ಕೃತ್ಯಗಳನ್ನು ಹಾಗೂ ಅನಾಚಾರಗಳನ್ನು ಮಾಡಬಲ್ಲದು ಎಂದು ಗಾಂಧೀಜಿಗೂ  ಮನದಟ್ಟಾಯಿತು. ಇಂತಹ ಸಮಯದಲ್ಲಿ ಗಾಂಧೀಜಿಯ ಮನಸ್ಸಿನಲ್ಲಿ ಅಹಿಂಸಾತ್ಮಕವಾದ ಅಸಹಕಾರ ಚಳುವಳಿಯ ಯೋಜನೆಯು ಮೂಡಿತು. ಅವರು ಅದನ್ನು ಅವರ ಸತ್ಯಾಗ್ರಹದ ಪಥದಲ್ಲಿ ಹಂತಹಂತವಾಗಿ ರೂಪಿಸಿದರು.

ಈ ಚಳುವಳಿಯು 1920ರ ಆಗಸ್ಟ್ 1 ರಂದು ಆರಂಭವಾಗುವ ಹೊತ್ತಿನಲ್ಲಿ ಲೋಕಮಾನ್ಯ ತಿಲಕರು ಕಾಲವಾದರು. ದೇಶವು ಶೋಕದಲ್ಲಿ ಮುಳುಗಿದ್ದರೂ, ಲೋಕಮಾನ್ಯರ ಸ್ಮರಣೆಯೊಂದಿಗೆ ಗಾಂಧೀಜಿಯ ನಾಯಕತ್ವದಿಂದ ಜನತೆಯಲ್ಲಿ ಮಹಾಜಾಗೃತಿಯು ಉಂಟಾಯಿತು. ಹಿಂದುಗಳು ಹಾಗೂ ಮುಸಲ್ಮಾನರು ಅಲ್ಲದೇ ಎಲ್ಲಾ ಮತಧರ್ಮದವರೂ ಒಂದಾಗಿ ಅಸಹಕಾರ ಚಳುವಳಿಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದರು.



Downloaded From: www.kpscvaani.com

ಅಸಹಕಾರದ ಮೊದಲ ಹೆಜ್ಜೆಯಾಗಿ ಗಾಂಧೀಜಿ ತಮಗೆ ಸರಕಾರ ಕೊಟ್ಟಿದ್ದ ಕೈಸರ್-ಎ-ಹಿಂದ್ ಮತ್ತಿತರ ಪದಕಗಳನ್ನು ಹಿಂತಿರುಗಿಸಿದರು. ಅಖಿಲ ಭಾರತ ಮಟ್ಟದಲ್ಲಿ ಯಾವುದೇ ಭೇದಭಾವವಿಲ್ಲದೇ ಮಹಿಳೆಯರು, ಮಕ್ಕಳೂ ಸೇರಿದಂತೆ ಎಲ್ಲಾ ವರ್ಗಗಳ ಜನರು ಈ ಚಳುವಳಿಯಲ್ಲಿ ಸಹಜವಾಗಿ ಭಾಗವಹಿಸಲು ಅವಕಾಶ ಇದ್ದಿತು.

ಜನಸಾಮಾನ್ಯರ ಈ ಚಳುವಳಿಗೆ ಸರಿಯಾದ ಮಾರ್ಗದರ್ಶನ ನೀಡಲು ಹಾಗೂ ಚಳುವಳಿಯನ್ನು ದಕ್ಷಿಣ ಭಾರತದಲ್ಲಿ ಮತ್ತಷ್ಟು ವ್ಯಾಪಕಗೊಳಿಸಲು ಗಾಂಧೀಜಿ ಖಿಲಾಫತ್ ನಾಯಕ ಮೌಲಾನಾ ಶೌಕತ್ ಅಲಿಯವರ ಜತೆಗೆ ಮದ್ರಾಸು ಪ್ರಾಂತ್ಯದ ಪ್ರವಾಸಕ್ಕಾಗಿ ಆಗಸ್ಟ್ 10 ರಂದು ಬೊಂಬಾಯಿಯಿಂದ ರೈಲಿನಲ್ಲಿ ಹೊರಟರು. ಪೂರ್ವನಿಗದಿತ ಕಾರ್ಯಕ್ರಮದಂತೆ ಅವರಿಬ್ಬರೂ ಆಗಸ್ಟ್ 18 ರಂದು ಕಲ್ಲಿಕೋಟೆಯ ಸಭೆ ಮುಗಿಸಿ 19ನೇ ತಾರೀಖು ಗುರುವಾರದಂದು ಮಂಗಳೂರಿಗೆ ರೈಲಿನಲ್ಲಿ ಬರುವವರಿದ್ದರು. ಆಗ ಕನ್ನಡ ಕರಾವಳಿಯ ಪ್ರಮುಖ ಕೇಂದ್ರವೆನಿಸಿದ್ದ ಮಂಗಳೂರು ಆಡಳಿತಾತ್ಮಕವಾಗಿ ಮದ್ರಾಸು ಪ್ರಾಂತದಲ್ಲಿತ್ತು. 19-08-1920 ರಂದು ಮಂಗಳೂರಿಗೆ ಬರುವ ಮೂಲಕ ಗಾಂಧೀಜಿ ಕನ್ನಡ ಕರಾವಳಿಯ ಭಾಗಕ್ಕೆ ಮೊದಲ ಬಾರಿಗೆ ಪಾದಾರ್ಪಣೆ ಮಾಡಿದರು. ಆ ಮೊದಲ ಭೇಟಿಗೆ 19-08-2020ರಲ್ಲಿ ಶತಮಾನ. ಅಂತೆಯೇ ಗಾಂಧೀಯುಗದ ಪ್ರಥಮ ಮಹಾಂದೋಲನವಾದ ಅಸಹಕಾರ ಚಳುವಳಿಯ ನೂರರ ನೆನಪನ್ನು ಕೂಡಾ ಈ ವರ್ಷ ಮಾಡಿಕೊಳ್ಳುತ್ತಿದ್ದೇವೆ. ಆ ನೆನಪಿನಲ್ಲಿ ಗಾಂಧೀ ಹೆಜ್ಜೆಯನ್ನು ಅರಸೋಣ.

**ಗಾಂಧೀಜಿ ಬಂದರು:**

1920ರ ಆಗಸ್ಟ್ 19 ರಂದು ಮಂಗಳೂರಿಗೆ ಬರುವ ಮಾರ್ಗದಲ್ಲಿ ಗಾಂಧೀಜಿಯ ರೈಲು ಕಾಸರಗೋಡಿನ ರೈಲು ನಿಲ್ದಾಣದಲ್ಲಿ ನಿಂತಿತು. ಅಲ್ಲಿ ನೂರಾರು ಜನರು ಸೇರಿದ್ದರು. ಐದಾರು ನಿಮಿಷಗಳಲ್ಲಿ ಚೊಕ್ಕದಾಗಿ ಸ್ವಾಗತ ಕೋರಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿದ್ದ ಕಾಸರಗೋಡು ತಾಲೂಕಿನ ವತಿಯಿಂದ ಬಿನ್ನವತ್ತಳೆ ಸಮರ್ಪಣೆಯಾಯಿತು. ಆ ಬಿನ್ನವತ್ತಳೆಯ ಬರವಣಿಗೆಯನ್ನು ಖಿಲಾಫತ್ ಚಳವಳಿಯ ಆಶಯವಾದ ಹಿಂದೂ-ಮುಸ್ಲಿಂ ಐಕ್ಯತೆಯ ಭಾವವನ್ನು ಚೆನ್ನಾಗಿ ಅರಿತುಕೊಂಡು ಬರೆಯಲಾಗಿತ್ತು. ಗಾಂಧೀಜಿ ಹಾಗೂ ಅಲಿಯವರನ್ನು "ಪೂಜ್ಯರಾದ ಸಹೋದರರೇ" ಎಂದು ಗೌರವಪೂರ್ವಕವಾಗಿ ಸಂಭೋದಿಸಲಾಗಿತ್ತು. "ತಾವಿಬ್ಬರೂ ನಮ್ಮ ಜಿಲ್ಲೆಗೆ ಪ್ರಥಮ ಹೆಜ್ಜೆಯನ್ನಿಟ್ಟಿರುವ ಈ ಸಂದರ್ಭದಲ್ಲಿ ಕಾಸರಗೋಡು ತಾಲೂಕಿನ ಜನರಾದ ನಾವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ. ಬಿಡುವಿಲ್ಲದ ಸಂಚಾರದ ನಡುವೆಯೂ ಭಾರತದ ಒಂದು ಮೂಲೆಯಲ್ಲಿರುವ ನಮ್ಮ ಕನ್ನಡ ಪ್ರಾಂತಕ್ಕೆ ಭೇಟಿ ನೀಡಲು ಸಮಯ ಹೊಂದಿಸಿಕೊಂಡ ತಮ್ಮಿಬ್ಬರಿಗೆ ಕೃತಜ್ಞರಾಗಿದ್ದೇವೆ" ಎಂದು ವಿಶೇಷವಾಗಿ ಉಲ್ಲೇಖಿಸಲಾಗಿತ್ತು. ಐತಿಹಾಸಿಕ ಮಹತ್ವವಿರುವ ಈ ವಿಚಾರವನ್ನು ಗಾಂಧೀಜಿಯೊಂದಿಗಿದ್ದ ಅವರ ಆಪ್ತಕಾರ್ಯದರ್ಶಿ ಮಹಾದೇವ ದೇಸಾಯಿ ಅವರು ದಿನಚರಿ ರೂಪದ ತಮ್ಮ ಕೃತಿ 'ಡೇ-ಟು-ಡೇ ವಿತ್ ಗಾಂಧಿ'ಯಲ್ಲಿ ಹೀಗೆ ದಾಖಲಿಸಿದ್ದಾರೆ

"We, the people of Kasargode Taluka, extend a hearty welcome to you both on your first stepping into our district. It is a matter of great joy and honour to us that in the midst of your various pressing activities, you have found time to visit our Kannada Province which lies in a corner of India. And for that honour we express our heartfelt thanks...." [Day-To-Day With Gandhi : Vol-II, Pg.203]



ಗಾಂಧೀಜಿ 29-8-1920ರ 'ನವಜೀವನ' ಪತ್ರಿಕೆಯಲ್ಲಿ ತಮ್ಮ ಪ್ರವಾಸದ ಸಮಯದಲ್ಲಿ ಮಂಗಳೂರಿನಲ್ಲಿನ ಗುಜರಾತಿ ಮೂಲದವರ ಆತಿಥ್ಯದಿಂದ ಶೌಕತ್ ಅಲಿಯವರ ಮುಖ ಸಂತಸದಿಂದ ಅರಳಿದ ಬಗೆಯನ್ನು ವಿವರಿಸುತ್ತಾ ಗುಜರಾತಿ ಮೂಲದ ಹಿಂದುಗಳು ಪರೋಪಕಾರಿಗಳಾಗಿ ಇಲ್ಲಿನ ಮುಸಲ್ಮಾನರೊಂದಿಗೆ ಸೌಹಾರ್ದತೆಯಿಂದ ಇದ್ದ ಬಗೆಯನ್ನು ದಾಖಲಿಸಿದ್ದಾರೆ.

ಅಂದಿನ ಆ ಭಿನ್ನವತ್ತಳೆಯಲ್ಲಿ ಕಾಸರಗೋಡಿನ ಜನತೆ ತಮ್ಮ ನೆಲವನ್ನು ಕನ್ನಡ ಪ್ರಾಂತ್ಯವೆಂದು ಗುರುತಿಸಿಕೊಂಡದ್ದು ವಿಶೇಷವಾಗಿತ್ತು. ಆ ನಂತರ ಸ್ವರಾಜ್ಯ ಫಂಡಿಗೆ ನಿಧಿ ಅರ್ಪಣೆ ಹಾಗೂ ಗಾಂಧೀಜಿಯ ಚಿಕ್ಕ ಭಾಷಣ ನಡೆದು ರೈಲು ಮಂಗಳೂರಿನ ಕಡೆಗೆ ಹೊರಟಿತು.

ಮಂಗಳೂರಿನಲ್ಲಿ ಗಾಂಧೀಜಿಯನ್ನು ಬರಮಾಡಿಕೊಳ್ಳಲು ಮಧ್ಯಾಹ್ನ 1 ಗಂಟೆಯ ಹೊತ್ತಿಗೆ ರೈಲು ನಿಲ್ದಾಣದ ಬಳಿ ಸುಮಾರು 6000 ಜನರು ಸೇರಿದ್ದರು. ಆಗಿನ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ, ಬಂಟ್ವಾಳ, ಮೂಲ್ಕಿ, ಕಾರ್ಕಳ, ಕುಂದಾಪುರ, ಪುತ್ತೂರು, ಕಾಸರಗೋಡು ಪ್ರದೇಶಗಳಿಂದ ಪ್ರತಿನಿಧಿಗಳು ಹಾಗೂ ಜನರು ಗಾಂಧೀಜಿಯನ್ನು ನೋಡಲು ಮತ್ತು ಅವರ ಮಾತುಗಳನ್ನು ಆಲಿಸಲು ಬಂದಿದ್ದರು. ರೈಲು ನಿಲ್ದಾಣದಲ್ಲಿ ಗಾಂಧೀಜಿ ಮತ್ತು ಮೌಲಾನಾ ಶೌಕತ್ ಅಲಿಯವರನ್ನು ಕಾರ್ನಾಡ್ ಸದಾಶಿವ ರಾವ್, ಸ್ವಾಗತ ಸಮಿತಿಯ ಅಧ್ಯಕ್ಷರಾದ ಅಬ್ದುಲ್ಲಾ ಸಾಹೇಬ್, ಸದಸ್ಯರಾದ ಎಂ. ಮಾಧವ ರಾವ್, ಪುತ್ತೂರ್ ಹುಸೇನ್ ಸಾಹೇಬ್, ಜನಾಬ್ ಜಮಾಲುದ್ದೀನ್ ಸಾಹೇಬ್ ಮೊದಲಾದ ಪುರ ಪ್ರಮುಖರು, ಕಾಂಗ್ರೆಸ್ ಸದಸ್ಯರು ಹಾಗೂ ಖಿಲಾಫತ್ ಸಮಿತಿಯ ಕಾರ್ಯಕರ್ತರು "ಗಾಂಧೀ ಕಿ ಜೈ", "ಮೌಲಾನಾ ಶೌಕತ್ ಅಲಿ ಕಿ ಜೈ" ಎಂಬೆಲ್ಲಾ ಜಯಘೋಷದೊಂದಿಗೆ ಸ್ವಾಗತಿಸಿದರು.

ಆ ಕಾಲಕ್ಕೆ ಐವತ್ತರ ಹರೆಯದಲ್ಲಿದ್ದ ಮಹಾತ್ಮಾ ಗಾಂಧೀಜಿಯ ಉಡುಗೆ ಬಹಳ ಸರಳವಾಗಿತ್ತು. ಅವರು ಆಗ ಬಿಳಿಯ ಖಾದೀ ಟೋಪಿ, ಜುಬ್ಬಾ ಹಾಗೂ ಧೋತರ ಧರಿಸುತ್ತಿದ್ದರು. ಗಾಂಧೀಜಿಯ ಸರಳತೆಯನ್ನು ಕಂಡು ಜನರಿಗೆ



Downloaded From: www.kpscvaani.com

**ರೌಲೆಟ್ ಕಾಯಿದೆಯ ವಿರುದ್ಧದ ಸತ್ಯಾಗ್ರಹವನ್ನು ದೇಶಭಕ್ತ ಕಾರ್ನಾಡ್ ಸದಾಶಿವ ರಾಯರಂತಹ ನಾಯಕರುಗಳು ಮಂಗಳೂರಿನಲ್ಲಿಯೂ ಯಶಸ್ವಿಯಾಗಿ ನಡೆಸಿದ್ದ ಬಗ್ಗೆ ಗಾಂಧೀಜಿಗೆ ಬಹಳ ಮೆಚ್ಚುಗೆ ಇತ್ತು. ಮಂಗಳೂರು ಹಿಂದೂ ಮುಸ್ಲಿಂ ಐಕ್ಯತೆಯನ್ನು ಸಾರುವ ರೀತಿಯಲ್ಲಿ ಖಿಲಾಫತ್ ಚಳವಳಿಯ ಚಟುವಟಿಕೆಗಳನ್ನೂ ಸಂಘಟಿಸಿತ್ತು. ಗಾಂಧೀಜಿ ಮತ್ತು ಶೌಕತ್ ಅಲಿಯವರನ್ನು ಮಂಗಳೂರಿಗೆ ಬರಮಾಡಿಕೊಳ್ಳುವುದರಲ್ಲಿ ಕಾರ್ನಾಡರ ಪಾತ್ರವು ಬಹಳ ಮುಖ್ಯವಾಗಿತ್ತು.**

ಅಚ್ಚರಿಯಾಗಿತ್ತು. ಪುರಜನರು ಗಾಂಧೀಜಿ ಮತ್ತು ಅಲಿಯವರನ್ನು ತೆರೆದ ವಾಹನದಲ್ಲಿ ಕೂರಿಸಿ ಭವ್ಯ ಮೆರವಣಿಗೆಯನ್ನು ಮಾಡಿದರು. ದಾರಿಯುದ್ದಕ್ಕೂ ತಳಿರುತೋರಣಗಳಿಂದ ಸಿಂಗರಿಸಿ ಅಲ್ಲಲ್ಲಿ ತೆಂಗಿನ ಗರಿಗಳಿಂದ ಮಾಡಿದ ಸ್ವಾಗತ ದ್ವಾರಗಳನ್ನು ಹಾಕಿದ್ದರು. ಮೆರವಣಿಗೆಯು ಸಾಗುವ ರಸ್ತೆಗಳ ಇಕ್ಕೆಲಗಳಲ್ಲಿಯೂ ಸಾವಿರಾರು ಜನರು ಸಾಲಾಗಿ ನಿಂತು ಮಹಾನಾಯಕರಾದ ಗಾಂಧೀಜಿಯನ್ನು ನೋಡಲು ಉತ್ಸುಕರಾಗಿದ್ದರು. ಎಲ್ಲೆಡೆಗಳಿಂದಲೂ "ವಂದೇ ಮಾತರಂ" ಹಾಗೂ "ಅಲ್ಲಾಹೋ ಅಕ್ಬರ್" ಎಂಬ ಘೋಷವಾಕ್ಯಗಳು ಕೇಳಿಸುತ್ತಿದ್ದವು. ಸರ್ವಧರ್ಮೀಯರ ಐಕ್ಯತೆಯನ್ನು ಸಾರುವಂತಿದ್ದ ಈ ಮೆರವಣಿಗೆಯಲ್ಲಿ ಭಜನಾ ತಂಡಗಳು, ನಾದಸ್ವರ, ಮಂಗಳವಾದ್ಯಗಳು, ಬ್ಯಾಂಡ್ ಸೆಟ್ ಹಾಗೂ ದಫ್ ಮೇಳಗಳು ಭಾಗವಹಿಸಿದ್ದವು. ಮೆರವಣಿಗೆಯು ಹಂಪನಕಟ್ಟೆ, ಗಣಪತಿ ದೇವಸ್ಥಾನ, ಕಾರ್‌ಸ್ಟ್ರೀಟ್, ಜವುಳಿ ಪೇಟೆ, ಗೋಳಿಕಟ್ಟೆ ಬಜಾರ್ ಮೂಲಕ ಬಂದರ್ ಬಳಿಯ 'ವರ್ತಕ ವಿಲಾಸ' ಕಟ್ಟಡವನ್ನು ತಲುಪಿತು. ಬಳಿಕ ಗಾಂಧೀಜಿ ಹಾಗೂ ಶೌಕತ್ ಅಲಿಯವರು ತಮ್ಮ ತಂಡದೊಂದಿಗೆ ಜೊತೆಯಾಗಿ ಗುಜರಾತಿ ಮೂಲದವರಾದ ಪುರುಷೋತ್ತಮ್ ಸೇಟರ ವರ್ತಕ ವಿಲಾಸ ಎಂಬ ಹೆಸರಿನ ನಿವಾಸದಲ್ಲಿ ಜೊತೆಯಾಗಿ ಊಟೋಪಚಾರಗಳನ್ನು ಸ್ವೀಕರಿಸಿ ವಿಶ್ರಾಂತಿಯನ್ನು ಪಡೆದುಕೊಂಡರು.

**ಸಾರ್ವಜನಿಕ ಸಭೆಯಲ್ಲಿ ಗಾಂಧೀಜಿಯ ಭಾಷಣ**

ಸಂಜೆ ಆರು ಗಂಟೆಗೆ ಮಂಗಳೂರಿನ ಕೇಂದ್ರ ಮೈದಾನದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಸುಮಾರು 10,000 ಜನರನ್ನು ಉದ್ದೇಶಿಸಿ ಗಾಂಧೀಜಿ ಮಾತನಾಡಿದರು. ಅವರು ತಮ್ಮ ಸಂದೇಶದಲ್ಲಿ "ನನಗೂ ನನ್ನ ಸಹೋದರ ಶೌಕತ್ ಅಲಿಗೂ ಭಾರತದ ಈ ಸುಂದರ ಉದ್ಯಾನಕ್ಕೆ ಬರಲು ಬಹಳ ಸಂತೋಷವಾಯಿತು. ನೀವು ಕೊಟ್ಟ ಭವ್ಯ ಸ್ವಾಗತದಂತೆ ನಿಮಗೆ ನಾವು ಪ್ರತಿನಿಧಿಸುವ ಚಳುವಳಿಯ ಬಗ್ಗೆ ಸಹಾನುಭೂತಿ ಇದೆ ಎಂದಾದರೆ ಬಹಳ ಸಂತೋಷ..." ಎನ್ನುತ್ತಾ, ತಮಗೆ ಕಾಸರಗೋಡಿನಲ್ಲಿ ದೊರೆತ ಬಿನ್ನವತ್ತಳೆಯಲ್ಲಿ ಜನರು ಈ ಪ್ರವಾಸದ ಮಹತ್ವವನ್ನು ಅರಿತುಕೊಂಡು 'ಸೋದರರೆ' ಎಂದು ಬರೆದಿರುವುದನ್ನು ಶ್ಲಾಘಿಸಿದರು. ಮಂಗಳೂರಿನ ಜನತೆ ಕೂಡ ಈ ಚಳವಳಿಯ ಮಹತ್ವವನ್ನು ಅರಿತುಕೊಂಡು ಧರ್ಮಾಭಿಮಾನ, ಸರ್ವಧರ್ಮ ಸಮಭಾವ, ಧಾರ್ಮಿಕ ಸಾಮರಸ್ಯ ಹಾಗೂ ಒಗ್ಗಟ್ಟಿಂದ ರಾಷ್ಟ್ರದ ಸ್ವಾಭಿಮಾನವನ್ನು ಎತ್ತಿಹಿಡಿಯಲು ಹಿಂಸಾರಹಿತವಾದ ಆಧ್ಯಾತ್ಮಿಕ ಅಸಹಕಾರವನ್ನು ಅನುಸರಿಸಬೇಕೆಂದು ಕರೆ ನೀಡಿದರು. ಅಸಹಕಾರದ ನಾಲ್ಕು ಅಂಶಗಳಾದ 1) ಖಾನ್ ಬಹದ್ದೂರ್, ರಾವ್ ಸಾಹೇಬ್ ಮುಂತಾದ ಪದವಿಗಳ / ಪ್ರಶಸ್ತಿಗಳ ತ್ಯಾಗ, 2) ಶಾಸನಸಭೆಯ ಬಹಿಷ್ಕಾರ, 3) ವಕೀಲಿ ಬಹಿಷ್ಕಾರ, 4) ಸರಕಾರಿ/ ಸರಕಾರಿ ಸಹಾಯ ಪಡೆವ ಶಾಲೆಗಳ ಬಹಿಷ್ಕಾರಗಳ ಬಗ್ಗೆ ತಿಳಿಸಿ, ಸರಕಾರಕ್ಕೆ ಯಾವ ಸಹಕಾರವನ್ನೂ ಕೊಡಬಾರದು ಮತ್ತು ಅದರಿಂದ ಯಾವ ಸಹಾಯವನ್ನೂ ಪಡೆಯಬಾರದು ಎಂದು ಮನವರಿಕೆ ಮಾಡಿಕೊಟ್ಟರು. ಅಸಹಕಾರದ ಅಂಗವಾಗಿ ಪ್ರತಿಯೊಬ್ಬರೂ ಸ್ವಾರ್ಥರಹಿತರಾಗಿ ಸ್ವದೇಶಿಯನ್ನು ಅನುಸರಿಸಬೇಕೆಂದು ಉಪದೇಶಿಸಿದರು.

ಅಂದು ಗಾಂಧೀಜಿ ಸ್ವದೇಶೀಯರಲ್ಲಿರಬೇಕಾದ ಒಗ್ಗಟ್ಟಿನ ಮಹತ್ವವನ್ನು ಹೇಳಿ, ಜನರ ಹೃದಯಗಳನ್ನು ಹಾಗೂ ಮನಸ್ಸುಗಳನ್ನು ಬೆಸೆಯುವಂತಹ ಸಂದೇಶವನ್ನು ನೀಡಿದರು. ಬಳಿಕ ಶೌಕತ್ ಅಲಿ ಗಾಂಧೀಜಿ ನೇತೃತ್ವದ ಪವಿತ್ರವಾದ ಚಳವಳಿಯ ಬಗ್ಗೆ ಮಾತನಾಡಿದರು. ಮಂಗಳೂರಿನ ಮಹಾಜನತೆ ಸ್ವರಾಜ್ಯ ನಿಧಿಗೆ ಮತ್ತು ಖಿಲಾಫತ್ ಫಂಡ್‌ಗೆ ಉದಾರವಾಗಿ ದೇಣಿಗೆಗಳನ್ನು ಸ್ಥಳದಲ್ಲಿಯೇ ನೀಡಿದರು. ಗಾಂಧೀಜಿಯ ಇಂಗ್ಲೀಷ್ ಭಾಷಣವನ್ನು ಕರೋಡಿ ಸುಬ್ಬರಾವ್ ಮತ್ತು ಸ್ವದೇಶಾಭಿಮಾನಿ ವಿ.ಎಸ್. ಕಾಮತ್ ಜನರಿಗಾಗಿ ಕನ್ನಡಕ್ಕೆ ಭಾಷಾಂತರಿಸಿದರು. ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಹಾಜೀ ಅಬ್ದುಲ್ಲಾ ಸಾಹೇಬರು ಸಭೆಯ ಸ್ವಾಗತ ನುಡಿಗಳನ್ನಾಡಿದರು. ವಕೀಲ್ ಗಂಗೊಳ್ಳಿ ಕೃಷ್ಣರಾಯರಿಂದ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಆ ಸಭೆಯಲ್ಲಿ ಗಾಂಧೀಜಿ ತಮ್ಮ ಭಾಷಣವನ್ನು ಮುಸಲ್ಮಾನ ಸಹೋದರರ ಸಂಜೆಯ ನಮಾಜ್‌ಗಾಗಿ ಕೆಲಹೊತ್ತು ಮೊಟಕುಗೊಳಿಸಿ ಬಳಿಕ ಮುಂದುವರಿಸಿದ ಬಗ್ಗೆ ಉಲ್ಲೇಖವಿದೆ. ಸಾರ್ವಜನಿಕ ಸಭೆಯ ಆನಂತರದಲ್ಲಿ ಗಾಂಧೀಜಿ ತಾವು ವಾಸವಿದ್ದ ಸ್ಥಳದಲ್ಲಿಯೇ ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರ ಜೊತೆಗೆ ಸಂವಾದ ಸಭೆಯನ್ನೂ ಉದ್ದೇಶಿಸಿ ಮಾತನಾಡಿ ಅಸಹಕಾರ ಚಳುವಳಿಯ ಬಗ್ಗೆ ಸೂಕ್ತ ಮಾರ್ಗದರ್ಶನವಿತ್ತರು. ಜಿಜ್ಞಾಸುಗಳ ಹಾಗೂ ಪತ್ರಕರ್ತರ ಪ್ರಶ್ನೆಗಳಿಗೂ ಗಾಂಧೀಜಿ ಸೂಕ್ತವಾದ ಉತ್ತರಗಳನ್ನು ನೀಡಿದರು. ಆ ರಾತ್ರಿ ಮಂಗಳೂರಿನಲ್ಲೇ ಉಳಿದುಕೊಂಡ ಗಾಂಧೀಜಿ ಮತ್ತು ಅಲಿ ಮರುದಿನ ಬೆಳಗ್ಗೆ ರೈಲಿನಲ್ಲಿ ಸೇಲಂಗೆ ತೆರಳಿದರು. ಆ ಬಳಿಕ ಗಾಂಧೀಜಿಯವರು ಬೆಂಗಳೂರಿನ ಕಡೆಗೆ ಪ್ರಯಾಣಿಸಿದರು. 21-08-1920ರಂದು ಬೆಂಗಳೂರಿನಲ್ಲಿ ಅಸಹಕಾರ ಚಳವಳಿಯ ಬಗ್ಗೆ ದೊಡ್ಡ ಸಭೆಯನ್ನುದ್ದೇಶಿಸಿ ಉರ್ದು ಭಾಷೆಯಲ್ಲಿ ಭಾಷಣವನ್ನು ಮಾಡಿದ್ದರು.

**ಮಂಗಳೂರಿನವರ ಆತಿಥ್ಯ :**

ಗಾಂಧೀಜಿಯವರು ಮಂಗಳೂರಿನ ಜನರು ತಮಗೆ ನೀಡಿದ್ದ ಸ್ವಾಗತ, ಸ್ಪಂದನೆ ಹಾಗೂ ಆತಿಥ್ಯವನ್ನು ಬಹುವಾಗಿ



Downloaded From: www.kpscvaani.com

ಮೆಚ್ಚಿಕೊಂಡರು. ವಿಶೇಷವಾಗಿ ರೌಲೆಟ್ ಕಾಯಿದೆಯ ವಿರುದ್ಧದ ಸತ್ಯಾಗ್ರಹವನ್ನು ದೇಶಭಕ್ತ ಕಾರ್ನಾಡ್ ಸದಾಶಿವ ರಾಯರಂತಹ ನಾಯಕರುಗಳು ಮಂಗಳೂರಿನಲ್ಲಿಯೂ ಯಶಸ್ವಿಯಾಗಿ ನಡೆಸಿದ್ದ ಬಗ್ಗೆ ಗಾಂಧೀಜಿಗೆ ಬಹಳ ಮೆಚ್ಚುಗೆ ಇತ್ತು. ಮಂಗಳೂರು ಹಿಂದೂ ಮುಸ್ಲಿಂ ಐಕ್ಯತೆಯನ್ನು ಸಾರುವ ರೀತಿಯಲ್ಲಿ ಖಿಲಾಫತ್ ಚಳವಳಿಯ ಚಟುವಟಿಕೆಗಳನ್ನೂ ಸಂಘಟಿಸಿತ್ತು. ಗಾಂಧೀಜಿ ಮತ್ತು ಶೌಕತ್ ಅಲಿಯವರನ್ನು ಮಂಗಳೂರಿಗೆ ಬರಮಾಡಿಕೊಳ್ಳುವುದರಲ್ಲಿ ಕಾರ್ನಾಡರ ಪಾತ್ರವು ಬಹಳ ಮುಖ್ಯವಾಗಿತ್ತು. ಅವಿಭಜಿತ ದಕ್ಷಿಣ ಕನ್ನಡದ ಜನರು ಸ್ವರಾಜ್ಯ ನಿಧಿ ಹಾಗೂ ಖಿಲಾಫತ್ ನಿಧಿಗಳಿಗೆ ಕೈಲಾದ ದೇಣಿಗೆಯನ್ನು ಸಂಗ್ರಹಿಸಿ ಕೊಟ್ಟಿದ್ದರು.

ಆ ಕಾಲದ ಕೆಲವು ಮೌಖಿಕ ಮೂಲಗಳನ್ನಾಧರಿಸಿದ ದಾಖಲೆಗಳ ಪ್ರಕಾರ ಮಂಗಳೂರಿನಲ್ಲಿ ನೆಲೆಸಿದ್ದ ಗುಜರಾತಿ ಮೂಲದ ವರ್ತಕ ಕುಟುಂಬಗಳು ಮಹಾತ್ಮಾ ಗಾಂಧೀಜಿ ಮತ್ತು ಅಲಿಯವರ ಆತಿಥ್ಯವನ್ನು ವಹಿಸಿಕೊಂಡಿದ್ದವು ಎಂದು ತಿಳಿದು ಬರುತ್ತದೆ. ಆ ಪ್ರಕಾರವಾಗಿ ಬಂದರು ಪ್ರದೇಶದ ಮಾವ್‌ಜಿ ಸೇಟ್ ಎಂಬವರು ಗಾಂಧೀಜಿ ಮತ್ತವರ ತಂಡದ ಆತಿಥ್ಯವನ್ನು ನೋಡಿಕೊಂಡಿದ್ದರೆ, ಶೌಕತ್ ಅಲಿ ಹಾಗೂ ಪರಿವಾರದ ಆತಿಥ್ಯದ ಜವಾಬ್ದಾರಿಯನ್ನು ಗೋಳಿಕಟ್ಟೆ ಬಜಾರ್‌ನ ಊಸೀ ಸೇಟರು ವಹಿಸಿಕೊಂಡಿದ್ದರಂತೆ. ಈ ಬಗ್ಗೆ ಸ್ಪಷ್ಟವಾದ ದಾಖಲೆಗಳು ಈಗ ಲಭ್ಯವಾಗುತ್ತಿಲ್ಲವಾದ ಕಾರಣ ಗಾಂಧೀಜಿಯವರು ಮತ್ತು ಅಲಿಯವರು ಉಳಿದುಕೊಂಡಿದ್ದ ಮನೆಯ ಬಗ್ಗೆ ನಿಖರವಾಗಿ ಹೇಳಲಾಗದು. ಇನ್ನು ಕೆಲವು ಮೂಲಗಳ ಪ್ರಕಾರ ಗಾಂಧೀಜಿಯ ಜೊತೆಯಲ್ಲಿ ಕಸ್ತೂರ್ ಬಾ ಗಾಂಧೀ ಹಾಗೂ ಶೌಕತ್ ಅಲಿಯವರ ಜೊತೆಗೆ ಅವರ ತಾಯಿ ಕೂಡಾ ಬಂದಿದ್ದರೆಂಬುದರ ಬಗ್ಗೆ ಅಸ್ಪಷ್ಟವಾಗಿ ತಿಳಿಯುತ್ತದೆ.

ಗಾಂಧೀಜಿ 29-8-1920ರ 'ನವಜೀವನ' ಪತ್ರಿಕೆಯಲ್ಲಿ ತಮ್ಮ ಪ್ರವಾಸದ ಸಮಯದಲ್ಲಿ ಮಂಗಳೂರಿನಲ್ಲಿನ ಗುಜರಾತಿ ಮೂಲದವರ ಆತಿಥ್ಯದಿಂದ ಶೌಕತ್ ಅಲಿಯವರ ಮುಖ ಸಂತಸದಿಂದ ಅರಳಿದ ಬಗೆಯನ್ನು ವಿವರಿಸುತ್ತಾ ಗುಜರಾತಿ ಮೂಲದ ಹಿಂದುಗಳು ಪರೋಪಕಾರಿಗಳಾಗಿ ಇಲ್ಲಿನ ಮುಸಲ್ಮಾನರೊಂದಿಗೆ ಸೌಹಾರ್ದತೆಯಿಂದ ಇದ್ದ ಬಗೆಯನ್ನು ದಾಖಲಿಸಿದ್ದಾರೆ.

**ಚಾರಿತ್ರಿಕ ಮಹತ್ವ:**

ಅಸಹಕಾರ ಚಳವಳಿಯ ಜಾಗೃತಿಗಾಗಿ ಗಾಂಧೀಜಿ ಕೈಗೊಂಡಿದ್ದ ಈ ಯಾತ್ರೆಯನ್ನು 'ಖಿಲಾಫತ್ ಪ್ರವಾಸ' ಎಂದೂ ಕರೆಯುತ್ತಾರೆ. ಇದು ಗಾಂಧೀಜಿ ಕರಾವಳಿಯ ಕನ್ನಡ ಪ್ರದೇಶಕ್ಕೆ ಅಥವಾ ಇಂದಿನ ಕರಾವಳಿ ಕರ್ನಾಟಕಕ್ಕೆ ನೀಡಿದ್ದ ಮೊದಲ ಭೇಟಿಯಾಗಿತ್ತು. ಒಟ್ಟಿನಲ್ಲಿ ಮಂಗಳೂರಿಗೆ ಗಾಂಧೀಜಿ ನೀಡಿದ್ದ ಪ್ರಥಮ ಭೇಟಿಯಿಂದ ತುಳುನಾಡು ಅಥವಾ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನರು ಪುಳಕಗೊಂಡು ನವಚೈತನ್ಯದಿಂದ ದೊಡ್ಡಸಂಖ್ಯೆಯಲ್ಲಿ ರಾಷ್ಟ್ರೀಯ ಚಳವಳಿಯಲ್ಲಿ ತೊಡಗಿಸಿಕೊಂಡರು. ಮಂಗಳೂರಿನಲ್ಲಿ ಗಾಂಧೀಜಿ ಬೋಧಿಸಿದ ಅಸಹಕಾರದ ಆಂದೋಲನದ ಅಂಶಗಳನ್ನು ಹಾಗೂ ಸ್ವದೇಶಿಯನ್ನು ಕಾರ್ಯರೂಪಕ್ಕೆ ತಂದು ಕಾಸರಗೋಡು, ಮಂಗಳೂರು, ಉಡುಪಿ, ಕುಂದಾಪುರ ಮತ್ತು ಕಾರ್ಕಳ ಸ್ವಾತಂತ್ರ್ಯ ಚಳವಳಿಯ ಜಾಗೃತ ಕೇಂದ್ರಗಳಾದವು. ಈ ಎಲ್ಲಾ ನೆನಪುಗಳ



ಜೊತೆಯಲ್ಲಿ 1920ರಲ್ಲೇ ಕಾಸರಗೋಡಿನ ಜನರು ಗಾಂಧೀಜಿಗೆ ಅರ್ಪಿಸಿದ ಬಿನ್ನವತ್ತಳೆಯಲ್ಲಿ "ನಮ್ಮ ಕನ್ನಡ ಪ್ರಾಂತ್ಯ (our Kannada Province)" ಎಂದು ದಾಖಲಿಸಿದ್ದರೆಂಬ ಸಂಗತಿಯೂ ಈ ಕಾಲಕ್ಕೆ ಚಾರಿತ್ರಿಕ ಮಹತ್ವವನ್ನು ಪಡೆದಿದೆ.

ಆ ಕಾಲದಲ್ಲಿ ಸುಮಾರಾಗಿ 1918-1919ರ ಅವಧಿಯಲ್ಲಿ ಕನ್ನಡ ನಾಡೂ ಸೇರಿದಂತೆ ಇಡಿ ಭಾರತವೇ ಜಾಗತಿಕವಾಗಿ ಹಬ್ಬಿದ್ದ 'ಸ್ಪ್ಯಾನಿಷ್ ಫ್ಲೂ' ಎಂಬ ಸಾಂಕ್ರಾಮಿಕ ಮಹಾಮಾರಿಯಿಂದ ನರಳಿತ್ತು. ಹಾಗೆಯೇ ಬ್ರಿಟಿಷರ ವಿಸ್ತರಣವಾದ ಹಾಗೂ ದುರಾಡಳಿತದಿಂದ ದೇಶದ ಸಂಪತ್ತೆಲ್ಲಾ ಬರಡಾಗುತ್ತಾ ಸ್ಥಳೀಯ ಕರಕುಶಲತೆಗಳೂ ಬರಡಾಗುವ ಹಂತವನ್ನು ತಲುಪಿತ್ತು. ಇಂತಹ ಅತ್ಯಂತ ಜಟಿಲವಾದ ಪರಿಸ್ಥಿತಿಯಲ್ಲಿ ಗಾಂಧೀಜಿ ತಮ್ಮ ನೇತೃತ್ವದ ಮೂಲಕ ನವ ಚೈತನ್ಯದ ಬೆಳಕನ್ನು ನೀಡಿದ್ದರು. ಸರ್ವಧರ್ಮ ಸಮಭಾವ, ಐಕ್ಯತೆ, ಸೋದರತೆ, ಸ್ವದೇಶಿ ಹಾಗೂ ಸತ್ಯಾಗ್ರಹದ ಅರಿವನ್ನು ನೀಡಿ ಗಾಂಧೀಜಿ ಜನರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿದ್ದರು. ಇದರಿಂದಾಗಿಯೇ ಗಾಂಧೀಯುಗದ ಮಹಾ ಚಳವಳಿಯಾಗಿ ಅಸಹಕಾರ ಆಂದೋಲನವು ಗಾಢವಾದ ಪರಿಣಾಮಗಳನ್ನುಂಟು ಮಾಡಿತು.

ಈಗ ಅದೇ ಅಸಹಕಾರ ಆಂದೋಲನದ ನೂರರ ನೆನಪಿನಲ್ಲಿ ನಾವಿದ್ದೇವೆ. ಈಗ ಭಾರತವನ್ನು ಹಾಗೂ ಮಾನವತೆಯನ್ನು ಕೋವಿಡ್-19 ಎಂಬ ವಿಶ್ವವ್ಯಾಪಿ ಮಹಾಮಾರಿಯು ಕಾಡುತ್ತಾ ಇದೆ. ಭಾರತದ ಗಡಿಯಲ್ಲಿ ಚೀನಾದ ವಿಸ್ತರಣಾವಾದಿ ಯುದ್ಧೋನ್ಮಾದವು ನಡೆದಿದೆ. ಇದಲ್ಲದೆಯೇ ಚೀನಾ ದೇಶದ ವಸ್ತುಗಳು, ತಂತ್ರಾಂಶಗಳು ಹಾಗೂ ಉದ್ಯಮಗಳು ನಮ್ಮ ದೇಶದಲ್ಲಿರುವ ಅವಕಾಶಗಳನ್ನು ಕಬಳಿಸುವ ಹಂತದಲ್ಲಿವೆ. ಈ ಎಲ್ಲಾ ಸಂದಿಗ್ಧತೆಗಳ ಸಮಯದಲ್ಲಿ ನಮಗೆ ಗಾಂಧೀಜಿ ತೋರಿಸಿಕೊಟ್ಟಿರುವ ಅಭಯ ಪ್ರಜ್ಞೆಯ ಸಹಿತವಾದ ಮಾನವೀಯತೆ, ಸತ್ಯಾಗ್ರಹ, ಸ್ವದೇಶೀ, ಸ್ವಾವಲಂಬನೆ, ಸ್ವಸಹಾಯ, ಸಮಭಾವ, ನೈರ್ಮಲ್ಯ, ಆರೋಗ್ಯಮಯ ಜೀವನ ಹಾಗೂ ಸರ್ವೋದಯಗಳ ಕಾಯಕದ ಮಾರ್ಗವು ದಾರಿದೀಪವಾಗಬೇಕು. ■



Downloaded From: www.kpscvaani.com

## ಲಾಲ್ ಬಹದ್ದೂರ್ ಶಾಸ್ತ್ರಿ ಅವರ

# ಸರಳ ಜೀವನ



**ಸೌಮ್ಯ, ನಿರ್ಗವಿ, ಅತ್ಯಂತ ಸರಳ ಜೀವಿಯಾಗಿದ್ದ ಲಾಲ್ ಬಹದ್ದೂರ್ ಅವರು ದೇಶಕ್ಕೆ ನೀಡಿದ ಕೊಡುಗೆ ಅಪಾರವಾದುದು. ಅಕ್ಟೋಬರ್ 2ರಂದು ಅವರ 116 ನೇ ಜನ್ಮದಿನಾಚರಣೆಯ ನಿಮಿತ್ತ ಅವರ ಸರಳ ಜೀವನವನ್ನು ನೆನಪು ಮಾಡಿಕೊಳ್ಳುವ ಜೊತೆಗೆ ಅವರ ಆದರ್ಶವನ್ನು ನಾವು ಕೂಡ ಪಾಲಿಸೋಣ.**

ಶಾರ್ವಿ




ಅಹಿಂಸಾ ಪ್ರತಿವಾದಿಯಾದ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಅವರ ಜನ್ಮದಿನದಂದೇ ಅತ್ಯಂತ ಸರಳ ಜೀವಿಯಾದ ಲಾಲ್ ಬಹದ್ದೂರ್ ಶಾಸ್ತ್ರೀ ಅವರ ಜನ್ಮದಿನ ಕೂಡ. ಶಾಸ್ತ್ರಿಯವರು ಸಹ ಸ್ವಾತಂತ್ರ್ಯ ಸಂಗ್ರಾಮದ ಹಲವಾರು ಹೋರಾಟ, ಆಂದೋಲನಗಳ ನಾಯಕತ್ವವನ್ನು ವಹಿಸಿಕೊಂಡು ಬ್ರಿಟಿಷರ ವಿರುದ್ಧ ಹೋರಾಡಿದವರು.

ಉತ್ತರ ಪ್ರದೇಶದ ಮೊಘಲ್ ಸರಾಯ್ ಗ್ರಾಮದಲ್ಲಿ 1904 ರ ಅಕ್ಟೋಬರ್ 2 ರಂದು ಜನಿಸಿದ ಲಾಲ್ ಬಹದ್ದೂರ್ ಶಾಸ್ತ್ರಿ ಅವರಲ್ಲಿ ಅತಿ ಚಿಕ್ಕ ವಯಸ್ಸಿನಲ್ಲಿಯೇ ಹೋರಾಟದ ಮನೋಭಾವ ಕಾಣಿಸುತ್ತಿತ್ತು. ಸ್ವಾತಂತ್ರ್ಯ ಸಂಗ್ರಾಮ ಸಂದರ್ಭದಲ್ಲಿ ಸತ್ಯಾಗ್ರಹಿಯಾಗಿ ಅಖಾಡಕ್ಕೆ ಧುಮುಕಿ ಮಹಾತ್ಮ ಗಾಂಧೀಜಿಯ ಸತ್ಯಾಗ್ರಹ ಚಳವಳಿಯಲ್ಲಿ ಕೈ ಜೋಡಿಸುವಂತೆ ದೇಶಕ್ಕೆ ಕರೆ ನೀಡಿದಾಗ ಅವರು ಕೇವಲ ಹದಿನಾರು ವರ್ಷದ ಪೋರ. ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಚಳವಳಿ ಉತ್ತುಂಗದಲ್ಲಿದ್ದ ಸಮಯ ಅದು. ಬಾಲಕ ಲಾಲ್ ಬಹದ್ದೂರ್ ಅವರು ಗಾಂಧಿ ಅವರ ತತ್ವ, ಸಿದ್ಧಾಂತ, ಅಹಿಂಸಾ ಹೋರಾಟಕ್ಕೆ ಮನಸೋತರು. ಬಾಲಕನಾಗಿದ್ದರೂ ಅಪಾರ ವಿಚಾರ ಹೊಂದಿದ ಅವರು 1921ರಲ್ಲಿ ಗಾಂಧೀಜಿ ಆರಂಭಿಸಿದ ಅಸಹಕಾರ ಚಳಚಳಿಯಲ್ಲಿ ಭಾಗವಹಿಸಿದರು. ಭಾಗವಹಿಸಿದ್ದರ ಫಲವಾಗಿ ತಮ್ಮ ಓದನ್ನು ಅರ್ಧಕ್ಕೆ ನಿಲ್ಲಿಸಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು.



Downloaded From: www.kpscvaani.com

ಬರಗಾಲದಿಂದಾಗಿ ಆಹಾರವನ್ನು ಆಮದು ಮಾಡಿಕೊಳ್ಳುತ್ತಿದ್ದುದರಿಂದ ದೇಶದಲ್ಲಿ ಆರ್ಥಿಕ ಸಂಕಷ್ಟ ಎದುರಾಯಿತು. ಈ ಸಂದರ್ಭದಲ್ಲಿ ಶಾಸ್ತ್ರಿಯವರು ನಾಡಿನ ಜನತೆಯಲ್ಲಿ ಸೋಮವಾರ ಒಂದು ಹೊತ್ತು ಊಟ ಬಿಡುವಂತೆ ಮನವಿ ಮಾಡಿದರು. ಆದರೆ ತಾವು ಮಾತ್ರ ಸೋಮವಾರ ಪೂರ್ತಿ ದಿನ ಉಪವಾಸ ಮಾಡುತ್ತಿದ್ದರು. ಹಾಗಾಗಿ ಆ ದಿನಗಳಲ್ಲಿ ಸೋಮವಾರವನ್ನು **"ಶಾಸ್ತ್ರಿ ಸೋಮವಾರ"** ಎಂದು ಹೇಳಲಾಗುತ್ತಿತ್ತು.



ಪಾಕಿಸ್ಥಾನದ ವಿರುದ್ಧ 1965 ರಲ್ಲಿ ನಡೆದ ಯುದ್ಧದಲ್ಲಿ ಪ್ರಧಾನಿಯಾಗಿ ದಿಟ್ಟ ನಿಲುವು ತಳೆದರು. ಜೈ ಜವಾನ್, ಜೈ ಕಿಸಾನ್ ಘೋಷಣೆ ಅತ್ಯಂತ ಜನಪ್ರಿಯವಾಗಿತ್ತು. 1966 ರ ಜನವರಿ 10 ರಂದು ತಾಷ್ಕೆಂಟ್ ಒಪ್ಪಂದದೊಂದಿಗೆ ಯುದ್ಧಕ್ಕೆ ತೆರೆಬಿತ್ತು. ಒಪ್ಪಂದದ ಮರುದಿನವೇ ಶಾಸ್ತ್ರಿ ತಾಷ್ಕೆಂಟಿನಲ್ಲೇ ನಿಧನರಾದರು. ಅವರ ಸಾವು ವಿವಾದಕ್ಕೆ ಕಾರಣವಾಯಿತು. ಹೃದಯಾಘಾತದಿಂದ ಸಾವು ಎಂಬುದನ್ನು ಅವರ ಕುಟುಂಬ ಒಪ್ಪಲಿಲ್ಲ. ಮರಣೋತ್ತರ ಭಾರತ ರತ್ನ ಪ್ರಶಸ್ತಿ ನೀಡಿ ರಾಷ್ಟ್ರ ಅವರನ್ನು ಗೌರವಿಸಿತು.

ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಬಳಿಕ ಸ್ವಾತಂತ್ರ್ಯ ಸಿಕ್ಕಿದಾಗ ಶಾಸ್ತ್ರಿ ಅವರು ಉತ್ತರ ಪ್ರದೇಶದ ಸಂಸದೀಯ ಕಾರ್ಯದರ್ಶಿಯಾಗಿ ನೇಮಕವಾದರು. ಸರ್ಕಾರ ರಚನೆ ಆಗಿ, ಗೋವಿಂದ ವಲ್ಲಭ ಪಂತ್ ಉತ್ತರ ಪ್ರದೇಶದ ಮುಖ್ಯಮಂತ್ರಿ ಆದಾಗ ಶಾಸ್ತ್ರಿ ಅವರು ಪೊಲೀಸ್ ಹಾಗೂ ಸಾರಿಗೆ ಸಚಿವರಾದರು.

ಹಿಂಸಾಚಾರದಲ್ಲಿ ಗುಂಪು ನಿರತರಾದರೆ ಅವರನ್ನು ಚದುರಿಸಲು ವಾಟರ್ ಜೆಟ್ ಬಳಸುವ ಪ್ರಯೋಗವನ್ನು ನಡೆಸಿದ ಮೊದಲ ವ್ಯಕ್ತಿ ಶಾಸ್ತ್ರಿ ಅವರು. ಅದಕ್ಕೂ ಮೊದಲು ಗುಂಪು ಚದುರಿಸಲು ಪೊಲೀಸರು ಲಾಠಿ ಬಳಸುತ್ತಿದ್ದರು. 1947 ರ ಕೋಮು ಗಲಭೆಯನ್ನು ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಜವಹರಲಾಲ್ ನೆಹರೂ ಪ್ರಧಾನಿ ಆದಾಗ ಶಾಸ್ತ್ರಿ ಅವರನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಯಿತು. ಅಭ್ಯರ್ಥಿಗಳ ಆಯ್ಕೆ, ಪ್ರಚಾರ ಹಾಗೂ ಚುನಾವಣಾ ಚಟುವಟಿಕೆ ಜವಾಬ್ದಾರಿಯನ್ನು ಅವರಿಗೆ ವಹಿಸಲಾಗಿತ್ತು.

ಸ್ವತಂತ್ರ್ಯ ಭಾರತದ ಮೊದಲ ಸಂಪುಟದಲ್ಲಿ ಶಾಸ್ತ್ರಿ ರೈಲ್ವೆ ಹಾಗೂ ಸಾರಿಗೆ ಸಚಿವರಾಗಿದ್ದರು. ರೈಲ್ವೆ ಖಾತೆ ಹೊಂದಿದ ಸಮಯದಲ್ಲಿ ಸಂಭವಿಸಿದ ರೈಲ್ವೆ ದುರಂತದ ನೈತಿಕ ಜವಾಬ್ದಾರಿ ಹೊತ್ತು ಶಾಸ್ತ್ರಿಜೀ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. 1961 ರಲ್ಲಿ ಗೃಹ ಮಂತ್ರಿಯಾದರು. ಪ್ರಧಾನಿಯಾಗಿದ್ದ ನೆಹರೂರವರು ನಿಧನರಾದಾಗ ಜೂನ್ 9, 1964ರಂದು ಶಾಸ್ತ್ರಿಯವರನ್ನು ಪ್ರಧಾನಿಯಾಗಿ ಆಯ್ಕೆ ಮಾಡಿತು.

**ಪ್ರಾಮಾಣಿಕ, ಸ್ವಾಭಿಮಾನಿ**

ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಪ್ರಾಮಾಣಿಕ, ದಕ್ಷ ಪಧಾನಿ ಎನಿಸಿಕೊಂಡವರು. ಪ್ರಾಮಾಣಿಕತೆಯಿಂದಾಗಿ ಬೇರೆ ದೇಶಗಳಿಗೂ ಮಾದರಿ ಆಗಿದ್ದರು. ಅವರು ಭಾರತವನ್ನು ಸ್ವಾಭಿಮಾನಿ ದೇಶವನ್ನಾಗಿ ರೂಪಿಸಬೇಕೆಂದು ಪಣತೊಟ್ಟರು. ಅ ಕಾಲದ ಅವಧಿಯಲ್ಲಿ ದೇಶದಲ್ಲಿ ಬರಗಾಲ ಇತ್ತು. ಹೊರದೇಶದಿಂದ ಆಹಾರ ಆಮದು ಮಾಡಿಕೊಳ್ಳಬೇಕಾಯಿತು. ಇದರಿಂದಾಗಿ ದೇಶವು ಸಾಲದ ಸುಳಿಯಲ್ಲಿ ಸಿಲುಕುವಂತಹ ಪರಿಸ್ಥಿತಿ ಬಂತು.

ಬರದಿಂದ ಜನತೆ ಕಂಗೆಟ್ಟದನ್ನು ಅರಿತ ಅವರು ವಾರದಲ್ಲಿ ಒಂದು ದಿನ ಊಟ ಬಿಟ್ಟರೆ ಎಷ್ಟು ಆಹಾರ ಸಂಗ್ರಹ ಆಗುವುದೆಂದು ಲೆಕ್ಕಾಚಾರ ಹಾಕಿದರು. ಸೋಮವಾರ ರಾತ್ರಿ ಊಟ ಬಿಡಲು ಸಾರ್ವಜನಿಕರಲ್ಲಿ ಮನವಿ ಮಾಡಿದರು. ಅದರಂತೆ ತಾವು ಸೋಮವಾರ ಊಟ ತ್ಯಜಿಸಿದರು. ಹಾಗಾಗಿ ಆದಿನಗಳಲ್ಲಿ ಸೋಮವಾರ ಶಾಸ್ತ್ರಿ ಸೋಮವಾರ ಎಂದೇ ಪ್ರಚಲಿತದಲ್ಲಿತ್ತು.

**ಶಾಸಿಯವರ ಫಿಯೆಟ್ ಕಾರು:**

1965ನೇ ಇಸವಿಯಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ದೇಶದ ಪ್ರಧಾನಿ. ಅವರ ಮನೆಯವರ ಒತ್ತಾಸೆಗೆ ಮಣಿದು ಫಿಯೆಟ್ ಕಾರು ಖರೀದಿಸಿದರು. ಅವರ ಕಾಲದ ಅವಧಿಯಲ್ಲಿ ಖರೀದಿಸಿದ

**ವಿದೇಶಿ ನೀತಿ**

ಅಂದಿನ ಸೋವಿಕ್ ಯೂನಿಯನ್ ಜತೆ ನಿಕಟ ಸಂಪರ್ಕ ಸಾಧಿಸಿದರು. ಅಲ್ಲದೆ ನೆರೆಯ ಚೀನಾ ಹಾಗೂ ಪಾಕಿಸ್ಥಾನದ ಜತೆ ಮಿಲಿಟರಿ ಬಾಂಧವ್ಯಕ್ಕೆ ಕಾರಣರಾದರು. ರಾಷ್ಟ್ರದ ರಕ್ಷಣಾ ಬಜೆಟ್ ಹೆಚ್ಚಿಸಲು ಸಹ ನಿರ್ಧರಿಸಿದರು.

ಶ್ರೀಲಂಕಾದಲ್ಲಿರುವ ಭಾರತೀಯ ತಮಿಳರ ಸ್ಥಿತಿಗತಿ ಸುಧಾರಣೆಗೆ ಶ್ರೀಲಂಕಾದ ಪ್ರಧಾನಿಯಾಗಿದ್ದ ಸಿರಿಮಾವೋ ಬಂಡಾರನಾಯಕೆ ಜತೆ ಒಪ್ಪಂದಕ್ಕೆ ಸಹಿ ಹಾಕಿದರು. ಈ ಒಪ್ಪಂದ ಸಿರಿಮ-ಶಾಸ್ತ್ರಿ ಒಪ್ಪಂದ ಎಂದೇ ಪರಿಚಿತವಾಗಿದೆ.



Downloaded From: www.kpscvaani.com



ಕಾರು ಇದಾಗಿದೆ. ಆ ಸಮಯದಲ್ಲಿ ಫಿಯೆಟ್ ಕಾರಿನ ಬೆಲೆ 12,000 ರೂ. ಆದರೆ, ಶಾಸ್ತ್ರಿ ಅವರ ಬ್ಯಾಂಕ್ ಖಾತೆಯಲ್ಲಿ ಕೇವಲ 7,000 ರೂ. ಇತ್ತು. ಅದರಲ್ಲಿ 5,000 ರೂ. ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿದರು. ಬ್ಯಾಂಕ್ ಕೇವಲ ಒಂದೂವರೆ ಗಂಟೆಯಲ್ಲಿ ಲೋನ್ ಮಂಜೂರು ಮಾಡಿತು. ಆದರೆ, ಈ ನಿಯಮವನ್ನು ಒಪ್ಪಿಕೊಳ್ಳದ ಲಾಲ್ ಬಹದ್ದೂರ್ ಶಾಸ್ತ್ರಿ, ಸಾಮಾನ್ಯರಿಗೆ ಮಾಡುವಂತೆ ಬ್ಯಾಂಕ್ ಮೀಟಿಂಗ್‌ನಲ್ಲಿ ಒಪ್ಪಿಗೆ ಪಡೆದು ಸರದಿ ಪ್ರಕಾರ ಸಾಲ ನೀಡಬೇಕೆಂದು ಸಲಹೆ ನೀಡಿದರು.

ಅದೇ ನಿಯಮದ ಪ್ರಕಾರ ಸಾಲವನ್ನು ಕಟ್ಟುತ್ತೇನೆ. ನಾನು ಪ್ರಧಾನಿ ಎಂದು ವಿನಾಯಿತಿ ಬೇಡ ಎಂದರು. ಬ್ಯಾಂಕ್ ಮತ್ತೆ ಅದೇ ರೀತಿ ನಿಯಮಾವಳಿಯನ್ನು ಮುಂದುವರೆಸಿತು. ನಂತರದ ದಿನದಲ್ಲಿ ಸಾಲದ ಸಹಿತ ಕಾರು ಶಾಸ್ತ್ರಿ ಅವರ ಮನೆ ಅಂಗಳಕ್ಕೆ ಬಂದಿತು. 1966ರಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಮರಣವನ್ನಪ್ಪಿದ ಬಳಿಕ ಬ್ಯಾಂಕ್‌ನಿಂದ ಅವರ ಪತ್ನಿ ಲಲಿತಾ ಅವರಿಗೆ ಸಾಲ ಪಾವತಿಸುವಂತೆ ನೋಟಿಸ್ ಬಂತು. ಪತ್ನಿ ತನ್ನ ಕುಟುಂಬದ ನಿವೃತ್ತಿ ವೇತನದ ಮೊತ್ತದಲ್ಲಿ ತಿಂಗಳು ತಿಂಗಳು ಪಾವತಿಸುತ್ತೇನೆಂದು ಬ್ಯಾಂಕ್‌ಗೆ ಮನವಿ ಮಾಡಿದರು. ಅದರಂತೆ ಸಾಲವನ್ನು ಮರುಪಾವತಿಸಿ ಋಣಮುಕ್ತರಾದರು.

**ಉದ್ಯೋಗಕ್ಕಾಗಿ ಪುತ್ರನ ಅರ್ಜಿ**

ಶಾಸ್ತ್ರಿ ಅವರ ಪುತ್ರ ಉದ್ಯೋಗಕ್ಕಾಗಿ ಇಲಾಖೆಯೊಂದಕ್ಕೆ ಅರ್ಜಿ ಸಲ್ಲಿಸಿದ್ದರು. ಅವರು ಮಗನನ್ನು ಸ್ಯೆಂಟ್ ಸ್ಟೀನ್ ಕಾಲೇಜಿಗೆ ಸೇರಿಸುವಾಗ ಅರ್ಜಿಯಲ್ಲಿ ತಂದೆಯ ವೃತ್ತಿ ಕಾಲಂನಲ್ಲಿ ಸರಕಾರಿ ಸೇವಕ ಅಂತ ನಮೂದಿಸಿದ್ದರು. ಉದ್ಯೋಗದ ದಾಖಲಾತಿಗಾಗಿ ಸಾಮಾನ್ಯರೊಂದಿಗೆ ಸರದಿಯಲ್ಲಿ ನಿಂತಿದ್ದ ಶಾಸ್ತ್ರಿ ಅವರ ಪುತ್ರ ತಮ್ಮ ಸರದಿ ಬಂದಾಗ ಸಲ್ಲಿಸಿದ ಕಾಲೇಜು ಸರ್ಟಿಫಿಕೇಟ್‌ಗಳನ್ನು ಅಧಿಕಾರಿಗಳು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಗುಮಾಸ್ತರೊಬ್ಬರು, ನಿಮ್ಮ ತಂದೆ ಯಾವ ಸರ್ಕಾರಿ ಸೇವೆಯಲ್ಲಿ ಇದ್ದಾರೆಂದು ಪ್ರಶ್ನಿಸಿದರು. ಆಗ ಅವರ ಮಗ, ನನ್ನ ತಂದೆ ದೇಶದ ಪ್ರಧಾನ ಮಂತ್ರಿ ಆಗಿದ್ದಾರೆಂದರು. ಪ್ರಧಾನಿ ಮಗ ಎಂದ ಕೂಡಲೇ ಆ ಗುಮಾಸ್ತ ಬೆಚ್ಚಿಬಿದ್ದರು. ಅಂತಹ ಸರಳ ವ್ಯಕ್ತಿತ್ವ ಲಾಲ್ ಬಹದ್ದೂರ್ ಶಾಸ್ತ್ರಿ ಅವರದ್ದು. ಅವರ ಮಾದರಿ ಜೀವನ ಎಲ್ಲರಿಗೂ ಆದರ್ಶವಾದುದು..

ನೆಹರೂ ಅನುಸರಿಸಿದ ಸಾಮಾಜಿಕ ಆರ್ಥಿಕ ನೀತಿಯನ್ನೇ ಶಾಸ್ತ್ರಿ ಅನುಸರಿಸಿದರೂ ಶ್ವೇತ ಕಾಂತ್ರಿಗೆ ಒತ್ತು ನೀಡಿದರು. ಈ ಮೂಲಕ ಕ್ಷೀರ ಉತ್ಪಾದನೆ ಹಾಗೂ ಸರಬರಾಜಿಗೆ ನೆರವಾದರು. ಗುಜರಾತ್‌ನ ಅಮೂಲ್ ಮಿಲ್ಕ್ ಕೋ ಆಪರೇಟಿವ್ ಆಫ್ ಆನಂದ್‌ಗೆ ಬೆಂಬಲ ನೀಡಿದರು. ಜತೆಗೆ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿ ಸ್ಥಾಪಿಸಿದರು.

ಅಮೂಲ್‌ಗೆ ಭೇಟಿ ನೀಡಿದ್ದ ಸಮಯದಲ್ಲಿ ಒಂದುರಾತ್ರಿ ಗ್ರಾಮದಲ್ಲಿ ರೈತರ ಜತೆ ವಾಸ್ತವ್ಯಹೂಡಿ, ಕಾಲಕಳೆಯುವ ಮೂಲಕ ಯಶಸ್ಸಿನ ಗುಟ್ಟು ಅರಿತರು. ಆ ಸಮಯದಲ್ಲಿ ಅಮೂಲ್‌ನ ಜನರಲ್ ಮ್ಯಾನೇಜರ್ ಆಗಿದ್ದ ವರ್ಗೀಸ್ ಕುರಿಯನ್ ಜತೆ ತಮ್ಮ ಆಶಯ ಚರ್ಚಿಸಿ ರಾಷ್ಟ್ರದ ಇತರ ಭಾಗದಲ್ಲಿಯೂ ಅದನ್ನು ಜಾರಿಗೆ ತಂದರು. ಈ ಮೂಲಕ ರೈತರ ಸಾಮಾಜಿಕ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ಕಾರಣರಾದರು.

ಇಂತಹ ಸರಳ, ಸಜ್ಜನ ವ್ಯಕ್ತಿಯ ಆದರ್ಶವನ್ನು ನಾವು ಕಿಂಚಿತ್ತಾದರೂ ಪಾಲಿಸಿದರೆ ದೇಶ ಕಂಡಿತವಾಗಿ ಬದಲಾವಣೆಯನ್ನು ಕಾಣುತ್ತದೆ.



Downloaded From: www.kpscvaani.com

# ಅಂದದ ಅಂಬಾವಿಲಾಸ ಅರಮನೆ

**ಅರಮನೆಗಳ ನಗರ ಎಂದೇ ಖ್ಯಾತಿಗೊಂಡಿರುವ ಮೈಸೂರಿನಲ್ಲಿ ಅನೇಕ ಅರಮನೆಗಳಿವೆ. ಇವುಗಳಲ್ಲಿ ಪ್ರಧಾನವಾಗಿರುವ ಅಂಬಾ ವಿಲಾಸ ಅರಮನೆಯು ಭಾರತದ ಭವ್ಯವಾದ ರಾಜ ಕಟ್ಟಡಗಳಲ್ಲಿ ಒಂದೆನಿಸಿಕೊಂಡಿದೆ. ಇದು ಹಿಂದಿನ ಮೈಸೂರು ಸಂಸ್ಥಾನದ ಒಡೆಯರ್ ವಂಶದ ಅರಸರ ನಿವಾಸ ಹಾಗೂ ದರ್ಬಾರು ಶಾಲೆಯಾಗಿತ್ತು.**

ವಿದ್ಯಾ.ವಿ.ಹಾಲಭಾವಿ

ಈಗಿರುವ ಅರಮನೆ ಜಾಗವನ್ನು ಮೂಲತಃ 'ಪುರಗಿರಿ' ಎಂದು ಕರೆಯಲಾಗುತ್ತಿತ್ತು. ಈಗ ಇದನ್ನು ಹಳೆಯ ಕೋಟೆ (ಓಲ್ಡ್ ಫೋರ್ಟ್)ಎಂದು ಕರೆಯಲಾಗುತ್ತದೆ. 14 ನೇ ಶತಮಾನದಲ್ಲಿ ಆದಿ ಯದುರಾಯನು ಹಳೆಯ ಕೋಟೆಯಲ್ಲಿ ಮೊದಲ ಅರಮನೆಯನ್ನು ಕಟ್ಟಿದನು. ನಂತರ ಅದನ್ನು ನೆಲಸಮಗೊಳಿಸಿ ಅನೇಕ ಬಾರಿ ಪುನರ್ ನಿರ್ಮಿಸಲಾಯಿತು. ಹಳೆಯ ಅರಮನೆಯು ಸುಟ್ಟು ಹೋದ ನಂತರ ಪ್ರಸ್ತುತ ರಚನೆಯನ್ನು 1897 ಮತ್ತು 19121 ರ ನಡುವೆ ನಿರ್ಮಿಸಲಾಯಿತು.

ಹಳೆಯ ಅರಮನೆ ಅಥವಾ ಮರದ ಅರಮನೆಯು 1896 ರ ದಸರ ಉತ್ಸವದ ಸಮಯದಲ್ಲಿ ಬೆಂಕಿಗೆ ಸಿಲುಕಿ ಬೂದಿಯಾಯಿತು. ಮಹಾರಾಜ ನಾಲ್ಕನೆಯ ಕೃಷ್ಣರಾಜ ಒಡೆಯರ್ ಮತ್ತು ಅವರ ತಾಯಿ ಮಹಾರಾಣಿ ಕೆಂಪನಂಜಮ್ಮಣ್ಣಿ ದೇವಿಯವರು ಹೊಸ ಅರಮನೆಯನ್ನು ನಿರ್ಮಿಸಲು ಬ್ರಿಟಿಷ್ ವಾಸ್ತು ಶಿಲ್ಪಿ ಹೆನ್ರಿ ಇರ್ವಿನ್ ಅವರನ್ನು ನಿಯೋಜಿಸಿದರು. ಏತನ್ಮಧ್ಯೆ ರಾಜಮನೆತನದವರ ನಿವಾಸ ಜಗನ್ಮೋಹನ ಅರಮನೆಯ ಹತ್ತಿರಕ್ಕೆ ಸ್ಥಳಾಂತರವಾಯಿತು. ಮೈಸೂರು ಅರಮನೆ ವಿಭಾಗದ ಕಾರ್ಯ ನಿರ್ವಾಹಕ ಎಂಜಿನೀಯರ್ ಬಿ.ಪಿ ರಾಘವುಲು ನಾಯ್ಡು ಇದರ ನಿರ್ಮಾಣದ ಮೇಲ್ವಿಚಾರಣೆಯನ್ನು ವಹಿಸಿದ್ದರು.





Downloaded From: www.kpscvaani.com





ಅವರು ದೆಹಲಿ, ಮದ್ರಾಸ್, ಕಲ್ಕತ್ತಾಗೆ ಭೇಟಿ ನೀಡಿದ ಸಂದರ್ಭದಲ್ಲಿ ವಿಸ್ತಾರವಾದ ವಾಸ್ತುಶಿಲ್ಪದ ಅಧ್ಯಯನಗಳನ್ನು ನಡೆಸಿದ್ದರು, ಮತ್ತು ಇವುಗಳನ್ನು ಹೊಸ ಅರಮನೆಯ ಯೋಜನೆಯಲ್ಲಿ ಬಳಸಲಾಗುತ್ತಿತ್ತು. ಇದರ ನಿರ್ಮಾಣ ವೆಚ್ಚ 41,47,913 ರೂಪಾಯಿಗಳಾಗಿತ್ತು, ಮತ್ತು ಇದು 1912ರಲ್ಲಿ ಪೂರ್ಣಗೊಂಡಿತು. ಅರಮನೆಯ ನಿರ್ಮಾಣ 1912ರಲ್ಲಿ ಪೂರ್ಣಗೊಂಡರೂ ಕೋಟೆಯ ಅಂದಚಂದವನ್ನು ಇನ್ನಷ್ಟು ಹೆಚ್ಚಿಸುವ ಕಾರ್ಯವನ್ನು ಮುಂದುವರೆಸಲಾಯಿತು. ಮಹಾರಾಜ ಜಯಚಾರಾಜೇಂದ್ರ ಒಡೆಯರ್ ಆಳ್ವಿಕೆಯ ಕಾಲದಲ್ಲಿ ಈಗಿನ ಸಾರ್ವಜನಿಕ ದರ್ಬಾರ್ ಹಾಲ್ ವಿಂಗ್ ಸೇರಿದಂತೆ ಮತ್ತಷ್ಟು ವಿಸ್ತರಿಸಲಾಯಿತು.

ಅರಮನೆ ಗುಮ್ಮಟಗಳ ವಾಸ್ತುಶಿಲ್ಪ ಶೈಲಿಯನ್ನು ಸಾಮಾನ್ಯವಾಗಿ ಇಂಡೋ ಸೆರಾಸೆನಿಕ್ ಎಂದು ವಿವರಿಸಲಾಗಿದೆ. ಜೊತೆಗೆ ಹಿಂದೂ, ಮೊಘಲ್,ರಜಪೂತ್ ಮತ್ತು ಗೋಥಿಕ್ ಶೈಲಿಗಳ ಮಿಶ್ರಣವಿದೆ. ಇದು ಅಮೃತಶಿಲೆಯ ಗುಮ್ಮಟಗಳನ್ನು ಹೊಂದಿರುವ ಮೂರು ಅಂತಸ್ತಿನ ಕಲ್ಲಿನ ರಚನೆಯಾಗಿದ್ದು ಐದು ಅಂತಸ್ತಿನ 145 ಅಡಿ ಗೋಪುರವನ್ನು ಹೊಂದಿದೆ. ಅರಮನೆಯು ದೊಡ್ಡ ಉದ್ಯಾನದಿಂದ ಆವೃತವಾಗಿದೆ. ಪ್ರವೇಶ ದ್ವಾರ ಮತ್ತು ಕಮಾನು, ಮೈಸೂರು ರಾಜ್ಯದ ಲಾಂಚನವನ್ನು ಹೊಂದಿದೆ, ಮತ್ತು ಇದರ ಸುತ್ತಲೂ ಎಂದಿಗೂ ಭಯಭೀತರಾಗುವುದಿಲ್ಲ ಎಂಬ ಧ್ಯೇಯ ವಾಕ್ಯವನ್ನು ಸಂಸ್ಕೃತದಲ್ಲಿ ಬರೆಯಲಾಗಿದೆ. ಮುಖ್ಯ ಸಂಕೀರ್ಣವು 245 ಅಡಿ ಉದ್ದ ಮತ್ತು 156 ಅಡಿ ಅಗಲವಿದೆ. ಯಾವುದೇ ಬೆಂಕಿಯನ್ನು ತಡೆಯುವ ಸಲುವಾಗಿ ಅರಮನೆಯ ಎಲ್ಲಾ ಭಾಗಗಳಲ್ಲಿ ಅಗ್ನಿಶಾಮಕ ಯಂತ್ರಗಳಿವೆ. ಅರಮನೆಯು ಮೂರು ಪ್ರವೇಶ ದ್ವಾರಗಳನ್ನು ಹೊಂದಿದೆ. ಮುಂದೆ ಇರುವ ಪೂರ್ವ ಗೇಟ್ ಅನ್ನು ದಸರಾ ಸಮಯದಲ್ಲಿ ಮತ್ತು ಗಣ್ಯರಿಗಾಗಿ ಮಾತ್ರ ತೆರೆಯಲಾಗುತ್ತದೆ. ದಕ್ಷಿಣ ಗೇಟ್ ಅನ್ನು ಸಾರ್ವಜನಿಕರ ಪ್ರವೇಶಕ್ಕೆ ಮತ್ತು ಪಶ್ಚಿಮ ಗೇಟನ್ನು ಸಾಮಾನ್ಯವಾಗಿ ದಸರಾ ಸಮಯದಲ್ಲಿ ಮಾತ್ರ ತೆರೆಯಲಾಗುತ್ತದೆ.

ಕಡು ಗುಲಾಬಿ ಅಮೃತಶಿಲೆ ಗುಮ್ಮಟಗಳುಳ್ಳ ಬೂದುಬಣ್ಣ ಗ್ರಾನೈಟ್‌ನ ಮೂರು ಅಂತಸ್ತಿನ ಕಲ್ಲಿನ ಕಟ್ಟಡವು ಎತ್ತರದ ಕಂಬಗಳಿಂದ ಆಧಾರವಾಗಿರುವ ಹಲವಾರು ವಿಸ್ತಾರ ಕಮಾನುಗಳನ್ನು ಹೊಂದಿದೆ. ಮಧ್ಯದ ಕಮಾನಿನ ಮೇಲೆ ಸಂಪತ್ತು, ಸಮೃದ್ಧಿ ಮತ್ತು ಅದೃಷ್ಟದ ದೇವತೆಯಾದ ಗಜಲಕ್ಷ್ಮಿಯ ಶಿಲ್ಪವಿದೆ. ಹಳೆಯ ಕೋಟೆಯೊಳಗೆ ಮೂರು ಪ್ರಮುಖ ದೇವಾಲಯಗಳೂ ಹಾಗೂ ಅರಮನೆಯ ಹೃದಯ ಕಟ್ಟಡದೊಳಗೆ ಸುಮಾರು ಹದಿನೆಂಟು ದೇವಾಲಯಗಳಿವೆ. ಈ ಅರಮನೆಯನ್ನು ಇನ್ನೂ ಪ್ರಾಚೀನವಾದ ಪರಕಲಾ ಮಠದ ಪ್ರಧಾನ ಕಚೇರಿಯ ಪಕ್ಕದಲ್ಲಿ ನಿರ್ಮಿಸಲಾಗಿದೆ. ಇದರ ಮುಖ್ಯಸ್ಥರು ಮೈಸೂರು ರಾಜರ ರಾಜಗುರುಗಳಾಗಿ (ರಾಯಲ್ ಟೀಚರ್ ಮತ್ತು ಮಾರ್ಗದರ್ಶಿ) ಉಳಿದಿದ್ದಾರೆ. ಮೈಸೂರಿನ ರಾಜರು ಚಾಮುಂಡಿ ದೇವಿಯ ಪರಮ ಭಕ್ತರಾಗಿದ್ದರಿಂದ ಅರಮನೆಯು ಚಾಮುಂಡಿ ಬೆಟ್ಟಕ್ಕೆ ಅಭಿಮುಖವಾಗಿದೆ.

ಈ ಅರಮನೆಯಲ್ಲಿ ರಾಜಮನೆತನದ ವಿಧ್ಯುಕ್ತ ಸಭೆಗಳು ನಡೆಯುವ ದರ್ಬಾರ್ ಎಂದು ಕರೆಯಲ್ಪಡುವ ಎರಡು ಸಭಾಂಗಣಗಳಿವೆ. ಅದ್ದೂರಿಯಾಗಿ ಅಲಂಕರಿಸಲ್ಪಟ್ಟ ಗಾಜು ಕನ್ನಡಿಗಳ ಒಳಾಂಗಣ, ಕಲಾತ್ಮಕವಾಗಿ ಕೆತ್ತಿರುವ ಮರದ ಬಾಗಿಲುಗಳು, ಮೊಸಾಯಿಕ್ ಮಹಡಿಗಳು ಮತ್ತು ಸುತ್ತಲೂ ವಿಸ್ತಾರವಾದ ಉದ್ಯಾನವನವನ್ನು ಇಲ್ಲಿ ನಾವು ಕಾಣಬಹುದಾಗಿದೆ. ವಿಶೇಷ ಸಂದರ್ಭಗಳಲ್ಲಿ ಈ ಅರಮನೆಯನ್ನು ವಿದ್ಯುತ್ ದೀಪಗಳಿಂದ ಬೆಳಗಿಸಿದಾಗ ನೋಡಲು ಎರಡು ಕಣ್ಣುಗಳು ಸಾಲದು ಎನ್ನಿಸುತ್ತದೆ! ಭಾರತದ ಅತ್ಯಂತ ಪ್ರವಾಸಿ ಆಕರ್ಷಣೆಯ ಕೇಂದ್ರಗಳಲ್ಲಿ ಒಂದಾಗಿರುವ ಮೈಸೂರು ಅರಮನೆಗೆ ವಾರ್ಷಿಕವಾಗಿ ಆರು ಲಕ್ಷಕ್ಕೂ ಹೆಚ್ಚು ಪ್ರವಾಸಿಗರು ಭೇಟಿ ನೀಡುತ್ತಾರೆ. ನೀವು ಮೈಸೂರಿಗೆ ಭೇಟಿ ನೀಡಿದಾಗ ಮರೆಯದೇ ಅಂಬವಿಲಾಸ ಅರಮನೆಯನ್ನು ನೋಡಿಯೇ ಹೋಗಿ.



Downloaded From: www.kpscvaani.com

ವಿಶ್ವವಿಖ್ಯಾತ

# ಮೈಸೂರು ದಸರಾದ ವೈಶಿಷ್ಟ್ಯತೆ



**ಈ ವರ್ಷ ಕೋವಿಡ್ ಹಿನ್ನೆಲೆಯಲ್ಲಿ ದಸರಾ ಮಹೋತ್ಸವವನ್ನು ಸರಳವಾಗಿ ಆಚರಿಸಲು ಸರ್ಕಾರ ತೀರ್ಮಾನಿಸಿದೆ. ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ತಲತಲಾಂತರದಿಂದ ನಡೆದುಕೊಂಡು ಬರುತ್ತಿರುವ ಸಾಂಪ್ರದಾಯಿಕ ಆಚರಣೆಯನ್ನು ಕೈ ಬಿಡದೆ, ವೈಭವಕ್ಕೆ ಕಡಿವಾಣ ಹಾಕುವ ಮೂಲಕ ಸರಳವಾಗಿ ಆಚರಣೆ ಮಾಡಲು ನಿರ್ಧರಿಸಲಾಗಿದೆ.**

ಬನ್ನೂರು ಕೆ. ರಾಜು

**ನಾ**ಡದೇವತೆ ಚಾಮುಂಡೇಶ್ವರಿಯ ಅಗ್ರಪೂಜೆ ಮತ್ತು ದಸರಾ ಉದ್ಘಾಟನೆಯನ್ನು ಕೋವಿಡ್‌ಗಾಗಿ ಶ್ರಮಿಸುತ್ತಿರುವ ಕೊರೊನಾ ಯೋಧರಾದ ವೈದ್ಯರು, ನರ್ಸ್, ಆಶಾ ಕಾರ್ಯಕರ್ತರು, ಪೌರ ಕಾರ್ಮಿಕರು ಹಾಗೂ ಪೊಲೀಸ್ ಅವರಿಂದ ನೆರವೇರಿಸುವುದು ಸೂಕ್ತವೆಂದು ತೀರ್ಮಾನಿಸಲಾಯಿತು.

ಕೊರೊನಾ ಹಿನ್ನೆಲೆಯಲ್ಲಿ ಸರಳವಾಗಿ ದಸರಾವನ್ನು ಆಚರಿಸಲು ತೀರ್ಮಾನಿಸಲಾಗಿರುವುದರಿಂದ ಹೆಚ್ಚಿನ ಜನಸಂದಣಿ ಸೇರದಂತೆ ಸಾಂಕೇತಿಕವಾಗಿ ಅರಮನೆ ಆವರಣಕ್ಕೆ ಮಾತ್ರ ದಸರಾ ಆಚರಣೆ ಜರುಗಲಿದೆ. ಆಹಾರ ಮೇಳ, ಕ್ರೀಡೆ, ಯುವದಸರಾ ಮುಂತಾದ ಕಾರ್ಯಕ್ರಮಗಳನ್ನು ಈ ಬಾರಿ ಕೈಬಿಡಲಾಗಿದ್ದು, ಚಾಮುಂಡೇಶ್ವರಿ ದೇವಸ್ಥಾನದಲ್ಲಿ ವಿದ್ಯುಕ್ತವಾಗಿ ಪೂಜೆ ನೆರವೇರಿಸಿ, 5–6 ಆನೆಗಳನ್ನು ಮಾತ್ರ ಬಳಸಿ ಜಂಬೂ



Downloaded From: www.kpscvaani.com



ಸವಾರಿಯನ್ನು ಅರಮನೆ ಆವರಣದಲ್ಲಿ ಮಾತ್ರ ನಡೆಸಲಾಗುವುದು. ದಸರಾ ಆಚರಣೆ ಸರಳವಾದರೂ ದಸರಾ ಆಚರಣೆಯನ್ನು ಮೆಲುಕು ಹಾಕುವ ಮೂಲಕ ಅದರ ವೈಭವ ಮತ್ತು ವೈಶಿಷ್ಟ್ಯವನ್ನು ಮನದಾಳದಲ್ಲಿ ಕಟ್ಟಿಕೊಳ್ಳೋಣ.

**"ಹೆಜ್ಜೆಯ ಹಾಕುತ ಬನ್ನಿರಿ ಮುಂದೆ**
**ನೋಡಲು ದಸರೆಯ ಹಬ್ಬವನು**
**ಉತ್ಸಾಹದ ಕಿರುಗೆಜ್ಜೆಯ ಕಟ್ಟಿ**
**ಹಾಡಿರಿ ನಾಡಿನ ಕಬ್ಬವನು ........"**

ಹೀಗೆ ದಸರೆಯ ಉತ್ಸಾಹ-ಹುಮ್ಮಸ್ಸು, ಸಂತಸ-ಸಂಭ್ರಮಗಳ ಬಗ್ಗೆ ಖ್ಯಾತ ಕವಿ ಚುಟುಕು ಬ್ರಹ್ಮ ದಿನಕರ ದೇಸಾಯಿ ಅವರು ತಮ್ಮದೊಂದು ಅಪರೂಪದ ದೀರ್ಘ ಕವಿತೆಯಲ್ಲಿ ಬರೆಯುತ್ತಾ ಇಡೀ ಕವನದ ತುಂಬಾ ದಸರೆಯ ಬೆಳಕನ್ನು ಚೆಲ್ಲಿ ಅದರ ಮಹತ್ವವನ್ನು ಅಕ್ಷರಗಳಲ್ಲಿ ಕಟ್ಟಿ ಕೊಡುತ್ತಾ ತಮ್ಮ ದಸರೆಯ ಮಧುರ ಕಾವ್ಯವನ್ನು ಹೀಗೆ ಮುಕ್ತಾಯಗೊಳಿಸುತ್ತಾರೆ.

**"ಅಂದು ಮೂಡುವನು ದಸರೆಯ ಅರುಣ**
**ಅಜ್ಞಾನದ ಕತ್ತಲೆಗದು ಮರಣ**
**ಮಾನವ ಧರ್ಮದ ದಸರೆಯ ಮಾಡಿ**
**ಕನ್ನಡ ನಾಡಿನ ಹಾಡನು ಹಾಡಿ"**

ಹೌದು, "ಮೈಸೂರು ದಸರಾ" ಎಂದರೆ ಹಾಗೆಯೇ. ಅದು ತುದಿ ಮೊದಲಿಲ್ಲದ ಸಂಭ್ರಮೋಲ್ಲಾಸದ ನವರಾತ್ರಿಯ ಬೆಳಕಿನ ಮಹಾಪರ್ವ. ಅಜ್ಞಾನದ ಕತ್ತಲನ್ನು ದಹಿಸುವ ಸುಜ್ಞಾನದ ಮಹಾಮಾರ್ಗ. ಕವಿ ದಿನಕರದೇಸಾಯಿ ಅವರ "ಮಾನವ ಧರ್ಮದ ದಸರೆಯ ಮಾಡಿ......" ಎಂಬ ಮಾತುಗಳ ಹಿನ್ನೆಲೆಯಲ್ಲೇ ಹೇಳುವುದಾದರೆ ಮೈಸೂರು ದಸರಾ ಭಾವೈಕ್ಯತೆಯ ಪ್ರಭಾವಳಿಯಲ್ಲಿ ಅರಳುತ್ತಾ ಬಂದಿರುವ ಈ ನೆಲದ ಮಹಾಹಬ್ಬ. ಸರ್ವ ಧರ್ಮೀಯರೂ, ಸರ್ವ ಜನಾಂಗದವರೂ ಸಂಗಮಿಸಿ ಸಂಭ್ರಮಿಸುವ ಸಂತಸದ ರಸಸಾಗರ.

ದಸರೆ, ದಸರಾ, ದಶಹರ, ದಶಹರ್....... ಮುಂತಾಗಿ ಕರೆಯಲ್ಪಡುವ ಹತ್ತು ದಿನಗಳು ಬಹು ವೈಭವೋಪೇತವಾಗಿ ಆಚರಿಸಲ್ಪಡುವ ಮಹಾ ಮಹೋತ್ಸವವಿದು. ನಾಡಷ್ಟೇ ಅಲ್ಲದೆ ರಾಷ್ಟ್ರವ್ಯಾಪಿ ಅಷ್ಟೇ ಏಕೆ ವಿಶ್ವವ್ಯಾಪಿ ಜನಾಕರ್ಷಣೆ ಹೊಂದಿರುವ ಮೈಸೂರು ದಸರಾಕ್ಕೆ ಎರಡು ಭಾಗ ಉಂಟು. ಮೊದಲನೆಯದು ಒಂಬತ್ತು ದಿನಗಳ 'ನವರಾತ್ರಿ' ಯಾದರೆ ಎರಡನೆಯದು ಹತ್ತು ದಿನಗಳ 'ವಿಜಯದಶಮಿ'. ಮೊದಲನೆಯದು ರಾಜವಂಶಸ್ಥರ ಅರಮನೆಯೊಳಗಿನ ಸಾಂಪ್ರದಾಯಕ ವಿಧಿ-ವಿಧಾನವಾದರೆ ಎರಡನೆಯದು ಸರ್ವರಿಗೂ ಮುಕ್ತವಾಗಿ ಅನಾವರಣಗೊಳ್ಳುವ ಸಾರ್ವಜನಿಕರದು. ನಮ್ಮ ಸಾಂಸ್ಕೃತಿಕ-ಧಾರ್ಮಿಕ ಪರಂಪರೆಯ ಶಕ್ತಿರೂಪದ ಸಂಕೇತವಾದ ಈ ನವರಾತ್ರಿ ಉತ್ಸವ, ವಿಜಯದಶಮಿಯೂ ಹೌದಾದರೂ "ಮೈಸೂರು ದಸರಾ" ಎಂದೇ ಲೋಕಪ್ರಸಿದ್ಧಿ.

ಧರೆಗಿಳಿದ ದೇವಲೋಕದಂತೆ ಮೈಸೂರು ದಸರಾ. ದೇವೇಂದ್ರನ ಅಮರಾವತಿಯಂತೆ ಮೈಸೂರಿಗೆ ಮೈಸೂರೇ ಮಿರಮಿರನೆ ಮಿಂಚುವ ಮಹಾಸಡಗರ. ಮೈಮನ ಪುಳಕಿತವಾಗುವಂತೆ ನಿತ್ಯ ಬದುಕಿನ ಜಂಜಡ ಮರೆಸುವ



**ದಸರೆ, ದಸರಾ, ದಶಹರ, ದಶಹರ್....... ಮುಂತಾಗಿ ಕರೆಯಲ್ಪಡುವ ಹತ್ತು ದಿನಗಳು ಬಹು ವೈಭವೋಪೇತವಾಗಿ ಆಚರಿಸಲ್ಪಡುವ ಮಹಾ ಮಹೋತ್ಸವವಿದು.**



Downloaded From: www.kpscvaani.com





**ಒಂದು ಕಾಲದಲ್ಲಿ ಆಳರಸರ ಮಹೋತ್ಸವವಾಗಿ ಮೆರೆದು ಇಂದು ಬದಲಾದ ಕಾಲಘಟ್ಟದಲ್ಲಿ ನಾಡಹಬ್ಬವೆಂದು ಕರೆಯಲ್ಪಡುತ್ತಿರುವ ಮೈಸೂರು ದಸರಾ ಮಹೋತ್ಸವಕ್ಕೆ ನಾಲ್ಕು ಶತಮಾನಗಳಿಗೂ ಹೆಚ್ಚಿನ ಇತಿಹಾಸವಿದೆ. ನಮ್ಮ ಭಾರತೀಯ ಸಂಸ್ಕೃತಿಯ ಚರಿತ್ರೆಯಲ್ಲೇ ಇಷ್ಟೊಂದು ಸುದೀರ್ಘ ಕಾಲ ನಡೆದು ಬಂದಿರುವ ಮತ್ತೊಂದು ಹಬ್ಬ ಕಾಣಸಿಗುವುದು ಬಹಳ ಅಪರೂಪ. ಮೈಸೂರಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿಯ ಆರಾಧನೆಯೊಡನೆ ಆರಂಭವಾಗುವ ನವರಾತ್ರಿ ವೈಭವದ ವಿಜಯ ದಶಮಿಯ ಈ ಮೈಸೂರು ದಸರಾ ಮಹೋತ್ಸವಕ್ಕೆ ಅದರದೇ ಆದ ಐತಿಹಾಸಿಕ ಪರಂಪರೆ ಹಾಗೂ ಸಾಂಸ್ಕೃತಿಕ ಹಿರಿಮೆಯುಂಟು.**

ಸಂತಸದ ಆಗರ. ಕಣ್ಣು ಕೋರೈಸುವಂತೆ ಮೈಸೂರೆಂಬೋ ಸ್ವರ್ಗದ ಬಾಗಿಲು ತೆರೆದುಕೊಳ್ಳುವ ಸಂಭ್ರಮದ ಚಿತ್ತಾರ. ಮೈಸೂರು ದಸರೆಯೇ ಹಾಗೆ. ಇದಕ್ಕಾಗಿ ಇಡೀ ಮೈಸೂರು ಮದುವಣಗಿತ್ತಿಯಂತೆ ಸಿಂಗರಿಸಿಕೊಂಡು ನಿಲ್ಲುವ ಪರಿ ಇದೆಯಲ್ಲ ವಾಹ್ಹ್, ಮಹದದ್ಭುತ, ಇದಕ್ಕಿಲ್ಲ ಮತ್ತೊಂದು ಸರಿಸಮ. ಅದಕ್ಕೇನೆ ಇದು ಅಷ್ಟೊಂದು ಜಗದ್ವಿಖ್ಯಾತ. ದೇಶದ ಹಲವು ಕಡೆ ದಸರಾ ಉತ್ಸವಗಳು ನಡೆಯುವುದುಂಟು. ಆದರೆ, ಮೈಸೂರು ದಸರಾದ ವೈಭವವೇ ಬೇರೆ. ಇಡೀ ವಿಶ್ವವೇ ಇತ್ತ ತಿರುಗಿ ನೋಡುವಂಥದ್ದು. ಯಾರೇ ಆಗಲಿ ಈ ಕ್ಷಣಕ್ಕೂ ಮೈಸೂರು ದಸರಾ ಎಂದಾಕ್ಷಣ ಏನೋ ಒಂಥರಾ ಆನಂದ. ಕಣ್ಮುಂದೆ ಚೆಂದದ ಮೈಸೂರು, ಅಂದದ ಅರಮನೆ, ಸುಂದರ ಚಿನ್ನದ ಅಂಬಾರಿ, ಮನಸೆಳೆವ ರತ್ನ ಸಿಂಹಾಸನ, ಸಿಂಹಾಸನಾಧೀಶರಾಗಿ ಮೆರೆದ ಮಹಾರಾಜರ ವೈಭವ-ವೈಭೋಗದ ನೆನಪುಗಳು ಮೆರವಣಿಗೆಯಾಗಿ ತೇಲಿ ಬರುತ್ತದೆ. ಇದರ ಜೊತೆಗೆ ಮೈಸೂರು ದಸರೆಯ ಜಂಬೂ ಸವಾರಿ ಮತ್ತೆ ಮತ್ತೆ ಕಣ್ಣಿಗೆ ಕಟ್ಟಿದಂತೆ ನೆನಪಿನ ಪರದೆಯಲ್ಲಿ ಹಾದು ಹೋಗುತ್ತದೆ. ಇದೇ ನೋಡಿ ಮೈಸೂರು ದಸರಾದ ವೈಶಿಷ್ಟ್ಯತೆ. ಈ ಬಾರಿ ಸರಳವಾಗಿ ದಸರಾ ಆಚರಣೆ ಮಾಡಿದರೂ ಕೂಡ ಮೈಸೂರು ನಗರದಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲು ಸರ್ಕಾರ ನಿರ್ಧರಿಸಿದೆ.

ಒಂದು ಕಾಲದಲ್ಲಿ ಆಳರಸರ ಮಹೋತ್ಸವವಾಗಿ ಮೆರೆದು ಇಂದು ಬದಲಾದ ಕಾಲಘಟ್ಟದಲ್ಲಿ ನಾಡಹಬ್ಬವೆಂದು ಕರೆಯಲ್ಪಡುತ್ತಿರುವ ಮೈಸೂರು ದಸರಾ ಮಹೋತ್ಸವಕ್ಕೆ ನಾಲ್ಕು ಶತಮಾನಗಳಿಗೂ ಹೆಚ್ಚಿನ ಇತಿಹಾಸವಿದೆ. ನಮ್ಮ ಭಾರತೀಯ ಸಂಸ್ಕೃತಿಯ ಚರಿತ್ರೆಯಲ್ಲೇ ಇಷ್ಟೊಂದು ಸುದೀರ್ಘ ಕಾಲ ನಡೆದು ಬಂದಿರುವ ಮತ್ತೊಂದು ಹಬ್ಬ ಕಾಣಸಿಗುವುದು ಬಹಳ ಅಪರೂಪ. ಮೈಸೂರಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿಯ ಆರಾಧನೆಯೊಡನೆ ಆರಂಭವಾಗುವ ನವರಾತ್ರಿ ವೈಭವದ ವಿಜಯ ದಶಮಿಯ ಈ ಮೈಸೂರು ದಸರಾ ಮಹೋತ್ಸವಕ್ಕೆ ಅದರದೇ ಆದ ಐತಿಹಾಸಿಕ ಪರಂಪರೆ ಹಾಗೂ ಸಾಂಸ್ಕೃತಿಕ ಹಿರಿಮೆಯುಂಟು. ಕರ್ನಾಟಕದ ಇತಿಹಾಸದಲ್ಲಿ ಸುವರ್ಣ ಯುಗವನ್ನು ಸೃಷ್ಟಿಸಿ ವಿಜಯನಗರ ಸಾಮ್ರಾಜ್ಯ ಕಟ್ಟಿ ವೈಭವದಿಂದ ಮೆರೆದವರು ವಿಜಯನಗರ ಅರಸರು. ಅವರ ಕಾಲದಲ್ಲಿ ಆರಂಭಗೊಂಡು ಆಚರಿಸಲ್ಪಡುತ್ತಿದ್ದ ನವರಾತ್ರಿ ಉತ್ಸವದ ವಿಜಯ ದಶಮಿಯ ದಸರಾ ಹಬ್ಬಕ್ಕೆ ಇನ್ನೂ ಹೆಚ್ಚಿನ ವೈಭವದ ವರ್ಣಮಯ ಕಳೆ ತಂದುಕೊಟ್ಟವರು ವಿಜಯನಗರ ಅರಸರಲ್ಲೇ ಅತ್ಯಂತ ಪ್ರಖ್ಯಾತರಾಗಿದ್ದ ಶ್ರೀ ಕೃಷ್ಣದೇವರಾಯರು.

ಆಗ ಹಂಪೆಯಲ್ಲಿರುವ ಮಹಾನವಮಿ ದಿಬ್ಬ ಮತ್ತು ವಿಜಯ ವಿಠಲ ದೇವಾಲಯಗಳು ಈ ಮಹೋತ್ಸವದ ಕೇಂದ್ರಗಳಾಗಿದ್ದವು. ತಮ್ಮ ಸಾಮ್ರಾಜ್ಯದ ಶಕ್ತಿ-ಸಾಮರ್ಥ್ಯ, ಸಂಪತ್ತು-ಸಮೃದ್ಧಿ, ವೈಭವ-ವೈಭೋಗ, ವೀರತ್ವ-ಧೀರತ್ವ, ಕಲೆ-ಸಾಹಿತ್ಯ, ಸಂಗೀತ-ನೃತ್ಯ, ಸಂಸ್ಕೃತಿ-ಸಂಪನ್ನತೆ ....... ಹೀಗೆ ಸಕಲ ವಿಧಗಳಲ್ಲೂ ತಮ್ಮ ಹಿರಿಮೆ-ಗರಿಮೆಗಳನ್ನು ತೋರ್ಪಡಿಸಿಕೊಳ್ಳುವ ಹಿನ್ನೆಲೆಯಲ್ಲಿ ಬಹುಮುಖ್ಯವಾಗಿ ವಿಜಯದ ದ್ಯೋತಕವಾಗಿ ವಿಜಯದಶಮಿಯ ಈ ದಸರಾ ಮಹೋತ್ಸವವನ್ನು ವಿಜಯನಗರ ಅರಸರು ಆಚರಿಸುತ್ತಿದ್ದರು.

ಈ ಉತ್ಸವವನ್ನು ವೀಕ್ಷಿಸಲು ದೇಶ-ವಿದೇಶಗಳ ಗಣ್ಯಾತಿಗಣ್ಯರು, ಪ್ರವಾಸಿಗರು ಇಲ್ಲಿಗೆ ಭೇಟಿ ನೀಡಿದ ದಾಖಲೆಗಳುಂಟು. ಅಷ್ಟೇ ಅಲ್ಲ 11ನೇ ಶತಮಾನದಲ್ಲೇ ಇಲ್ಲಿಗೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರಾದ ಅಲ್ಬೆರೋನಿ, 15-16ನೇ ಶತಮಾನದಲ್ಲಿ ಬಂದಿದ್ದ ಪರ್ಷಿಯಾದ ಅಬ್ದುಲ್ ರಜಾಕ್, ಇಟಲಿಯ ನಿಕೋಲಕೊಂಟಿ, ಪೋರ್ಚುಗೀಸಿನ



Downloaded From: www.kpscvaani.com



ಡೊಮಿಂಗೋಪಾಯಸ್ (1520–1522) ಮೊದಲಾದವರು ವಿಜಯನಗರ ಸಾಮ್ರಾಜ್ಯದ ವೈಭವೋಪೇತವಾದ ಈ ಮಹೋತ್ಸವವನ್ನು ಕೊಂಡಾಡಿ ತಮ್ಮ ಪ್ರವಾಸ ಕಥನಗಳಲ್ಲಿ ದಾಖಲಿಸಿದ್ದಾರೆ.

ಇಂಥ ವಿಜಯದಶಮಿಯ ದಸರಾ ಮಹೋತ್ಸವವನ್ನು ವಿಜಯನಗರ ಸಾಮ್ರಾಜ್ಯದ ಪತನದ ನಂತರ ಮುಂದುವರಿಸಿಕೊಂಡು ಬಂದವರು ಯದುವಂಶದ ಮೈಸೂರು ಒಡೆಯರು. ಇವರಲ್ಲಿನ 9ನೇ ಆಳ್ವಿಕೆಯ ರಾಜ ಒಡೆಯರು (1578–1617) ಅಂದು ತಮ್ಮ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಲ್ಲಿ 1610ರಲ್ಲಿ ವಿಜಯನಗರದ ರಾಜಪರಂಪರೆಯಂತೆ ನವರಾತ್ರಿ ಉತ್ಸವದ ವಿಜಯದಶಮಿಯ ದಸರಾ ಮಹೋತ್ಸವವನ್ನು ಮೊದಲಿಗೆ ಆರಂಭಿಸಿದರು. ಥೇಟ್ ವಿಜಯನಗರ ಅರಸರ ಸಂಪ್ರದಾಯದಂತೆಯೇ ದಸರಾಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ಶಾಸ್ತ್ರ ಹಾಗೂ ವಿಧಿ–ವಿಧಾನಗಳನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಅಳವಡಿಸಿಕೊಂಡರು. ಈ ಪ್ರಕಾರ ಅಶ್ವಯುಜ ಶುದ್ಧ ಪ್ರಥಮೆಯಂದು ನವರಾತ್ರಿ ಉತ್ಸವ ಶುರುವಾಗಿ ಮಹಾನವಮಿಯ ಕಡೇ ದಿನದವರೆವಿಗೂ ಪ್ರತಿನಿತ್ಯ ಪೂಜೆ–ಪುನಸ್ಕಾರ, ಪೂರ್ವಾಹ್ನ ಮತ್ತು ಮಧ್ಯಾಹ್ನ ಸಿಂಹಾಸನಾರೋಹಣ, ಒಡ್ಡೋಲಗ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಬೇಕೆಂದು ಪಕ್ಕಾ ವಿಧೇಯಕವನ್ನೇ ಮಾಡಿ ದಸರಾ ಹಬ್ಬವನ್ನು ಆಚರಣೆಗೆ ತಂದರು.

1799ರವರೆಗೂ ಮೈಸೂರು ರಾಜ್ಯದ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಲ್ಲೇ ದಸರಾ ನಡೆಯುತ್ತಿತ್ತು. ಹೈದರಾಲಿ ಮತ್ತು ಟಿಪ್ಪುವಿನ ಆಳ್ವಿಕೆಯ ನಂತರ ಮತ್ತೆ ಅಧಿಕಾರಕ್ಕೆ ಬಂದ ಯದುಕುಲತಿಲಕ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಆಳ್ವಿಕೆ ಕಾಲಕ್ಕೆ (1799–1868) ರಾಜ್ಯದ ರಾಜಧಾನಿ ಶ್ರೀರಂಗಪಟ್ಟಣದಿಂದ ಮೈಸೂರಿಗೆ ವರ್ಗವಾಯಿತು. ಅಲ್ಲಿಂದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಅತೀವ ಕಾಳಜಿಯಿಂದ ಮತ್ತಷ್ಟು ವಿಜೃಂಭಣೆಯಿಂದ 1800ರಲ್ಲಿ ಮೈಸೂರಿನಲ್ಲಿ ದಸರಾ ಪ್ರಾರಂಭವಾಗಿ "ಮೈಸೂರು ದಸರಾ" ಎಂದು ವಿಶ್ವವಿಖ್ಯಾತಿಯಾಯಿತು. ವಿಜಯದಶಮಿಯಂದು ಮಧ್ಯಾಹ್ನ ಮಹಾರಾಜರು ಅಲಂಕೃತ ಆನೆಯ ಮೇಲಿನ ಚಿನ್ನದ ಅಂಬಾರಿಯನ್ನೇರಿ ವೈಭವದ ಜಂಬೂಸವಾರಿಯಲ್ಲಿ ಅಂಬಾ ವಿಲಾಸ ಅರಮನೆಯಿಂದ ಹೊರಟು ಬನ್ನಿಮಂಟಪಕ್ಕೆ ತೆರಳಿ ಬನ್ನಿಪೂಜೆ ಮಾಡಿ ಧ್ವಜ ಹಾರಿಸಿ ಸೈನಿಕರಿಂದ ವಂದನೆ ಸ್ವೀಕರಿಸಿ ನಂತರ ತಾವು ಬಂದ ರಾಜ ಮಾರ್ಗದಲ್ಲೇ ಅರಮನೆಗೆ ವಾಪಸ್ಸಾಗುವ ಈ ಜಂಬೂ ಸವಾರಿಯೇ ಮೈಸೂರು ದಸರೆಯ ಪ್ರಮುಖ ಆಕರ್ಷಣೆ.

ಈ ರೀತಿ ರಾಜ ಒಡೆಯರಿಂದ ಶ್ರೀರಂಗಪಟ್ಟಣದಲ್ಲಿ ಪ್ರಾರಂಭವಾದ ವಿಜಯನಗರ ಪರಂಪರೆಯ ನವರಾತ್ರಿ ಪೂಜೆಯ ದಸರಾ ಮಹೋತ್ಸವ ಮೈಸೂರಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಮತ್ತಷ್ಟು ಭವ್ಯಗೊಂಡು, ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆ(1902–1940) ಕಾಲಕ್ಕೆ ಮಗದಷ್ಟು ವೈಭವದ ಉತ್ತುಂಗಕ್ಕೇರಿ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವವಾಗಿ ವಿಜೃಂಭಿಸಿತು. ನಾಲ್ವಡಿಯವರ ನಂತರ ಯದುವಂಶದ 25ನೆಯ ಹಾಗೂ ಕಟ್ಟಕಡೆಯ ದೊರೆಯಾಗಿ ಅಧಿಕಾರಕ್ಕೆ ಬಂದ ಶ್ರೀ ಜಯಚಾಮರಾಜ ಒಡೆಯರ್ ಆಳ್ವಿಕೆ ಕಾಲದಲ್ಲಿ (1940–1947) ಇನ್ನಷ್ಟು ವೈಭವ ಪಡೆದುಕೊಂಡು ಜಾಗತಿಕ ಆಕರ್ಷಣೆ ಪಡೆಯಿತು. ಆದರೆ, 1947 ಆಗಸ್ಟ್ 15ರಂದು ಭಾರತ ಸ್ವಾತಂತ್ರ್ಯಗಳಿಸಿದ ನಂತರ ರಾಜ ಮಹಾರಾಜರ ಸಂಸ್ಥಾನಗಳೆಲ್ಲವೂ ಭಾರತ ಸರ್ಕಾರದಲ್ಲಿ ವಿಲೀನವಾದವು. ಆದರೂ ಸಹ ಯಾವುದೇ ಅಡ್ಡಿಯಿಲ್ಲದೆ ಮೈಸೂರು ದಸರಾ ಆಚರಣೆ ನಡೆದುಕೊಂಡು ಬರುತ್ತಿತ್ತು. ಶ್ರೀ ಜಯಚಾಮರಾಜ ಒಡೆಯರು ರಾಜ ಪ್ರಮುಖರಾಗಿ ಹಿಂದಿನಂತೆ ಜಂಬೂಸವಾರಿಯಲ್ಲಿ ಭಾಗವಹಿಸುತ್ತಿದ್ದರು. 1962ರಲ್ಲಿ ರಾಜಧನ ಮತ್ತು ರಾಜತ್ವರದ್ದಾದಾಗ ಮೂರ್‍ನಾಲ್ಕು ವರ್ಷಗಳ ಕಾಲ ದಸರಾ ನಿಂತು ಹೋಗಿತ್ತು. ಆದರೆ, ಮೈಸೂರಿನ ಪ್ರಮುಖ ಕೈಗಾರಿಕೋದ್ಯಮಿ ಎಫ್.ಕೆ. ಇರಾನಿ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ಸರಳವಾಗಿ

**ಅಲಮೇಲಮ್ಮನ ಶಾಪ**

ಶ್ರೀರಂಗರಾಯನು ವಿಜಯನಗರದ ಅರಸರ ಪ್ರತಿನಿಧಿಯಾಗಿ ಶ್ರೀರಂಗಪಟ್ಟಣ ಪ್ರದೇಶದ ಆಳ್ವಿಕೆ ನಡೆಸುತ್ತಿದ್ದ ಕಾಲವದು. ಆತನ ಮಡದಿ ಅಲಮೇಲಮ್ಮ. ಮೈಸೂರಿನ ರಾಜಒಡೆಯರು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ನಂತರ ಅಲ್ಲಿದ್ದ ಶ್ರೀರಂಗರಾಯ ತಲಕಾಡಿಗೆ ಓಡಿಹೋಗಿ ಅಲ್ಲಿಯೇ ಪತ್ನಿಯೊಡನೆ ವಾಸಿಸುತ್ತಿದ್ದು ಕೆಲದಿನಗಳ ನಂತರ ಬೆನ್ನು ಪಣೆಯಿಂದ ನಿಧನ ಹೊಂದಿದ. ಆ ಸಮಯದಲ್ಲಿ ನವರಾತ್ರಿ ಉತ್ಸವಕ್ಕೆ ಶ್ರೀರಂಗನಾಥ ಸ್ವಾಮಿಯನ್ನು ಅಲಂಕರಿಸಲು ತಲಕಾಡಿನಲ್ಲಿದ್ದ ಅಲಮೇಲಮ್ಮನಿಗೆ ಅವಳಲಿದ್ದ ಒಡವೆಗಳನ್ನು ತಂದು ತಮಗೊಪ್ಪಿಸುವಂತೆ ರಾಜಾಜ್ಞೆ ಹೋಯಿತು. ಅಲಮೇಲಮ್ಮ ರಾಜಾಜ್ಞೆಯನ್ನು ತಿರಸ್ಕರಿಸಿದಳು. ಪರಿಣಾಮ ಆಕೆಯಿಂದ ಬಲವಂತವಾಗಿ ಒಡವೆಗಳನ್ನು ಕಿತ್ತುಕೊಳ್ಳಲು ರಾಜಧಾನಿ ಶ್ರೀರಂಗಪಟ್ಟಣದಿಂದ ರಾಜದೂತರು ತಲಕಾಡಿಗೆ ಬರುತ್ತಿರುವ ಸುದ್ದಿ ಅಲಮೇಲಮ್ಮನ ಕಿವಿಗೆ ಬಿತ್ತು. ತಕ್ಷಣ ಅವಳು ತಲಕಾಡಿನಿಂದ ಮಾಲಂಗಿಗೆ ಓಡಿಹೋದಳು. ರಾಜಭಟರು ಬಿಡದೆ ಅವಳನ್ನು ಅಟ್ಟಿಸಿಕೊಂಡು ಹಿಂಬಾಲಿಸುತ್ತಿದ್ದರು, ಆ ಪರಿಸ್ಥಿತಿಯಲ್ಲಿ ಅಲಮೇಲಮ್ಮ ಆಕ್ರೋಶದಿಂದ "ಮಾಲಂಗಿ ಮಡುವಾಗಿ, ತಲಕಾಡು ಮರಳಾಗಿ, ಮೈಸೂರು ಅರಸರಿಗೆ ಮಕ್ಕಳಾಗದಿರಲಿ" ಎಂದು ಶಾಪ ನೀಡಿ ತನ್ನಲಿದ್ದ ಒಡವೆಗಂಟನ್ನು ಉಡಿಯಲ್ಲಿ ಕಟ್ಟಿಕೊಂಡು ಮಾಲಂಗಿ ಸಮೀಪದ ಕಾವೇರಿ ನದಿಗೆ ಹಾರಿ ಪ್ರಾಣ ಬಿಡುತ್ತಾಳೆ.

ಅಲಮೇಲಮ್ಮನ ಶಾಪದ ಪ್ರಭಾವವೆಂಬಂತೆ ಅಂದಿನಿಂದ ಇಂದಿನ ತನಕವೂ ತಲಕಾಡು ಮರಳು ತುಂಬಿದ ಪ್ರದೇಶವಾಗಿದೆ. ಹಾಗೆಯೇ ಇದರ ಸಮೀಪದ ಮಾಲಂಗಿ ಕೂಡ ಮಡುವಾಗಿ ಭಯಂಕರ ಪ್ರಪಾತವಾಗಿದೆ. ಅಂತೆಯೇ ಸಾಮಾನ್ಯವಾಗಿ ಆ ಕಾಲದಿಂದಲೂ ಮೈಸೂರು ಅರಸರಿಗೆ ಮಕ್ಕಳಾಗದೆ ಅವರು ದತ್ತುಪಡೆದವರಿಗೆ ಮಾತ್ರ ಸಂತಾನ ಪ್ರಾಪ್ತವಾಗಿದೆ. ಹಾಗಾಗಿ ಅಲಮೇಲಮ್ಮನ ಶಾಪ ನಿವಾರಣೆಗಾಗಿ ರಾಜ ಒಡೆಯರು ಅಲಮೇಲಮ್ಮನ ಚಿನ್ನದ ವಿಗ್ರಹವೊಂದನ್ನು ಮಾಡಿಸಿ ಅವರ ಕಾಲದಲ್ಲೇ ನವರಾತ್ರಿ ಹಬ್ಬದಲ್ಲಿ ಅದಕ್ಕೆ ವಿಶೇಷಪೂಜೆ ಸಲ್ಲಿಸುತ್ತಿದ್ದರು, ಅಂದಿನಿಂದ ಇಂದಿನ ತನಕವೂ ಯದುಕುಲವಂಶಸ್ಥರು ನವರಾತ್ರಿಯಲ್ಲಿ ಅಲಮೇಲಮ್ಮನನ್ನು ವಿಶೇಷವಾಗಿ ಪೂಜಿಸುತ್ತಾರೆ.



Downloaded From: www.kpscvaani.com



ದಸರಾ ಹಬ್ಬವನ್ನು ನಡೆಸಿಕೊಂಡು ಬರಲಾಯಿತು. 1980ರಲ್ಲಿ ಆರ್. ಗುಂಡೂರಾವ್ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಭವ್ಯ ಪರಂಪರೆಯ ಮೈಸೂರು ದಸರಾ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಿ ಅದರ ಉಸ್ತುವಾರಿಯನ್ನು ಸರ್ಕಾರವೇ ವಹಿಸಿಕೊಂಡಿತು. ಹಾಗಾಗಿ ಅಂದಿನಿಂದ ಇಂದಿನ ತನಕವೂ ನಾಡಹಬ್ಬವಾಗಿ ರಾಜ್ಯ ಸರ್ಕಾರದಿಂದಲೇ ಪ್ರತಿವರ್ಷ ಮೈಸೂರು ದಸರಾ ನಡೆಯುತ್ತಾ ಬಂದಿದೆ.

ರಾಜ ಪ್ರತ್ಯಕ್ಷ ದೈವವೆಂಬ ಭಾವನೆಯಿದ್ದ ಆ ಕಾಲದಲ್ಲಿ ಆಳರಸರದೇ ದರ್ಬಾರು. ಅಂದು ಅಂಬಾರಿಯಲ್ಲಿ ಸ್ವತಃ ಮಹಾರಾಜರೇ ಕೂರುತ್ತಿದ್ದರೆ ಇಂದು ಮೈಸೂರಿನ ಅಧಿದೇವತೆ ನಾಡದೇವಿ ಶ್ರೀ ಚಾಮುಂಡೇಶ್ವರಿ ಅಂಬಾರಿಯಲ್ಲಿ ಅಲಂಕೃತವಾಗಿ ಪೂಜಿಸಲ್ಪಡುತ್ತಾಳೆ. 750 ಕೆ.ಜಿ. ಭಾರದ ಬಂಗಾರದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿಯ ಸುಂದರ ಮೂರ್ತಿಯನ್ನು ಹೊತ್ತ ಗಜರಾಜನ ಗಾಂಭೀರ್ಯ ನಡಿಗೆಯಲ್ಲಿ ಮೈಸೂರು ರಾಜ ಬೀದಿಯಲ್ಲಿ ಸಾಗುವ ಮೈಸೂರು ದಸರೆಯ ಜಂಬೂ ಸವಾರಿಯನ್ನು ನೋಡುವುದೇ ಒಂದು ಮಹಾಹಬ್ಬ. ಹಾಗಾಗಿ ಈ ಮಹಾದೃಶ್ಯ ಕಾವ್ಯವನ್ನು ಕಣ್ತುಂಬಿಕೊಳ್ಳಲು ದೇಶ ವಿದೇಶಿಯರೆಲ್ಲಾ ಸಾಗರದೋಪಾದಿಯಲ್ಲಿ ಮೈಸೂರಿನತ್ತ ಹರಿದು ಬರುತ್ತಾರೆ. ವಿಜಯದಶಮಿಯಂದು ಈ ಚಿನ್ನದ ಅಂಬಾರಿಯನ್ನು ದರ್ಶಿಸುವುದು ಮಹಾ ಪುಣ್ಯವೆಂಬ ಭಾವನೆ ಇಲ್ಲಿ ಬೇರೂರಿರುವುದರಿಂದ ಇದಕ್ಕೆ ದೈವೀಕಶಕ್ತಿಯದ್ದೆಂದು ಹೆಚ್ಚಿನ ಮಹತ್ವವುಂಟು.

ವಿಜಯದಶಮಿ ವೈಭವದ ನವರಾತ್ರಿಯ ಮೈಸೂರು ದಸರಾ ಎಂದರೆ ಅದು ಜಂಬೂ ಸವಾರಿಯಷ್ಟೇ ಅಲ್ಲ. ಸಮಸ್ತ ನಾಡಿನ ಸಾಂಸ್ಕೃತಿಕ ಸಿರಿ ಸಂಪತ್ತಿನ ಮತ್ತು ನಾಡನ್ನಾಳಿದ ರಾಜ ಪರಂಪರೆಯ ಅನಾವರಣ. ಮೈಸೂರು ದಸರಾ ಉತ್ಸವದ ಉದ್ದಕ್ಕೂ ಇದರದ್ದೇ ಮಹಾದರ್ಶನ. ಆಶ್ವಯುಜ ಶುದ್ಧ ಪ್ರಥಮೆಯಂದು ದೇವಿ ಚಾಮುಂಡಿ ಪೂಜೆಯೊಡನೆ ಚಾಮುಂಡಿ ಬೆಟ್ಟದಲ್ಲಿ ನವರಾತ್ರಿ ಉತ್ಸವ ಆರಂಭಗೊಳ್ಳುವ ಮೊದಲ ದಿನದಿಂದ ಹಿಡಿದು ಮಹಾನವಮಿಯ ಒಂಭತ್ತು ದಿನಗಳೂ ದಸರಾ ಸಂಗೀತೋತ್ಸವ, ದಸರಾ ಚಲನಚಿತ್ರೋತ್ಸವ, ದಸರಾ ಕಾವ್ಯೋತ್ಸವ, ದಸರಾ ರಂಗೋತ್ಸವ, ದಸರಾ ಕ್ರೀಡೋತ್ಸವ, ಯುವ ದಸರಾ, ಯೋಗ ದಸರಾ, ಗ್ರಾಮೀಣ ದಸರಾ, ಜನಪದ ದಸರಾ, ರೈತ ದಸರಾ, ಮಹಿಳಾ ಮತ್ತು ಮಕ್ಕಳ ದಸರಾ, ದಸರಾ ಗೊಂಬೆ ಪ್ರದರ್ಶನ, ದಸರಾ ವೈಮಾನಿಕ ಪ್ರದರ್ಶನ, ದಸರಾ ಆಹಾರ ಮೇಳ...... ಹೀಗೆ ಮೈಸೂರಿನ ತುಂಬಾ ವಿವಿಧ ದಸರಾ ಉತ್ಸವಗಳ, ಮೇಳಗಳ, ಪ್ರದರ್ಶನಗಳ ಮಹಾ ಸುಗ್ಗಿಯೇ ಜರುಗುತ್ತದೆ. ನವರಾತ್ರಿಯ ಸಮಾರೋಪವಾಗಿ ವಿಜಯ ದಶಮಿಯಂದು ರಾಜ್ಯದ ಮುಖ್ಯಮಂತ್ರಿಯಿಂದ ನಂದಿ ಕಂಬ ಪೂಜೆಯೊಡನೆ ಆನೆ ಮೇಲಿನ ಅಂಬಾರಿಯಲ್ಲಿ ಆಸೀನಳಾಗಿರುವ ತಾಯಿ ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ ಮಾಡಿ ಚಾಲನೆಗೊಂಡು ನಡೆಯುವ ಜಂಬೂ ಸವಾರಿಯ ಮಹಾ ಮೆರವಣಿಗೆಯಲ್ಲಂತೂ ಇಡೀ ನಾಡಿನ ಸಾಂಸ್ಕೃತಿಕ ಸಂಪತ್ತು ತೆರೆದುಕೊಳ್ಳುತ್ತಿತ್ತು. ಆದರೆ ಪ್ರಸಕ್ತ ವರ್ಷ ಈ ಎಲ್ಲಾ ಕಾರ್ಯಕ್ರಮಗಳನ್ನು ಕೈಬಿಡಲಾಗಿದ್ದು ಅರಮನೆ ಆವರಣದಲ್ಲಿ ಮಾತ್ರ ಜಂಬೂ ಸವಾರಿ ಮೆರವಣಿಗೆ ಜರುಗಲಿದೆ.

ನಂದೀಧ್ವಜ ಕುಣಿತ, ನಾದಸ್ವರ ವಾದನ, ಪ್ಯಾಲೇಸ್ ಬ್ಯಾಂಡ್, ಪೊಲೀಸ್ ಬ್ಯಾಂಡ್, ಆನೆ ಸಾರೋಟು, ಕುದುರೆ ಸಾರೋಟು, ಪಿರಂಗಿಗಳು, ಬೆಳ್ಳಿ ರಥ, ವಿವಿಧ ಪಲ್ಲಕ್ಕಿಗಳು, ಭಜನೆ ಮೇಳ, ಕರಗ, ವೀರಭದ್ರನ ಕುಣಿತ, ಕೀಲು ಕುದುರೆ, ಮಲ್ಲಗಂಬ, ವೇಷಗಾರರು, ಅಲಾವಿ ಕುಣಿತ, ವೀರಗಾಸೆ, ಝೂಂಜ್ ಪಥಕ್, ಗೊರವರ ಕುಣಿತ, ಜಗ್ಗಲಗೆ ಮೇಳ, ಹೆಜ್ಜೆ ಮೇಳ, ಗಾರುಡಿಗೊಂಬೆ, ಟಿಬೇಟಿಯನ್ ನೃತ್ಯ, ಚಿಟ್ ಮೇಳ, ಕೋಲಾಟ, ಮಲೆನಾಡು ಸುಗ್ಗಿಕುಣಿತ, ಕೊಡವ ಕುಣಿತ, ಪೂಜಾ ಕುಣಿತ, ಕಂಸಾಳೆ, ತಮಟೆ ವಾದನ, ಮರಗಾಲು ಕುಣಿತ, ಸೋಮನಕುಣಿತ, ಚಂಡೆ ಮೇಳ, ಹಾಲಕ್ಕಿ ಸುಗ್ಗಿ ಕುಣಿತ, ನಗಾರಿ ಮೇಳ, ಪಟಾ ಕುಣಿತ, ಕೊಂಬು ಕಹಳೆ, ಕರಡಿ ಮಜಲು, ಪಾಳೇಗಾರನ ವೇಷ, ದೊಣ್ಣೆವರಸೆ, ಕಂಗಿಲು ಕುಣಿತ, ಯಕ್ಷಗಾನ ವೇಷಧಾರಿಗಳು, ಜಡೆಕೋಲಾಟ, ಧ್ವಜ ಕುಣಿತ, ಚಿಟಿಕಿ ಭಜನೆ, ಒನಕೆ ನೃತ್ಯ, ಭೂತ ನೃತ್ಯ ಇವುಗಳೆಲ್ಲದರ ಮಹಾ ಸಂಗಮವಾಗಿ ರಾಜ್ಯದ ಪ್ರತಿಯೊಂದು ಜಿಲ್ಲೆಯನ್ನೂ ಪ್ರತಿನಿಧಿಸುವ 30ಕ್ಕೂ ಹೆಚ್ಚು ವೈವಿಧ್ಯಮಯ ಸ್ತಬ್ಧಚಿತ್ರಗಳೊಡನೆ ಮೈಸೂರಿನ ಸಯ್ಯಾಜಿ ರಾವ್ ರಸ್ತೆಯಲ್ಲಿ ಸಾಗುವ 'ಮೈಸೂರು ದಸರಾ' ಎಂಬ ಈ ಮಹಾ ಮೆರವಣಿಗೆ ಲಕ್ಷಾಂತರ ಜನರ ಕಣ್ಮನ ಸೆಳೆಯುತ್ತಾ ನಗರದಿಂದ ನಾಲ್ಕೈದು ಕಿ.ಮೀ. ದೂರವಿರುವ ಬನ್ನಿಮಂಟಪ ತಲುಪುತಿತ್ತು.

**ಆಕರ್ಷಕ ಟಾರ್ಚ್‌ಲೈಟ್ ಪೆರೇಡ್**

ಪೊಲೀಸ್ ದಳದಿಂದ ಮನಮೋಹಕ, ಬಹುರೋಚಕವಾದ ಟಾರ್ಚ್‌ಲೈಟ್ ಪೆರೇಡ್ (ಪಂಜಿನ ಕವಾಯಿತು) ಆರಂಭವಾಗುತ್ತದೆ. ಹಿಂದೆ ಮಹಾರಾಜರು ಸೈನಿಕರಿಂದ ಧ್ವಜ ವಂದನೆ ಸ್ವೀಕರಿಸುತ್ತಿದ್ದ ಮಾದರಿಯಲ್ಲೇ ಈಗ ಟಾರ್ಚ್‌ಲೈಟ್ ಪೆರೇಡ್‌ನಲ್ಲಿ ರಾಜ್ಯದ ರಾಜ್ಯಪಾಲರು ಧ್ವಜವಂದನೆ ಗೌರವ ಸ್ವೀಕರಿಸುತ್ತಾರೆ. ಟಾರ್ಚ್‌ಲೈಟ್ ಪೆರೇಡ್‌ನ ಚಿತ್ತಾಕರ್ಷಕ ಸಾಹಸಮಯ ವರ್ಣ ದೃಶ್ಯಗಳಂತೂ ವರ್ಣಿಸಲಸದಳ. ಲೇಸರ್ ಪ್ರದರ್ಶನ, ಅಶ್ವಾರೋಹಿಗಳ ಸಾಹಸ ಕಸರತ್ತು, ಹೊನಲು ಬೆಳಕಿನ ಮಾಯಾಲೋಕ, ಬಣ್ಣ ಬಣ್ಣದ ಬಾಣ ಬಿರುಸುಗಳ ಯಕ್ಷಲೋಕಗಳೆಲ್ಲವೂ ಒಮ್ಮೆಗೇ ಸೃಷ್ಟಿಗೊಂಡು ಇವುಗಳೊಂದಿಗೆ ಹತ್ತು ದಿನಗಳ ಒಟ್ಟಾರೆ ದಸರಾ ಕಾರ್ಯಕ್ರಮಗಳಿಗೆ ಮಂಗಳ ಹಾಡಲಾಗುತ್ತದೆ.

**ಖಾಸಗಿ ದರ್ಬಾರ್**

ಅರಮನೆ ಸಂಪ್ರದಾಯದಂತೆ ಪೂಜಾಕಾರ್ಯವನ್ನು ನೆರವೇರಿಸುವ ರಾಜರು ನವರಾತ್ರಿ ಸಂದರ್ಭದಲ್ಲಿ ರತ್ನ ಖಚಿತ



Downloaded From: www.kpscvaani.com

ಚಿನ್ನದ ಸಿಂಹಾಸನವನ್ನೇರಿ ದರ್ಬಾರ್ ನಡೆಸುವ ಮೂಲಕ ಅರಸರ ಗತಕಾಲದ ವೈಭವವನ್ನು ಮರುಕಳಿಸುವಂತೆ ಮಾಡುತ್ತಾರೆ. ಇದು ಹೆಸರೇ ಹೇಳುವಂತೆ ರಾಜವಂಶಸ್ಥರಿಗೆ ಮಾತ್ರ ಮೀಸಲಾದ ಖಾಸಗಿ ದರ್ಬಾರು, ಒಡೆಯರ್ ಕುಟುಂಬದವರು, ಬಂಧು ಮಿತ್ರರು ಮಾತ್ರ ಪಾಲ್ಗೊಳ್ಳುವ ಈ ಖಾಸಗಿ ದರ್ಬಾರ್‌ಗೆ ಗಣ್ಯವ್ಯಕ್ತಿಗಳಿಗೆ ಮಾತ್ರ ಪ್ರವೇಶವಿರುತ್ತದೆ.

ಮೈಸೂರು ಅರಸರ ಕುಲದೇವತೆ ಚಾಮುಂಡೇಶ್ವರಿಯ ವಿವಿಧ ದಿವ್ಯ ಸ್ವರೂಪಗಳ ಆರಾಧನೆ, ವಿವಿಧ ದೇವತೆಗಳ ಪ್ರಜಾನುಷ್ಠಾನ, ಚಂಡಿಕಾಹೋಮ, ದೇವಿಭಾಗವತ ಪಾರಾಯಣ, ರಾಮಾಯಣ ಪಾರಾಯಣ, ಸಿಂಹಾಸನಪೂಜೆ, ನಿತ್ಯ ರಾಜ ದರ್ಬಾರು, ಪರಾಕುಗಳು, ಆಯುಧಪೂಜೆ, ವ್ರಜಮುಷ್ಟಿಕಾಳಗ, ಶಮೀಪೂಜೆ, ಮುಂತಾದವನ್ನೆಲ್ಲಾ ಅತ್ಯಂತ ಶ್ರದ್ಧಾಭಕ್ತಿಯಿಂದ ಶಾಸ್ತ್ರೋಕ್ತವಾಗಿ ಖಾಸಗಿ ದರ್ಬಾರ್‌ನಲ್ಲಿ ನೆರವೇರಿಸುವರು.

### ರತ್ನ ಖಚಿತ ಸ್ವರ್ಣ ಸಿಂಹಾಸನ

ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರನ್ನು ಉದ್ದೇಶಿಸಲಾದ ಒಂದು ಶಾಸನದ ಪ್ರಕಾರ ಮೈಸೂರು ಅರಸರಿಗೆ ಪರಂಪರಾಗತವಾಗಿ ಬಂದ ಈ ರತ್ನ ಖಚಿತ ಸುವರ್ಣ ಸಿಂಹಾಸನವೊಂದು ಅಪೂರ್ವ ಕಲಾಕೃತಿ. ದಸರೆಯ ಸಂದರ್ಭದಲ್ಲಿ ಮಾತ್ರ ಸಾರ್ವಜನಿಕರ ವೀಕ್ಷಣೆಗೆ ತೆರೆದಿಡುವ ಬಂಗಾರದ ಈ ದಿವ್ಯ ಸಿಂಹಾಸನವನ್ನು ಮಿಕ್ಕ ದಿನಗಳಲ್ಲಿ ಕಾಣಲಾಗುವುದಿಲ್ಲ. ದಸರಾ ಸಮಯದಲ್ಲಿ ಕೆಲವು ಸಾಂಪ್ರದಾಯಿಕ ಪೂಜೆ ಪುನಸ್ಕಾರದೊಂದಿಗೆ ಜೋಡಿಸುವ ಈ ಸಿಂಹಾಸನವನ್ನು ಆ ನಂತರ ಕಳಚಿ ಸಕಲ ಭದ್ರತೆಗಳೊಂದಿಗೆ ಸಂರಕ್ಷಿಸಿಡಲಾಗುವುದು. ಪ್ರಪಂಚದಲ್ಲೇ ಕಾಣಸಿಗದಂತಹ ಅದ್ಭುತ ಸಿಂಹಾಸನವಿದು. ಒಂದು ನಂಬಿಕೆಯ ಪ್ರಕಾರ ಇದು ಮಹಾಭಾರತದ ಪಾಂಡವರಿಗೆ ಸೇರಿದ್ದೆಂದು ಹೇಳಲಾಗುತ್ತದೆ.

ಈ ಸಿಂಹಾಸನವನ್ನು ದಂತದ ಕುಸುರಿ ಕಲೆಯಿಂದ ಅಲಂಕರಿಸಿ ಚಿನ್ನದ ತಗಡುಗಳನ್ನು ತೊಡಿಸಲಾಗಿದೆ. ಇದಕ್ಕೆ ಆಮೆಯ ಆಕಾರದ ಆಸನವಿದ್ದು ಯಾಳಿಗಳು, ಬಳ್ಳಿಗಳು, ಬಾಳೆಯ ಕಂಬ, ಮಾವಿನ ಎಲೆ, ಆನೆ, ಕುದುರೆ, ರಥ, ಚತುರಂಗದಳ, ತ್ರಿಮೂರ್ತಿಗಳು, ಅಷ್ಟದಿಕ್ಪಾಲಕರು, ನಾಗದೇವತೆ ಮುಂತಾದವೆಲ್ಲವನ್ನು ಚಿನ್ನದ ಚಿತ್ತಾರದಲ್ಲಿ ಬಿಡಿಸಲಾಗಿದೆ. ಸಿಂಹಾಸನ ಏರಲು ಏಳು ಮೆಟ್ಟಿಲುಗಳಿದ್ದು ಎರಡೂ ಕಡೆಗಳಲ್ಲೂ ರಮಣೀಯ ಸ್ತ್ರೀಪುತ್ಥಳಿಗಳಿದ್ದು ಸಿಂಹಾಸನದ ಮೇಲೆ ಮೈಸೂರು ರಾಜಲಾಂಛನವಾದ ಗಂಡಭೇರುಂಡವನ್ನು ಮುತ್ತಿನ ಹರಳುಗಳಿಂದ ನಿರ್ಮಿಸಿದ್ದು ಚಿನ್ನದ ಛತ್ರಿಯೊಂದನ್ನು ತುದಿಯಲ್ಲಿ ಅಳವಡಿಸಲಾಗಿದೆ. 1859 ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಬರೆದಿರುವ "ದೇವತಾನಾಮ ಕುಸುಮಾಂಜರಿ" ಕೃತಿಯಲ್ಲಿ ಈ ಭವ್ಯ ಸಿಂಹಾಸನದ ವಿವರಗಳಿವೆ.

### ಶಮಿವೃಕ್ಷ ಮತ್ತು ವಿಜಯ ದಶಮಿ

ಮೈಸೂರು ದಸರಾ ಎಂದರೆ ಅದು ಮಹಾಸಂಭ್ರಮದ ನಾಡಹಬ್ಬ, ಧರ್ಮ ಸಂಸ್ಕೃತಿಗಳು ಸಂಗಮಿಸಿ ಮೆರೆಯುವ ಮಹಾಪರ್ವ, ಶಕ್ತಿ ದೇವತೆಯನ್ನು ಪೂಜಿಸುವ ದಿವ್ಯೋತ್ಸವ, ಆಶ್ವಯುಜ ಮಾಸದ ಪಾಡ್ಯದಿಂದ ಪ್ರಾರಂಭಿಸಿ ದಶಮಿಯವರೆಗೆ ಹತ್ತುದಿನಗಳು ಒಳಗೊಂಡಿರುವ ಈ ಸುದೀರ್ಘ ಮಹೋತ್ಸವದ ಮೊದಲ ಒಂಭತ್ತು ದಿನಗಳು



'ನವರಾತ್ರಿ' ಎನಿಸಿದರೆ ಹತ್ತನೆಯ ದಿನವು ಸಂಭ್ರಮದ ಸಮಾರೋಪವಾಗಿ 'ವಿಜಯದಶಮಿ' ಎನಿಸಿಕೊಂಡಿದೆ. ಇದು ವಿಜಯ+ದಶಮಿಯೂ ಹೌದು., ಹಾಗೆಯೇ ವಿಜಯದ+ಶಮಿಯೂ ಹೌದು, ಶಮೀವೃಕ್ಷದ ಅರ್ಥಾತ್ ಬನ್ನಿ ಮರದ ಕೊಂಬೆಯೊಂದನ್ನು ಕಡಿದು ವಿಜಯದ ಸಂಕೇತವಾಗಿ ಸೀಮೋಲ್ಲಂಘನ ಮಾಡುವುದೇ ವಿಜಯ ದಶಮಿ, ಶಮೀಪೂಜೆಗೆ ಇಲ್ಲಿ ವಿಶೇಷ ಮಹತ್ವ, ಮೈಸೂರು ದಸರಾದಲ್ಲಿ ಅರಮನೆಯಿಂದ ಹೊರಡುವ 'ಜಂಬೂಸವಾರಿ' ಬನ್ನಿ ಮಂಟಪವನ್ನು ತಲುಪಿ ಬನ್ನಿಮರವನ್ನು ಪೂಜಿಸುವುದರೊಂದಿಗೆ ದಸರೆಗೆ ಮಂಗಳ ಹಾಡಲಾಗುತ್ತದೆ. ಹಾಗೆಯೇ ಮೈಸೂರಿನ ಯದುವಂಶಸ್ಥರು ವಿಜಯದಶಮಿಯಂದು ಶಮೀವೃಕ್ಷ ಪೂಜಿಸುವುದರೊಂದಿಗೆ ಪಾಡ್ಯದಂದು ಕಟ್ಟಿಸಿಕೊಂಡಿದ್ದ ಕಂಕಣವನ್ನು ಬಿಚ್ಚಿ ತಮ್ಮ ಖಾಸಗಿ ದರ್ಬಾರನ್ನು ಮುಗಿಸುತ್ತಾರೆ.

### ಚಿನ್ನದ ಅಂಬಾರಿ

ಮೈಸೂರು ದಸರೆಯ ಕೇಂದ್ರ ಬಿಂದುವಾದ 750 ಕೆ.ಜಿ. ತೂಕದ ಚಿನ್ನದ ಅಂಬಾರಿಯನ್ನು ಬೀಟೆ ಮರದಿಂದ ದೇವತಾ ಮಂಟಪದಂತೆ ರಚನೆಯಾಗಿರುವ ಚಿನ್ನದ ತಗಡಿನಿಂದ ಆವೃತ್ತವಾಗಿರುವ ಒಂದು ಸುಂದರ ಕಲಾಕೃತಿ. ಇದು ಪರ್ಣ ಮತ್ತು ಪುಷ್ಪಗಳಿಂದ ಕೂಡಿದ್ದು ವಿನ್ಯಾಸಗಳು ಉಬ್ಬು ಚಿತ್ರ ತಂತ್ರದಿಂದ ರೂಪಿಸಲಾಗಿದೆ. ಇದರ ಗೋಪುರ ಆಕರ್ಷಕ ಪಂಚಕಳಶಗಳನ್ನು ಒಳಗೊಂಡಿದ್ದು ಸಂಪೂರ್ಣವಾಗಿ ದಂತದಿಂದಲೇ ಬಿಡಿಸಿರುವ ಎರಡು ಚಾಮರಗಳು ಮನಮೋಹಕವಾಗಿವೆ. 80 ಕೆ.ಜಿ. ಚಿನ್ನದಿಂದ ತಯಾರಿಸಲಾಗಿರುವ ಈ ಅದ್ಭುತವಾದ ಅಂಬಾರಿಯನ್ನು ಪ್ರತಿ ವರ್ಷ ವಿಜಯದಶಮಿಯಂದು ಜಂಬೂಸವಾರಿಗೆ ಇದನ್ನು ಬಳಸಲಾಗುತ್ತದೆ. ಅಂದು ತಾಯಿ ಚಾಮುಂಡೇಶ್ವರಿ ಅಲಂಕೃತಳಾದ ಈ ಅಂಬಾರಿಯನ್ನು ನೋಡಿ ಧನ್ಯರಾಗುವುದೇ ಒಂದು ಸೌಭಾಗ್ಯ.



Downloaded From: www.kpscvaani.com

ಭಾರತ ರತ್ನ

# ಪ್ರಣವ್ ಮುಖರ್ಜಿ

## ಅಪರೂಪದ ಮುತ್ಸದ್ಧಿ

ಡಾ. ಕೆ. ಪುಟ್ಟಸ್ವಾಮಿ

**ಪ್ರಣವ್ ಮುಖರ್ಜಿ ಸಿದ್ಧಾಂತ ಮತ್ತು ಸಾಂವಿಧಾನಿಕ ಮೌಲ್ಯಗಳ ಜೊತೆ ಎಂದೂ ರಾಜಿ ಮಾಡಿಕೊಂಡವರಲ್ಲ. ಪಕ್ಷಭೇದ ದಾಟಿ ಎಲ್ಲ ಪಕ್ಷ ಮತ್ತು ರಂಗದವರ ಅಭಿಮಾನಕ್ಕೆ ಪಾತ್ರರಾಗಿದ್ದ ಅವರ ಬದುಕು ಎಲ್ಲರಿಗೂ ಅನುಕರಣೀಯವಾದುದು.**





Downloaded From: www.kpscvaani.com



ಬಹಳ ವರ್ಷಗಳ ಹಿಂದೆ ವಿಧಾನಸೌಧಕ್ಕೆ ಬೇಟಿ ನೀಡಿದ ಸಂದರ್ಭ

**ಸ್ನೇ**ಹಿತರು ಮತ್ತು ಬಂಧುಗಳಿಂದ 'ಪ್ರಣವ್‌ದಾ' ಎಂದೇ ಕರೆಸಿಕೊಳ್ಳುತ್ತಿದ್ದ ಡಾ. ಪ್ರಣವ್ ಮುಖರ್ಜಿ ಅವರು ಸುಮಾರು ಐದು ದಶಕಗಳ ಕಾಲ ವೃತ್ತಿ ರಾಜಕಾರಣದಲ್ಲಿ ಹಂತ ಹಂತವಾಗಿ ಬೆಳೆದು ಅಂತಿಮವಾಗಿ ಆಡಳಿತ ವ್ಯವಸ್ಥೆಯ ಪರಮ ಅಧಿಕಾರದ 'ರಾಷ್ಟ್ರಪತಿ' ಹುದ್ದೆಗೇರಿದವರು. ಪಶ್ಚಿಮ ಬಂಗಾಳದ ಬೀರ್‌ಭೂಮ್ ಜಿಲ್ಲೆಯ ಹಳ್ಳಿಯೊಂದರ ಸಾಮಾನ್ಯ ಕುಟುಂಬದಲ್ಲಿ ಜನಿಸಿ, ವಿದ್ವತ್ತಿನ ಮನ್ನಣೆ ಪಡೆದು, ರಾಜಕೀಯ ರಂಗ ಪ್ರವೇಶಿಸಿ ಅನೇಕ ಪ್ರಭಾವಿ ಹುದ್ದೆಗಳನ್ನು ನಿಭಾಯಿಸಿದವರು. ಅವರ ನಿರಂತರ ಸೇವೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರವು ನಾಗರಿಕ ಪ್ರಶಸ್ತಿಯ ಅತ್ಯುನ್ನತ ಗೌರವವಾದ 'ಭಾರತ ರತ್ನ'ವನ್ನು ನೀಡಿ ಪುರಸ್ಕರಿಸಿತು.

ಪ್ರಣವ್ ಮುಖರ್ಜಿ ಅವರು ಹಿಂದಿನ ಬ್ರಿಟಿಷ್ ಭಾರತದ ಬಂಗಾಲ ಪ್ರಾಂತ್ಯಕ್ಕೆ ಸೇರಿದ ಮಿರಟಿ ಎಂಬ ಗ್ರಾಮದ ಬಂಗಾಳಿ ಕುಟುಂಬದಲ್ಲಿ ಜನಿಸಿದರು. (ಜನನ 11 ನೇ ಡಿಸೆಂಬರ್ 1935) ಅವರ ತಂದೆ ಕಮದ ಕಿಂಕರ್ ಮುಖರ್ಜಿ, ತಾಯಿ ರಾಜಲಕ್ಷ್ಮಿ ಮುಖರ್ಜಿ. ತಂದೆ ಕಿಂಕರ್ ಮುಖರ್ಜಿ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯರಾಗಿದ್ದರು. ಸ್ವಾತಂತ್ರ್ಯ ನಂತರ 1952 ಮತ್ತು 1964ರಲ್ಲಿ ಪಶ್ಚಿಮ ಬಂಗಾಳ ವಿಧಾನ ಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಹಾಗಾಗಿ ರಾಜಕೀಯ ಕ್ಷೇತ್ರದ ಪರಿಚಯ ಅವರಿಗೆ ಎಳವೆಯಿಂದಲೇ ದೊರಕಿತ್ತು.

ಬೀರ್‌ಭೂಮ್ ಜಿಲ್ಲೆಯ ಸೂರಿ ಎಂಬ ಪಟ್ಟಣದಲ್ಲಿದ್ದ ಸೂರಿ ವಿದ್ಯಾಸಾಗರ್ ಕಾಲೇಜಿನಿಂದ ಪದವಿ ಪಡೆದ ಮುಖರ್ಜಿ ಅವರಿಗೆ ರಾಜನೀತಿ, ಚರಿತ್ರೆ ಮತ್ತು ಕಾನೂನು ವಿಷಯಗಳ ಬಗ್ಗೆ ಅಪಾರವಾದ ಆಸಕ್ತಿಯಿತ್ತು. ಪದವಿಯ ನಂತರ ಅವರು ಕೊಲ್ಕತ್ತಾ ವಿಶ್ವವಿದ್ಯಾಲಯದಿಂದ ರಾಜಕೀಯ ಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದರು. ಆ ನಂತರ ಅದೇ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಮತ್ತು ಚರಿತ್ರೆಯ ವಿಷಯದಲ್ಲಿ ಮತ್ತೊಂದು ಎಂ.ಎ. ಪದವಿ ಗಳಿಸಿದರು.

ಪ್ರಣವ್ ಮುಖರ್ಜಿ ಅವರು ತಮ್ಮ ವೃತ್ತಿ ಬದುಕನ್ನು ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಹಿರಿಯ ಸಹಾಯಕನ ಹುದ್ದೆಯಿಂದ ಆರಂಭಿಸಿದರು. ಆದರೆ ಬಹುಬೇಗನೆ ಅವರು ಸಹಾಯಕ ಪ್ರಾಧ್ಯಾಪಕರಾಗಿ ಕೊಲ್ಕತ್ತಾದ ವಿದ್ಯಾನಗರ ಕಾಲೇಜಿಗೆ ಸೇರಿ ಬೋಧಕ ವೃತ್ತಿಗೆ ಬಂದರು. ರಾಜಕೀಯ ಕ್ಷೇತ್ರ ಪ್ರವೇಶಿಸುವ ಮುನ್ನ ಹಲವು ವರ್ಷ ಅವರು ದೇಶರ್ ದಾಕ್ (ಮಾತೃಭೂಮಿಯ ಕರೆ) ಎನ್ನುವ ಪತ್ರಿಕೆಯಲ್ಲಿ ಪತ್ರಕರ್ತರಾಗಿ ದುಡಿದರು.

ಅವರಿಗಿದ್ದ ರಾಜಕೀಯ ತಿಳಿವಳಿಕೆ, ಶಿಸ್ತು ಮತ್ತು ಚುರುಕಾದ ಕಾರ್ಯನಿರ್ವಹಣೆಯಿಂದ ಅಂದು ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರ ಕಣ್ಣಿಗೆ ಬಿದ್ದರು. 1969ರಲ್ಲಿ ಪಶ್ಚಿಮ ಬಂಗಾಳದ ಮಿಡ್ನಾಪುರ ಲೋಕಸಭಾ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ವಿ.ಕೆ. ಕೃಷ್ಣ ಮೆನನ್ ಅವರ ಚುನಾವಣಾ ಪ್ರಚಾರದ ನಿರ್ವಹಣೆಯನ್ನು ಶ್ರೀಮತಿ ಗಾಂಧಿ ಅವರು ಪ್ರಣವ್ ಮುಖರ್ಜಿ ಅವರಿಗೆ ವಹಿಸಿದರು. ಚುನಾವಣೆಯ ಭಾರವನ್ನು ಹೊತ್ತ ಮುಖರ್ಜಿ ಅವರು ಯಶಸ್ಸು ಸಾಧಿಸಿದರು. ಅವರ ಕಾರ್ಯವೈಖರಿಯನ್ನು ಕಂಡ ಶ್ರೀಮತಿ ಗಾಂಧಿ ಅವರು ತಮ್ಮ ಪಕ್ಷಕ್ಕೆ ಸೇರಿಸಿಕೊಂಡು ಅವರನ್ನು ಅದೇ ವರ್ಷ ರಾಜ್ಯಸಭಾ ಸದಸ್ಯರಾಗಿ ನಾಮಕರಣ ಮಾಡಿದರು. ಅಲ್ಲಿಂದ ಅವರು ರಾಜಕೀಯ ಕ್ಷೇತ್ರದಲ್ಲಿ ಹಿಂದೆ ನೋಡಿದ್ದೇ ಇಲ್ಲ. ಅವರು ಸತತವಾಗಿ ಐದು ಬಾರಿ ರಾಜ್ಯಸಭಾ ಚುನಾವಣೆಯಲ್ಲಿ ಗೆದ್ದು (1969, 1975, 1988, 1993 ಮತ್ತು 1999) ಸಂಸತ್ತಿನಲ್ಲಿ ರಾರಾಜಿಸಿದರು, ಅನಂತರ 2004ರಲ್ಲಿ ಹಾಗೂ 2009ರಲ್ಲಿ ಲೋಕಸಭೆಗೆ ಆಯ್ಕೆಯಾಗಿ ತಮ್ಮ ಗೆಲುವಿನ ಓಟ ಮುಂದುವರಿಸಿದರು. ಹೀಗೆ ಏಳು ಬಾರಿ ಸತತವಾಗ ಸಂಸತ್ ಸದಸ್ಯರಾಗಿ ಆಯ್ಕೆಗೊಂಡ ವಿರಳ ರಾಜಕಾರಣಿಯೆನಿಸಿದರು. 1969 ರಿಂದ ಆಯ್ಕೆಗೊಂಡ ಎಲ್ಲ

**ಪ್ರಣವ್ ಮುಖರ್ಜಿ ಮತ್ತು ಮನಮೋಹನ್ ಸಿಂಗ್ ಅವರು 1984ರಲ್ಲಿ ಅಪಾರ ವಿರೋಧ ಹಾಗೂ ಅಡ್ಡಿಗಳ ನಡುವೆಯೂ 1.1 ಬಿಲಿಯನ್ ಡಾಲರ್ ಮೊತ್ತವನ್ನು ಐ.ಎಂ.ಎಫ್. ನಿಂದ ಸಾಲವಾಗಿ ತಂದು ಆರ್ಥಿಕ ಚೇತರಿಕೆಯನ್ನು ಮೂಡಿಸುವಲ್ಲಿ ಯಶಸ್ವಿಯಾದರು. ಹಳಿ ತಪ್ಪಿದ್ದ ಭಾರತದ ಅರ್ಥವ್ಯವಸ್ಥೆಯನ್ನು ಸರಿದಾರಿಗೆ ತರುವಲ್ಲಿ ಪ್ರಣವ್ ಮುಖರ್ಜಿ ಅವರ ಶ್ರಮ ಸರ್ವರ ಶ್ಲಾಘನೆಗೆ ಒಳಗಾಯಿತು. ಆರ್ಥಿಕ ವಿಷಯಗಳನ್ನು ಚರ್ಚಿಸುವ ಅಂತಾರಾಷ್ಟ್ರೀಯ ಪತ್ರಿಕೆ "ಯೂರೋಮನಿ"ಯು ಪ್ರಣವ್ ಮುಖರ್ಜಿಯವರ ಕಾರ್ಯದಕ್ಷತೆಯನ್ನು ಪರಿಗಣಿಸಿ 1984ರಲ್ಲಿ ವಿಶ್ವದ ಅತ್ಯುತ್ತಮ ಆರ್ಥಿಕ ಸಚಿವ ಎಂದು ಕೊಂಡಾಡಿತು.**



Downloaded From: www.kpscvaani.com



ಮೈಸೂರು ವಿಶ್ವವಿದ್ಯಾಲಯದ ಶತಮಾನೋತ್ಸವ ಸಮಾರಂಭದಲ್ಲಿ ನಿಘಂಟು ತಜ್ಞ ಪ್ರೊ.ಜಿ.ವೆಂಕಟಸುಬ್ಬಯ್ಯ ಅವರನ್ನು ಸನ್ಮಾನಿಸುತ್ತಿರುವುದು.



ಬೆಳಗಾವಿಯಲ್ಲಿ ಜರುಗಿದ ಮೊದಲ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡುತ್ತಿರುವ ಸಂದರ್ಭ.

**ಭಾರತ ಸರ್ಕಾರವು ಅವರು ರಾಜನೀತಿ ಮತ್ತು ಆರ್ಥಿಕ ಕ್ಷೇತ್ರಕ್ಕೆ ಸಲ್ಲಿಸಿದ ಅನುಪಮ ಸೇವೆಯನ್ನು ಪರಿಗಣಿಸಿ ಎರಡನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮವಿಭೂಷಣ (2008) ಹಾಗೂ ಮೊದಲನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಭಾರತರತ್ನ (2019) ನೀಡಿ ಪುರಸ್ಕರಿಸಿದೆ.**

ವಯಸ್ಸಿನ ಸಂಸತ್ ಸದಸ್ಯರು ಪ್ರಣವ್ ಮುಖರ್ಜಿಯವರ ವಾಕ್ಚಟುತ್ವಕ್ಕೆ ಸಾಕ್ಷಿಯಾಗಿದ್ದಾರೆ. ಹಾಗೆಯೇ 1973ರಲ್ಲಿ ಮೊದಲ ಬಾರಿಗೆ ಕೇಂದ್ರ ಸಚಿವರಾದ ಪ್ರಣವ್ ಮುಖರ್ಜಿಯವರ ಸೇವೆಯನ್ನು 2014ರವರೆಗೆ ಅಧಿಕಾರಕ್ಕೆ ಬಂದ ಪ್ರತಿಯೊಬ್ಬ ಪ್ರಧಾನ ಮಂತ್ರಿಯೂ ಬಳಸಿಕೊಂಡಿರುವುದು ಸಹ ಅವರ ವ್ಯಕ್ತಿತ್ವದ ವಿಶೇಷ.

1973ರಲ್ಲಿ ಕೈಗಾರಿಕಾ ಅಭಿವೃದ್ಧಿ ಇಲಾಖೆಯ ಉಪ ಮಂತ್ರಿಯಾಗಿ ಸಚಿವ ಪದವಿಗೆ ಪದಾರ್ಪಣ ಮಾಡಿದ ಪ್ರಣವ್ ಮುಖರ್ಜಿಯವರು 2014ರವರೆಗೆ ಕೇಂದ್ರ ಸರ್ಕಾರದ ಪ್ರಮುಖ ಸಚಿವ ಹುದ್ದೆಗಳಿಗೆ ನೇಮಕಗೊಂಡರು. 1975ರಲ್ಲಿ ಸಂಪುಟ ದರ್ಜೆಯ ಸಚಿವರಾದ ಅವರು ಕಂದಾಯ ಮತ್ತು ಬ್ಯಾಂಕಿಂಗ್, ವಾಣಿಜ್ಯ ಮತ್ತು ಉಕ್ಕು ಹಾಗೂ ಗಣಿಗಾರಿಕೆ (1980), ಹಣಕಾಸು ಮತ್ತು ವಾಣಿಜ್ಯ (1982), ವಾಣಿಜ್ಯ (1993), ವಿದೇಶಾಂಗ ಖಾತೆ (1995 ಮತ್ತು 2006), ರಕ್ಷಣಾ ಖಾತೆ (2004) ಮತ್ತು ಹಣಕಾಸು ಖಾತೆ (2006 ಮತ್ತು 2009) ಸಚಿವರಾಗಿ ಪ್ರಮುಖ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದರು.



ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರ ಸರ್ಕಾರದಲ್ಲಿ 1982 ರಿಂದ 1984ರವರೆಗೆ ಹಣಕಾಸು ಖಾತೆಯನ್ನು ನಿರ್ವಹಿಸಿದ ಅವಧಿಯಲ್ಲಿಯೇ, ಮುಂದೆ ಪ್ರಧಾನಿಯಾದ ಆರ್ಥಿಕ ತಜ್ಞ ಡಾ. ಮನಮೋಹನ್ ಸಿಂಗ್ ಅವರು ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಹುದ್ದೆಯಲ್ಲಿದ್ದರು. ಪ್ರಣವ್ ಮುಖರ್ಜಿ ಮತ್ತು ಮನಮೋಹನ್ ಸಿಂಗ್ ಅವರು 1984ರಲ್ಲಿ ಅಪಾರ ವಿರೋಧ ಹಾಗೂ ಅಡ್ಡಿಗಳ ನಡುವೆಯೂ 1.1 ಬಿಲಿಯನ್ ಡಾಲರ್ ಮೊತ್ತವನ್ನು ಐ.ಎಂ.ಎಫ್. ನಿಂದ ಸಾಲವಾಗಿ ತಂದು ಆರ್ಥಿಕ ಚೇತರಿಕೆಯನ್ನು ಮೂಡಿಸುವಲ್ಲಿ ಯಶಸ್ವಿಯಾದರು. ಹಳಿ ತಪ್ಪಿದ್ದ ಭಾರತದ ಅರ್ಥವ್ಯವಸ್ಥೆಯನ್ನು ಸರಿದಾರಿಗೆ ತರುವಲ್ಲಿ ಪ್ರಣವ್ ಮುಖರ್ಜಿ ಅವರ ಶ್ರಮ ಸರ್ವರ ಶ್ಲಾಘನೆಗೆ ಒಳಗಾಯಿತು. ಆರ್ಥಿಕ ವಿಷಯಗಳನ್ನು ಚರ್ಚಿಸುವ ಅಂತಾರಾಷ್ಟ್ರೀಯ ಪತ್ರಿಕೆ "ಯೂರೋಮನಿ"ಯು ಪ್ರಣವ್ ಮುಖರ್ಜಿಯವರ ಕಾರ್ಯದಕ್ಷತೆಯನ್ನು ಪರಿಗಣಿಸಿ 1984ರಲ್ಲಿ ವಿಶ್ವದ ಅತ್ಯುತ್ತಮ ಆರ್ಥಿಕ ಸಚಿವ ಎಂದು ಕೊಂಡಾಡಿತು.

1984ರಲ್ಲಿ ಶ್ರೀಮತಿ ಇಂದಿರಾ ಗಾಂಧಿ ಅವರ ಹತ್ಯೆಯ ನಂತರ ತೆರವಾಗಿದ್ದ ಪ್ರಧಾನಿ ಹುದ್ದೆಗೆ ಪ್ರಣವ್ ಮುಖರ್ಜಿ ಅವರ ಹೆಸರು ತೇಲಿ ಬಂತು. ಆದರೆ ರಾಜೀವ್ ಗಾಂಧಿ ಅವರು ಪ್ರಧಾನಿಯಾದ ನಂತರ ಸಚಿವ ಸಂಪುಟದಲ್ಲಿ ಸ್ಥಾನವಿರಲಿಲ್ಲ. ಆದರೆ ಅಷ್ಟೇ ಪ್ರಮುಖವಾದ ಯೋಜನಾ ಆಯೋಗದ ಉಪಾಧ್ಯಕ್ಷ ಹುದ್ದೆಗೆ ನೇಮಕಗೊಂಡರು. ಕಾಕತಾಳೀಯವೆಂಬಂತೆ ಪ್ರಣವ್ ಮುಖರ್ಜಿ ಅವರು ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದ 1991–96ರ ಐದು ವರ್ಷದ ಅವಧಿಯಲ್ಲಿಯೇ ಡಾ. ಮನಮೋಹನ್ ಸಿಂಗ್ ಅವರು ಹಣಕಾಸು ಸಚಿವರಾಗಿದ್ದರು. ಸಿಂಗ್–ಮುಖರ್ಜಿ ಜೋಡಿಯ ಈ ಅವಧಿಯಲ್ಲಿಯೇ ಆರ್ಥಿಕ ಸುಧಾರಣೆಗಳು ಮತ್ತು ಮುಕ್ತ ಮಾರುಕಟ್ಟೆ ನೀತಿಗಳು ಜಾರಿಯಾಗಿ ಭಾರತವು ಆರ್ಥಿಕ ಪ್ರಗತಿಯ ಹಾದಿಯಲ್ಲಿ ದೃಢವಾದ ಹೆಜ್ಜೆಯಿರಿಸಿತು.

ಹಣಕಾಸು, ರಕ್ಷಣಾ ಖಾತೆ ಮತ್ತು ವಿದೇಶಾಂಗ ವ್ಯವಹಾರ ಖಾತೆಗಳು–ಇವು ಪ್ರಧಾನಿ ಹುದ್ದೆಯ ನಂತರದ ಮೂರು ಪ್ರಮುಖ ಖಾತೆಗಳು. ಇವುಗಳ ಜೊತೆಗೆ ವಾಣಿಜ್ಯ ವ್ಯವಹಾರ



Downloaded From: www.kpscvaani.com

ಖಾತೆಯೂ ಅಷ್ಟೇ ಮಹತ್ವವಾದದ್ದು. ಇಂಥ ಪ್ರಮುಖ ಖಾತೆಗಳು ಪ್ರಣವ್ ಮುಖರ್ಜಿಯವರಿಗೆ ಸಿಕ್ಕ ರೀತಿ ಮತ್ತೆ ಯಾರಿಗೂ ಒಲಿಯಲಿಲ್ಲ. ಈ ಎಲ್ಲ ಖಾತೆಗಳ ನಿರ್ವಹಣೆಯಲ್ಲಿ ಪ್ರಣವ್ ಮುಖರ್ಜಿ ಅವರು ತಮ್ಮ ಛಾಪನ್ನು ಒತ್ತಿದರು.

ರಕ್ಷಣಾ ಸಚಿವರಾಗಿ ಪ್ರಣವ್ ಮುಖರ್ಜಿ ಅವರು ಅಮೆರಿಕಾ ಮತ್ತು ಭಾರತದ ನಡುವಣ ಹತ್ತು ವರ್ಷ ಅವಧಿಯ ರಕ್ಷಣಾ ಒಡಂಬಡಿಕೆಗೆ ಸಹಿ ಹಾಕಿದರು. ಹಾಗೆಯೇ ಭಾರತೀಯ ರಾಜಕೀಯ, ಆರ್ಥಿಕ ನೀತಿಗಳು ಮತ್ತು ರಕ್ಷಣಾ ತಂತ್ರಗಾರಿಕೆಗೆ ಅಮೂಲ್ಯವಾದ ಹೊಳಹುಗಳನ್ನು ನೀಡಿದವರು. ಅವರು ಅಧಿಕಾರದ ಅವಧಿಯಲ್ಲಿ ಅತ್ಯಂತ ಜಾಣ ಸಚಿವರೂ, ಸಂಕಷ್ಟಗಳಿಗೆ ಪರಿಹಾರ ಕಂಡುಹಿಡಿಯಬಲ್ಲ ಚತುರರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಸಾರ್ವಜನಿಕ ಸಮಾರಂಭಗಳಲ್ಲಿ ಘನತೆಯಿಂದ ವರ್ತಿಸುತ್ತಿದ್ದ ಪ್ರಣವ್ ಮುಖರ್ಜಿ ಅವರಿಂದ ಸರ್ಕಾರದ ಯಾವ ಆಗುಹೋಗುಗಳು ಕಣ್ತಪ್ಪಿಸಿ ಹೋಗಲು ಸಾಧ್ಯವಿರಲಿಲ್ಲ. ಲೋಕಸಭೆಯ ನಾಯಕರಾಗಿ ತಮ್ಮ ಸಂಸದೀಯ ವಾಕ್ಪಟುತ್ವ, ತರ್ಕಬದ್ಧ ನಿರೂಪಣೆ, ವಾದಗಳಿಂದ ಸಂಸದೀಯ ಕಾರ್ಯಕಲಾಪಗಳಿಗೆ ಘನತೆ ತಂದರು. ವಿರೋಧ ಪಕ್ಷಗಳ ಆರೋಪಗಳನ್ನು ಸಮಚಿತ್ತದಿಂದ ಆಲಿಸಿ ಅಷ್ಟೇ ಶಾಂತರೀತಿಯಿಂದ ಸಮರ್ಥನೆಗಳನ್ನು ನೀಡುತ್ತಿದ್ದರು. ದಿನಕ್ಕೆ ಹದಿನೆಂಟು ಗಂಟೆ ದುಡಿಯುತ್ತಿದ್ದ ಅವರ ಶ್ರಮದ ಬದುಕಿನಲ್ಲಿ ಸಾಹಿತ್ಯ, ಸಂಸ್ಕೃತಿಯ ವಿಚಾರಗಳಿಗೂ ಸಾಕಷ್ಟು ಸಮಯಾವಕಾಶ ಮಾಡಿಕೊಳ್ಳುತ್ತಿದ್ದದ್ದು ಅವರ ವ್ಯಕ್ತಿತ್ವದ ವಿಶೇಷ. ಓದು, ತೋಟಗಾರಿಕೆ, ರವೀಂದ್ರ ಸಂಗೀತ ಆಲಿಸುವುದು ಅವರ ಪ್ರಿಯವಾದ ಹವ್ಯಾಸಗಳು. ಮಧ್ಯರಾತ್ರಿ ಕಳೆದು ಬೆಳಗಿನ ಒಂದು ಗಂಟೆಯವರೆಗೆ ಅವರು ಎಚ್ಚರದಿಂದ ಕರ್ತವ್ಯ ನಿರ್ವಹಿಸುತ್ತಿದ್ದದ್ದು ಸಮಕಾಲೀನರಲ್ಲಿ ಅಚ್ಚರಿ ಮೂಡಿಸಿತ್ತು.

ಸಂಸತ್ತಿನಲ್ಲಿ ಅಧಿಕಾರವಿಲ್ಲದ ಸಮಯದಲ್ಲಿ ಪ್ರಣವ್ ಮುಖರ್ಜಿ ಅವರು ಅನೇಕ ಅಂತರರಾಷ್ಟ್ರೀಯ ಪ್ರತಿಷ್ಠಿತ ಸಂಸ್ಥೆಗಳಿಗೆ ನಾಮ ನಿರ್ದೇಶನಗೊಳ್ಳುತ್ತಿದ್ದರು. ಅವರು ಐ.ಎಂ.ಎಫ್, ವಿಶ್ವ ಬ್ಯಾಂಕ್ ಮತ್ತು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಆಡಳಿತ ಮಂಡಳಿಯಲ್ಲಿ ಸೇವೆ ಸಲ್ಲಿಸಿದರು. ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್.ನ ಮುಖವಾಣಿ "ಎಮರ್ಜಿಂಗ್ ಮಾರ್ಕೆಟ್ಸ್" ಪತ್ರಿಕೆಯು ಅವರನ್ನು 2010ನೇ ಸಾಲಿನ "ಏಷ್ಯಾದ ಅತ್ಯುತ್ತಮ ಆರ್ಥಿಕ ಸಚಿವ"ನೆಂದು ಆಯ್ಕೆ ಮಾಡಿತು. ಬ್ರಿಟನ್‌ನ ಪ್ರಸಿದ್ಧ ಆರ್ಥಿಕ ಪತ್ರಿಕೆ "ದಿ ಬ್ಯಾಂಕರ್" 2011ನೇ ಸಾಲಿನ "ಅತ್ಯುತ್ತಮ ಅರ್ಥ ಸಚಿವ" ಎಂದು ಆಯ್ಕೆ ಮಾಡಿತು. ಅದೇ ವರ್ಷ ವೋಲ್ವರ್ ಹ್ಯಾಂಪ್ಟನ್ ವಿಶ್ವವಿದ್ಯಾಲಯವು ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಪುರಸ್ಕರಿಸಿತು. ಇದಲ್ಲದೆ ಅವರಿಗೆ 2012ರಲ್ಲಿ ಅಸ್ಸಾಂ ವಿಶ್ವವಿದ್ಯಾಲಯ ಮತ್ತು ಕರ್ನಾಟಕದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, 2013ರಲ್ಲಿ ಇಸ್ತಾನ್‌ಬುಲ್ ವಿಶ್ವವಿದ್ಯಾಲಯ, 2014ರಲ್ಲಿ ಕೊಲ್ಕತ್ತಾ ವಿಶ್ವವಿದ್ಯಾಲಯ, 2015ರಲ್ಲಿ ಜೋರ್ಡಾನ್ ವಿಶ್ವವಿದ್ಯಾಲಯ, ಪ್ಯಾಲಿಸ್ತೇನಿನ ಅಲ್-ಕುಥ್ ವಿಶ್ವವಿದ್ಯಾಲಯ ಮತ್ತು ಜೆರುಸಲೇಂನ ಹೀಬ್ರೂ ವಿಶ್ವವಿದ್ಯಾಲಯ, 2016ರಲ್ಲಿ ಕಠ್ಮಂಡು ವಿಶ್ವವಿದ್ಯಾಲಯ, 2017ರಲ್ಲಿ ಜಾಧವಪುರ ವಿಶ್ವವಿದ್ಯಾಲಯ, ಹಾಗೂ 2018ರಲ್ಲಿ ಚಿತ್ತಗಾಂವ್ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್



ಪದವಿ ನೀಡಿ ಗೌರವಿಸಿವೆ. ಜೊತೆಗೆ 2013ರಲ್ಲಿ ಮಾರಿಷಸ್ ವಿಶ್ವವಿದ್ಯಾಲಯ ಮತ್ತು ಢಾಕಾ ವಿಶ್ವವಿದ್ಯಾಲಯಗಳು ಸಹ ಗೌರವ ಡಾಕ್ಟರೇಟ್ ಪದವಿ ನೀಡಿ ಪುರಸ್ಕರಿಸಿವೆ.

ಭಾರತ ಸರ್ಕಾರವು ಅವರು ರಾಜನೀತಿ ಮತ್ತು ಆರ್ಥಿಕ ಕ್ಷೇತ್ರಕ್ಕೆ ಸಲ್ಲಿಸಿದ ಅನುಪಮ ಸೇವೆಯನ್ನು ಪರಿಗಣಿಸಿ ಎರಡನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮವಿಭೂಷಣ (2008) ಹಾಗೂ ಮೊದಲನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಭಾರತರತ್ನ (2019) ನೀಡಿ ಪುರಸ್ಕರಿಸಿದೆ.

ಪ್ರಣವ್ ಮುಖರ್ಜಿ ಅವರ ಸೇವೆ ಮತ್ತು ಹಿರಿತನವನ್ನು ಪರಿಗಣಿಸಿ ರಾಷ್ಟ್ರಪತಿ ಹುದ್ದೆಗೆ ನೇಮಕ ಮಾಡುವ ಬಗ್ಗೆ 2007ರಲ್ಲಿಯೇ ಮುಂಚೂಣಿಗೆ ಬಂತು. ಆದರೆ ಅವರ ಸೇವೆ ಸಕ್ರಿಯ ಆಡಳಿತದಲ್ಲಿ ಅಗತ್ಯವಿದ್ದ ಕಾರಣಕ್ಕೆ, ಅವರು ಹಣಕಾಸು ಸಚಿವರಾಗಿ ಮುಂದುವರೆದರು. 2012ರ ವೇಳೆಗೆ ಪ್ರಣವ್ ಮುಖರ್ಜಿ ಅವರು ರಾಷ್ಟ್ರಪತಿ ಸ್ಥಾನಕ್ಕೆ ವಿವಾದರಹಿತ ಅಭ್ಯರ್ಥಿಯಾಗಿದ್ದರು. 2012ರಲ್ಲಿ ಎಪ್ಪತ್ತೇಳು ವಯಸ್ಸು ತುಂಬ ರಾಜಕೀಯದಲ್ಲಿ ಮಾಗಿದ್ದ ಮುತ್ಸದ್ಧಿ ಪ್ರಣವ್ ಮುಖರ್ಜಿ ಅವರ ವೃತ್ತಿ ಬದುಕು 'ರಾಷ್ಟ್ರಪತಿ' ಹುದ್ದೆಯ ಮೂಲಕ ಅಂತ್ಯವಾದದ್ದು ಅವರು ಸಲ್ಲಿಸಿದ ಸೇವೆ ಮತ್ತು ಶ್ರಮದ ಬದುಕಿಗೆ ಸಂದ ಅರ್ಹ ಗೌರವವಾಗಿತ್ತು.

2017ರಲ್ಲಿ ರಾಷ್ಟ್ರಪತಿ ಹುದ್ದೆಯಿಂದ ನಿರ್ಗಮಿಸಿದ ಅವರು ತಮ್ಮ ಬದುಕನ್ನು ಸಾಹಿತ್ಯ ಮತ್ತು ಸಂಗೀತದ ಸಹವಾಸದಲ್ಲಿ ಕಳೆದರು.

1957ರಲ್ಲಿ ಸುರ್ವ ಮುಖರ್ಜಿ ಅವರನ್ನು ಮದುವೆಯಾದ ಪ್ರಣವ್ ಮುಖರ್ಜಿಯವರಿಗೆ ಅಭಿಜಿತ್ ಮುಖರ್ಜಿ ಹಾಗೂ ಶರ್ಮಿಷ್ಠಾ ಮುಖರ್ಜಿ ಎಂಬ ಎರಡು ಮಕ್ಕಳು. ಅಭಿಜಿತ್ ಮುಖರ್ಜಿ ರಾಜಕೀಯದಲ್ಲಿ ಸಕ್ರಿಯರಾಗಿದ್ದರೆ, ಶರ್ಮಿಷ್ಠಾ ಕಥಕ್ ನೃತ್ಯಪಟು. ರಾಜಕೀಯದಲ್ಲೂ ಆಸಕ್ತಿ. ಪತ್ನಿ ಸುರ್ವ ಮುಖರ್ಜಿ ಅವರು 2015ರಲ್ಲಿ ಹೃದಯಾಘಾತದಿಂದ ನಿಧನರಾದರು.

ಪಶ್ಚಿಮ ಬಂಗಾಲದಿಂದ ರಾಷ್ಟ್ರ ರಾಜಕಾರಣಕ್ಕೆ ನೇರವಾಗಿ ಬಂದ ಕೆಲವೇ ಮುತ್ಸದ್ಧಿಗಳಲ್ಲಿ ಪ್ರಣವ್ ಮುಖರ್ಜಿ ಪ್ರಮುಖರು. ಆದರೆ ಸಿದ್ಧಾಂತ ಮತ್ತು ಸಾಂವಿಧಾನಿಕ ಮೌಲ್ಯಗಳ ಜೊತೆ ಎಂದೂ ರಾಜಿ ಮಾಡಿಕೊಂಡವರಲ್ಲ. ಪಕ್ಷಭೇದ ದಾಟಿ ಎಲ್ಲ ಪಕ್ಷ ಮತ್ತು ರಂಗದವರ ಅಭಿಮಾನಕ್ಕೆ ಪಾತ್ರರಾಗಿದ್ದ ಪ್ರಣವ್ ಮುಖರ್ಜಿ ಅವರು ಸಾರ್ವಜನಿಕ ಬದುಕನ್ನು ಘನತೆಯಿಂದ ನಿರ್ವಹಿಸಿ ಅನುಕರಣೀಯ ಮಾದರಿಯನ್ನು ಬಿಟ್ಟು ಹೋದವರು. ಹಳ್ಳಿಯೊಂದರಲ್ಲಿ ಜನಿಸಿ, ರಾಜಕೀಯದಲ್ಲಿ ಹಂತಹಂತವಾಗಿ ಮೇಲೇರಿ ಕೊನೆಗೆ ರಾಷ್ಟ್ರಪತಿಯಂಥ ಅತ್ಯುನ್ನತ ಸ್ಥಾನವನ್ನು ಅಲಂಕರಿಸಿದ ಅವರ ಬದುಕಿನ ಪಯಣವೇ ಒಂದು ದಂತಕತೆ.



Downloaded From: www.kpscvaani.com



**ಅತಿ ಎತ್ತರದ ಗಿರಿ ಎಂಬ ಹೆಗ್ಗಳಿಕೆಯನ್ನು ಹೊಂದಿರುವ ಮಲೆನಾಡಿನ ಮುಳ್ಳಯ್ಯನ ಗಿರಿ ಕರ್ನಾಟಕದ ಸ್ವಿಟ್ಜರ್ಲೆಂಡ್ ಎಂಬ ಖ್ಯಾತಿಯನ್ನು ಪಡೆದಿದೆ. ಇಂತಹ ಸುಂದರ ತಾಣದ ಪರಿಚಯ ಮಾಡಿಕೊಡುವುದು ಈ ಲೇಖನದ ಉದ್ದೇಶ.**

ಡಾ. ಮಂಜುಳಾ ಹುಲ್ಲಹಳ್ಳಿ

ಚಿಕ್ಕಮಗಳೂರು ಎಂದರೆ ಸಾಕು, ಮೈಮನಗಳಲ್ಲಿ ರಸಾನುಭೂತಿಯ ಪುಳಕ. ಈ ಪುಳಕದ ಮುಖ್ಯ ಕಾರಣ ಚಿಕ್ಕಮಗಳೂರಿನಲ್ಲಿ ಎತ್ತ ನಿಂತು ನೋಡಿದರು ತನ್ನೆಡೆಗೆ ಕೈಚಾಚಿ ಕರೆವ ಗಿರಿ ಪರ್ವತಶ್ರೇಣಿ, ರವಿ, ಚಂದ್ರ, ತಾರೆ, ನೀಲಾಕಾಶ, ಮುಗಿಲ ಮಾಲೆಗಳೊಡನೆ ಸರಸದಾಟ ಆಡುತ್ತಾ ಕ್ಷಣಕ್ಷಣಕ್ಕೂ ವೈವಿಧ್ಯಮಯ ದಿವ್ಯ ರಂಗು ತರಂಗಗಳನ್ನು ಹೊಮ್ಮಿಸಿ, ಚಿಮ್ಮಿಸಿ, ಮನವನ್ನು ವಿಸ್ಮಯದ ಕಡಲಿನಲ್ಲಿ ಮುಳುಗಿಸುವ, ಬೆರಗಿನ ಹೊನಲಿನಲ್ಲಿ ಹರಿಸುವ ದಿವ್ಯ ಭಾವ ಸೌಂದರ್ಯದ ತಾಣ, ಮುಳ್ಳಯ್ಯನ ಗಿರಿ.

ಎಲ್ಲಾ ದಿಕ್ಕುಗಳಿಂದಲೂ ಚಿಕ್ಕಮಗಳೂರಿನೆಡೆಗೆ ಬರುವವರನ್ನು ಅತಿ ದೂರದಿಂದಲೇ ತನ್ನತ್ತ ಬನ್ನಿ ಎಂದು ಮುಗುಳ್ನಕ್ಕು ಕೈ ಬೀಸಿ ಕರೆಯುವ, ಕಣ್ಮನ ತಣಿಸಿ ಪರಿಪೂರ್ಣ ಸೌಂದರ್ಯದ ಒಲವುಣಿಸಿ ಮೆರೆಯುವ ಮುಳ್ಳಯ್ಯನಗಿರಿ ಇರುವ ಮಲೆಯ ಶ್ರೇಣಿಗೆ ಚಂದ್ರದ್ರೋಣ ಪರ್ವತವೆಂಬುದು ಸೊಗಸಾದ ಅನ್ವರ್ಥನಾಮ. ಬಿದಿಗೆಯ ಚಂದ್ರಾಕೃತಿ, ಕುದುರೆಯ ಲಾಳಾಕೃತಿಯ ಸಹ್ಯಾದ್ರಿ ಮಡಿಲಿನ ಈ ಬೆಟ್ಟ ಸಾಲುಗಳು ಹಿಮಾಲಯಕ್ಕೂ ನೀಲಗಿರಿ ಪರ್ವತಗಳಿಗೂ ನಡುವೆ ಇರುವ ಎತ್ತರದ ಗಿರಿ ಶ್ರೇಣಿಗಳಂತೆ. ಅದಕ್ಕೆ ಸಮುದ್ರ ಮಟ್ಟದಿಂದ 6317 ಅಡಿ ಎತ್ತರವಿರುವ ಮುಳ್ಳಯ್ಯನಗಿರಿಗೆ ಕರ್ನಾಟಕದಲ್ಲೇ ಎತ್ತರದ ಸ್ಥಾನವೆಂಬ ಕಿರೀಟ, ಮಲೆನಾಡ ಒಡಲಿನ ಚಾರಣಿಗರ ಸ್ವರ್ಗ, ಪ್ರವಾಸಿಗರ ಸ್ವಿಟ್ಜರ್ಲೆಂಡ್ ಎಂಬ ಹೆಗ್ಗಳಿಕೆ.

ಮುಳ್ಳಯ್ಯನ ಗಿರಿಯೆಡೆಗೆ ಹೊರಡುವುದೆಂದರೆ ಒಂದು ಭಾವ ಸಂಭ್ರಮ. ಚಿಕ್ಕಮಗಳೂರಿನ ಪಕ್ಕವೇ ಇದೆ ಎನಿಸಿದರೂ



## ಕರ್ನಾಟಕದ ಅತ್ಯುನ್ನತ ಶಿಖರ

# ಮುಳ್ಳಯ್ಯನ ಗಿರಿ



Downloaded From: www.kpscvaani.com



ಮಳೆಗಾಲದಲ್ಲಿ ಒಂದು ರೀತಿಯ ಸೊಬಗು ಚಳಿಗಾಲದಲ್ಲೊಂದು ಭಾವದ ಬೆರಗು, ಬೇಸಿಗೆಯಲ್ಲಿ ಬರೀ ಆಹ್ಲಾದದ ಗುನುಗು, ಮುಂಜಾನೆಯ ಪರಿಯೇ ಬೇರೆ, ಮಧ್ಯಾಹ್ನದ ಮುಗಿಲೇ ಬೇರೆ, ಸಂಜೆಯ ಸುಖವೇ ಬೇರೆ! ಮಂಜು ಮೋಡವಿದ್ದರೆ ಒಂದು ಬಗೆಯ ಪುಳಕ, ಕಣ್ಮುಂದೆ ಹಾಲಿನ ಸಾಗರವೆ ಉಕ್ಕುಕ್ಕಿ ಹರಿಯುವ ಮೊರೆತ, ಮೋಡಗಳೊಳಗೆ ತೂರಿ ಏರಿ ಸವಾರಿ ಮಾಡಿಯೇ ಬಿಟ್ಟವೆನ್ನುವ ರೋಚಕ! ಹೊಂಬಿಸಿಲಿನ ಆಗಸದಲ್ಲಿ ಬೇರೆ ರೀತಿಯದ್ದೇ ಸರಸ, ದೂರದಲ್ಲಿ ಕಾಣುವ ಊರು, ಕೆರೆಗದ್ದೆ, ತೋಟಗಳು ಪ್ರಕೃತಿಯ ಆಟದ ಸಾಮಾನಿನಂತೆ ಭಾಸವಾಗುತ್ತವೆ. ಮುಗಿಲು ನೆಲದ ದಿವ್ಯ ಬಾಂಧವ್ಯದ ಆಸ್ವಾದದ ಸಹವಾಸ, ಶುಭ್ರ ಶುದ್ಧ ಗಾಳಿಯನ್ನು ಒಮ್ಮೆ ಎಳೆದು ಎದೆ ತುಂಬ ತುಂಬಿಕೊಂಡರೆ ಮತ್ತೇನು ಬೇಡವೆಂಬ ನಿರಾಳ ಶ್ವಾಸ.

ಗಿರಿನೆತ್ತಿ ಮುಟ್ಟಲು 20 ಕಿ.ಮೀ ಪ್ರಯಾಣ ಬೇಕೆ ಬೇಕು. ಹಾದಿಯುದ್ದಕ್ಕೂ ನಿಸರ್ಗ ದೇವಿಯ ವೈವಿಧ್ಯಪೂರ್ಣ ದಿವ್ಯ ಸೌಂದರ್ಯ ಹಸುರಿನ ಹೊನಲು, ತಂಗಾಳಿಯ ನವಿರು, ದಾರಿಯ ಉದ್ದಕ್ಕೂ ಕಾಣಸಿಗುತ್ತದೆ.

ಕೈಕಾಲು ಗಟ್ಟಿ ಇದ್ದು ಸಾಕಷ್ಟು ಸಮಯವಿದ್ದರೆ ಚಾರಣದ ಹಾದಿ ಅಪೂರ್ವ ಅನುಭವದ ಬುತ್ತಿ ಕಟ್ಟಿಕೊಡುತ್ತದೆ. ಕೈಮರ ಸಮೀಪದ ಸುಂದರ ನೆಲೆ ನಿರ್ವಾಣಸ್ವಾಮಿ ಮಠದ ಬಳಿ ಬಂದರೆ ಸಾಕು, ನಿರ್ವಾಣಸ್ವಾಮಿಗಳ ಗದ್ದುಗೆಗೆ ಕೈಮುಗಿದು ತಪ್ಪಲಿ ಚಾರಣದ ಹಾದಿಯನ್ನು ಹಿಡಿಯಬಹುದು. ಈ ನಿರ್ವಾಣಸ್ವಾಮಿಗಳೂ ಐತಿಹಾಸಿಕ ಪುರುಷರೇ. ಗಿರಿಪಾದದ ಈ ಸ್ಥಳದಲ್ಲಿ ಪ್ರಶಾಂತತೆಯ ಸೊಬಗು ಭಕ್ತಿಯ ಆಪ್ತ ಸೌಂದರ್ಯ ತಾವೇ ತಾವಾಗಿ ಮೇಳೈಸಿವೆ.

ಇಲ್ಲಿಂದ ಮುಳ್ಳಯ್ಯನಗಿರಿ ಏರಲು ಆರಂಭವಾಗುವ ಚಾರಣದ ಕಾಲು ದಾರಿ ಸರ್ಪದ ಹಾದಿ. ಎಚ್ಚರಿಕೆಯಿಂದ ಹೆಜ್ಜೆಯ ಮೇಲೆ ಹೆಜ್ಜೆಯನಿಡುತ್ತಾ ಸರ್ಪದ ಹಾಗೆ ಹೊರಳಿ ಹೊರಳಿ ನಡೆಯುತ್ತಾ, ಒಬ್ಬರಿಗೊಬ್ಬರೂ ಕೈ ಆಸರೆಯಾಗುತ್ತಾ, ಸುತ್ತಮುತ್ತಲ ಸಿರಿ ಸೊಬಗನ್ನು ಆಸ್ವಾದಿಸುತ್ತಾ ಗಿರಿಯ ಮುಡಿ ತಲುಪುವ ಸುಮಾರು 12 ಕಿ.ಮೀ ಗಳ ಹಾದಿ ಸ್ವರ್ಗದ ದಾರಿಯೇನೋ ಎನ್ನಿಸುತ್ತದೆ. ಏರುತ್ತಾ ಏರುತ್ತಾ ಬದಲಾಗುವ ಪ್ರಕೃತಿ ಸೌಂದರ್ಯ, ಬಯಲಾಗುವ ನೈಸರ್ಗಿಕ ವೈಭವ ಅವರ್ಣನೀಯ. ಗಿಡ ಮರ ವನ ಕಾನನ ಕಾಫಿ ಬನಗಳನ್ನು ದಾಟುತ್ತಾ ಮೇಲೇರಿದಂತೆ ಪಶ್ಚಿಮ ಘಟ್ಟಗಳ ವಿಶಿಷ್ಟ ಶೋಲಾ ಕಾಡುಗಳ ಮಹಾಸಿರಿ ಮೈ ತೆರೆದುಕೊಳ್ಳುತ್ತದೆ. ಕಣ್ಣೆತ್ತಿ ನೋಡಿದರೆ ಮೈ ತುಂಬಾ ಹಸಿರು ಮಕಮಲ್ಲಿನ ಮೇಲ್ವಾಸು ಹೊದ್ದ ಪರ್ವತ ಸಾಲು, ಅತ್ತ, ಇತ್ತ, ಎತ್ತೆತ್ತಲು ಹರಡಿದ ಹಸುರಿನ ಕಡಲು. ಈ ರೀತಿಯ ಹಸುರನ್ನು ನೋಡ ನೋಡುತ್ತಲೇ ಇದ್ದರೆ ಕುವೆಂಪು ಅವರಂತೆ ನಮ್ಮ ಆತ್ಮಗಳು ಹಸುರುಗಟ್ಟುತ್ತವೆ. ಒಡಲೊಳಗಿನ ನೆತ್ತರೂ ಹಸುರಸುರೇ.

ಈ ಚಾರಣದ ಹಾದಿಯಲ್ಲಿ ನೂರು ಸೌಂದರ್ಯದ ರಸ ಘಟ್ಟಗಳನ್ನು ಮೂರು ನಾಲ್ಕು ಘಂಟೆಗಳ ದಿವ್ಯಾನುಭೂತಿಯಲ್ಲಿ ಸವೆಸಿದಾಗ, ಮುಳ್ಳಯ್ಯನಗಿರಿ ಶಿಖರದ ಮೇಲಣ ಎಡಭಾಗದ ತುದಿಯಲ್ಲಿ ಮುಳ್ಳಯ್ಯನ ಗುಡಿಯೆಡೆಗೆ ಪ್ರವೇಶಾವಕಾಶ ಮಾಡಿಕೊಡುತ್ತದೆ.

ವಾಹನದ ಹಾದಿಯಲ್ಲಿ ಕೈಲಾಲುಗಳಿಗೆ ಶ್ರಮವಿಲ್ಲ. ಆದರೆ ಚಾರಣದ ಹಾದಿಯಲ್ಲಿ ನಿಸರ್ಗದ ಸೊಗಸು ಮೈಮನಗಳಿಗೆಲ್ಲಾ ಉಲ್ಲಾಸ ನೀಡುತ್ತದೆ. ನೋಡುಗರು ಸುತ್ತಾ ನೋಡಿ ಸವಿಯಲು ಮೈಯೆಲ್ಲಾ ಕಣ್ಣಾಗಬೇಕು. ಹಾಗೆಯೇ ಕಿರಿದಾದ ರಸ್ತೆಯ ಕಡೆಗೆ ಚಾಲಕರ ಮೈಮನವೆಲ್ಲಾ ಕಣ್ಣಾಗಿರಬೇಕು.

ದಾರಿಯಲ್ಲಿ ಅಲ್ಲಲ್ಲೆ ತಿರುವುಗಳಲ್ಲಿ ವಾಹನ ನಿಲ್ಲಿಸಿ ಗಿರಿಸಿರಿಯ ಸೌಂದರ್ಯ ಸವಿದು, ಬೆಟ್ಟದ ನಡುವಿಂದ ಉಕ್ಕಿ ಹರಿದು ಬರುವ ಝುರಿಗಳ ಹೂ ಚಿಂತನಕ್ಕೆ ಮೈಯೊಡ್ಡಿ ಸುಖಿಸಿ, ಏರು ಬೆಟ್ಟದ ಕಡಿದಾದ ಹಾದಿಯಲ್ಲಿ ಸಾಗಿದರೆ ಮೊದಲ ಹಂತ ಶ್ರೀ ಸೀತಾಳ, ಮಲ್ಲಿಕಾರ್ಜುನ ವಿಶಾಲ ಆವರಣದ ಸುಂದರ ಆಲಯದ ರಮ್ಯ ತಾಣ ಎದುರಾಗುತ್ತದೆ. ಸೀತಾಳಯ್ಯನವರ ಗದ್ದುಗೆ ಎಂದು ಕರೆಸಿ ಕೊಳ್ಳುವ ಈ ಕ್ಷೇತ್ರದ ಶಿವಲಿಂಗ ಸ್ವರೂಪ ಅತ್ಯಂತ ವಿಶಿಷ್ಟ ಲಿಂಗದ ಮುಂದಿರುವ ಪುಟ್ಟ ಹಳ್ಳದಿಂದ ಪವಿತ್ರ ಜಲ ಉಕ್ಕಿ ಬರುತ್ತದೆ. ತೀರ್ಥ ರೂಪದಲ್ಲಿ ಇದನ್ನು ಸ್ವೀಕರಿಸುವುದೇ ಒಂದು ಧನ್ಯತೆ.

ಹದಿನೈದನೇ ಶತಮಾನದಲ್ಲಿ ಸ್ಥಳೀಯ ಪಾಳೇಗಾರ ಅರಸರಿಂದ ನಿರ್ಮಾಣಗೊಂಡಿರಬಹುದಾದ ಈ ದೇಗುಲವೇ ಒಂದು ವಿಸ್ಮಯ, ಏನೆಲ್ಲಾ ಸೌಲಭ್ಯಗಳಿರುವ ಇಂದಿನ ದಿನಗಳಲ್ಲೂ ಈ ತಾಣ ಮುಟ್ಟಲು ಜೀವವನ್ನು ಕೈಲಿ ಹಿಡಿದುಕೊಂಡು ತಿಣುಕಾಡುತ್ತೇವೆ. ಆ ಕಾಲದಲ್ಲಿ ಮರಗಿಡ ಕಲ್ಲು ಮುಳ್ಳು, ಖಗ, ಮೃಗ, ಝರಿ, ಗಾಳಿ ಬಯಲುಗಳಲ್ಲದೇ ಮತ್ತೇನು ಇಲ್ಲದ ಆಕಾಲದಲ್ಲಿ ನಮ್ಮ ಪೂರ್ವಜರು ಇಂತಹ ಮಲೆಯ ತುದಿಯಲ್ಲಿ ಇಷ್ಟು ಗಟ್ಟಿಮುಟ್ಟಾದ ದೇಗುಲವನ್ನು ಅದು ಹೇಗೆ ತಾನೇ ಕಟ್ಟಿರಬಹುದು! ಮಾತುಗಳು ಸೋಲುತ್ತವೆ. ನಮ್ಮ ಹಿರಿಯರ ಅಪೂರ್ವ ಶ್ರದ್ಧಾಭಕ್ತಿಗಳಿಗೆ ಮನ ತಲೆಬಾಗಿ ನಮಿಸುತ್ತದೆ.

ಸೀತಾಳಯ್ಯನ ಗುಡಿಯಿಂದ ಮುಳ್ಳಯ್ಯನಗಿರಿಯವರೆಗಿನ ಸುಮಾರು 5 ಕೀ.ಮೀ ಹಾದಿ ಭಯಂಕರ. ವಾಹನದ ಹಾದಿಯಲ್ಲಿ ಸ್ವಲ್ಪ ಲಯ ತಪ್ಪಿದರೂ ಕ್ಷಣ ಮಾತ್ರದಲ್ಲಿ ಕಣಿವೆಯಾಳದ ದರ್ಶನ, ಕಾಲ್ನಡಿಗೆಯಲ್ಲಿ ಹೊರಟರಂತೂ ಅತ್ಯದ್ಭುತ ಕುಳಿರ್ಗಾಳಿಯೊಡನೆ ಅವಿಸ್ಮರಣೀಯ ಸರಸ.

ಮುಳ್ಳಯ್ಯನಗಿರಿ ಬೆಟ್ಟದ ತಪ್ಪಲಿನಿಂದ ಶಿಖರ ಮುಟ್ಟಲು 300 ರಷ್ಟು ಮೆಟ್ಟಿಲನ್ನು ಎಲ್ಲರೂ ಕಡ್ಡಾಯವಾಗಿ ಹತ್ತಲೇಬೇಕು.



Downloaded From: www.kpscvaani.com

ಒಂದೊಂದು ಮೆಟ್ಟಿಲು ಏರಿದಾಗಲೂ ಆನಂದದ ರಸಕೀಲಿಕೈ ತೆರೆದುಕೊಳ್ಳುತ್ತದೆ. ಒಮ್ಮೆ ರಭಸದಿಂದ ಎತ್ತಿ ಬಿಸಾಡುವೆನೆಂಬ ಆರ್ಭಟದಲ್ಲಿ ಬೀಸುವ ಗಾಳಿ ಕೆಲವೇ ಕ್ಷಣಗಳಲ್ಲಿ ಮಂಜು ಮೋಡಗಳ ಬೆರಳುಗಳಿಂದ ಮೈಸವರಿ ಕಚಗುಳಿ ಇಡುತ್ತವೆ. ಒಮ್ಮೆ ರವಿಕಿರಣದ ಹೊನ್ನ ಮಳೆಯನ್ನು ಆಸ್ವಾದಿಸುವ ಕಣ್ಣುಗಳು ಮರುಕ್ಷಣದಲ್ಲಿ ತನ್ನ ಕೈಕಾಲುಗಳನ್ನು ಗುರುತಿಸಲಾರದ ಮಂಜುಹೊನಲಿನಲ್ಲಿ ಕಂಗೆಡುತ್ತದೆ. ನಿಸರ್ಗರಮಣಿಯ ಮೌನಗೀತವನ್ನು ಮನತುಂಬಿ ಹಾಡುತ್ತಿದ್ದ ತಂಗಾಳಿ ಇದ್ದಕ್ಕಿದ್ದಂತೆ ರಭಸದಿಂದ ಕಿವಿಗಡಚಿಕ್ಕುತ್ತದೆ. ಟೋಪಿ, ಶಾಲು, ಸ್ವೆಟರ್ ಈ ಕಾಲದಲ್ಲಿ ಏಕೆ ಎಂದು ಕೈಬಿಟ್ಟಿದ್ದರೆ ಸ್ವಲ್ಪ ಹೊತ್ತಿನಲ್ಲೆ ಅವು ಇಲ್ಲದೇ ಉಳಿಯಲಾರೆವೆಂದು ಜೀವ ಚಡಪಡಿಸುತ್ತದೆ.

ಓಹೋ ಅದೆಂಥಾ ದಿವ್ಯ ರಸಾನುಭವಗಳು, ಮೆಟ್ಟಿಲು ಏರುತ್ತಲೆ ಅವನ್ನೆಲ್ಲಾ ಆಸ್ವಾದಿಸಬೇಕು. ಕೊನೆಯ ಮೆಟ್ಟಿಲು ಏರಿದರೆ ಮುಳ್ಳಯ್ಯನ ಗುಡಿಯ ಬಲಭಾಗದಿಂದ ಮುಳ್ಳಯ್ಯನ ಗುಡಿಯೆಡೆಗೆ ಪ್ರವೇಶಿಸಬಹುದು. ಇಲ್ಲಿ ನಾವು 6317 ಅಡಿ ಎತ್ತರಕ್ಕೆ ಏರಿದ್ದೇವೆ ಎಂದು ಸೂಚಿಸಿದ ಫಲಕ ಪ್ರೀತಿಯಿಂದ ಸ್ವಾಗತಿಸುತ್ತದೆ.

ಮೊದಲು ಗರ್ಭಗುಡಿ ಮಾತ್ರವಿದ್ದ ಮುಳ್ಳಯ್ಯನ ಗುಡಿಗೀಗ ವಿಶಾಲವಾದ ಹಜಾರದ ಕಟ್ಟಡವಾಗಿದೆ. ಪಕ್ಕದಲ್ಲೆ ಹಗಲಿರುಳು ಮುಳ್ಳಯ್ಯರ ಜೊತೆಗೆ ಇರುವ, ಪ್ರವಾಸಿಗರ ಯೋಗಕ್ಷೇಮಗಳಿಗೆ ಸ್ಪಂದಿಸುವ ಅರ್ಚಕರ ಪುಟ್ಟ ನಿವಾಸ. ಅವರದೆಂಥಾ ಭಾಗ್ಯವೋ, ಸೌಭಾಗ್ಯವೋ, ಒಂದು ಬೆಂಕಿ ಕಡ್ಡಿಯೂ ದೊರೆಯಲಾರದ ಬೆಟ್ಟದ ನಡು ನೆತ್ತಿಯಲ್ಲಿ ಚಳಿ, ಮಳೆ, ಗಾಳಿ, ಬಿಸಿಲು ಒಂದನ್ನು ಲೆಕ್ಕಿಸದೇ ಮುಳ್ಳಯ್ಯನಿಗೆ ನಿತ್ಯವೂ ನಂದಾದೀಪ ಹಚ್ಚುತ್ತಿರುವ ಆ ಮಹಾನುಭಾವರ ಧೀಶಕ್ತಿಗೆ ಮನ ಮಣಿಯುತ್ತದೆ.

ಮುಳ್ಳಯ್ಯ ಮತ್ತು ಸೀತಾಳಯ್ಯ ಇಬ್ಬರೂ ಮಹಾನ್ ಯೋಗಿ ಸಾಧಕರು. ಇವರ ಹೆಸರಿನಲ್ಲಿ ಈ ರಮ್ಯ ತಾಣದಲ್ಲಿ ಗುಡಿ ಕಟ್ಟಿರುವ ನಮ್ಮ ಪೂರ್ವಜರು ಮಹಾನ್ ದಾರ್ಶನಿಕರೇ. ಮುಳ್ಳಯ್ಯನ ಶಿಖರದ ತುತ್ತ ತುದಿಯಲ್ಲಿ ಹಚ್ಚುವ ದೀಪ ಮೋಡವಿಲ್ಲದ ಇರುಳಿನಲ್ಲಿ ಚಿಕ್ಕಮಗಳೂರಿಗೆ ಆ ಹಿರಿಯರ ಒಲವಿನ ಬೆಚ್ಚನೆಯ ನೆನಪನ್ನು ಕಟ್ಟಿಕೊಡುತ್ತದೆ. ಈ ದೀಪ ಒಮ್ಮೊಮ್ಮೆ ಆಗಸದಿಂದ ಭುವಿಗಿಳಿದ ನಕ್ಷತ್ರದಂತೆ ಕಣ್ಣು ಮಿಟುಕಿಸಿ ನಕ್ಕರೆ, ಮತ್ತೊಮ್ಮೆ ಚಿಕ್ಕಮಗಳೂರಿನ ಕ್ಷೇಮದ ಕಾವಲುಗಾರನಂತೆ ರಾರಾಜಿಸುತ್ತದೆ.



ಭಾವುಕ ಕಣ್ಣುಗಳಿಗೆ ಗಿರಿಯ ಶಿಖರದ ತುತ್ತ ತುದಿಯ ಅಂಚಿನಲ್ಲಿ ಕಾಣುವ ಮನ ತಣಿಸುವ ಸೌಂದರ್ಯ, ಸ್ವರ್ಗದ ಅಸೀಮ ಸೀಮೆಯಿಂದ ಆಯಾಚಿತವಾಗಿ ಒದಗಿಬಂದ ಸರ್ವರಿಗೂ ಸಮಪಾಲು ಹಂಚುವ ಪ್ರಕೃತಿಯ ಅದ್ಭುತ ಐಶ್ವರ್ಯ.

ಮಳೆಗಾಲದಲ್ಲಿ ಒಂದು ರೀತಿಯ ಸೊಬಗು ಚಳಿಗಾಲದಲ್ಲೊಂದು ಭಾವದ ಬೆರಗು, ಬೇಸಿಗೆಯಲ್ಲಿ ಬರೀ ಆಹ್ಲಾದದ ಗುನುಗು, ಮುಂಜನೆಯ ಪರಿಯೇ ಬೇರೆ, ಮಧ್ಯಾಹ್ನದ ಮುಗಿಲೇ ಬೇರೆ, ಸಂಜೆಯ ಸುಖವೇ ಬೇರೆ! ಮಂಜು ಮೋಡವಿದ್ದರೆ ಒಂದು ಬಗೆಯ ಪುಳಕ, ಕಣ್ಮುಂದೆ ಹಾಲಿನ ಸಾಗರವೆ ಉಕ್ಕುಕ್ಕಿ ಹರಿಯುವ ಮೊರೆತ, ಮೋಡಗಳೊಳಗೆ ತೂರಿ ಏರಿ ಸವಾರಿ ಮಾಡಿಯೇ ಬಿಟ್ಟವೆನ್ನುವ ರೋಚಕ! ಹೊಂಬಿಸಿಲಿನ ಆಗಸದಲ್ಲಿ ಬೇರೆ ರೀತಿಯದ್ದೇ ಸರಸ, ದೂರದಲ್ಲಿ ಕಾಣುವ ಊರು, ಕೆರೆಗದ್ದೆ, ತೋಟಗಳು ಪ್ರಕೃತಿಯ ಆಟದ ಸಾಮಾನಿನಂತೆ ಭಾಸವಾಗುತ್ತವೆ. ಮುಗಿಲು ನೆಲದ ದಿವ್ಯ ಬಾಂಧವ್ಯದ ಆಸ್ವಾದದ ಸಹವಾಸ, ಶುಭ್ರ ಶುದ್ಧ ಗಾಳಿಯನ್ನು ಒಮ್ಮೆ ಎಳೆದು ಎದೆ ತುಂಬ ತುಂಬಿಕೊಂಡರೆ ಮತ್ತೇನು ಬೇಡವೆಂಬ ನಿರಾಳ ಶ್ವಾಸ.

ವೈಚಾರಿಕ ನೆಲೆಗೆ ಈ ಮಹೋನ್ನತ ಶಿಖರ ಒಟ್ಟುವ ಹರಿತ, ಮತೀಯ ವಿಚಾರಗಳು ಮಹತ್ವಪೂರ್ಣ. ಈ ಗಿರಿ ನೆತ್ತಿಯ ಮೇಲೆ ನಿಂತು ನೋಡಿದ ಪೂರ್ಣಚಂದ್ರ ತೇಜಸ್ವಿ" ಉತ್ತರ ಭಾರತಕ್ಕೆ ಹಿಮಾಲಯ ಹೇಗೆ ಪರಿಸರ ಸಮತೋಲನದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆಯೋ, ಹಾಗೆಯೇ ದಕ್ಷಿಣ ಭಾರತಕ್ಕೆ ಈ ಸಹ್ಯಾದ್ರಿ ಪರ್ವತಗಳು. ಮುಳ್ಳಯ್ಯನ ಗಿರಿಯ ಮೇಘಾಚ್ಛಾದಿತ ಶಿಖರದ ಮೇಲೆ ನಿಂತು ಎಡಕ್ಕೂ ಬಲಕ್ಕೂ ನೋಡಿದರೆ ಉತ್ತರದಲ್ಲಿ ಗುಜರಾತಿನವರೆಗೂ ದಕ್ಷಿಣದಲ್ಲಿ ಕನ್ಯಾಕುಮಾರಿಯವರೆಗೂ ಹರಡಿದ ಪಶ್ಚಿಮಘಟ್ಟಗಳೆಂಬ ಹೆಸರಿನ ಸಹ್ಯಾದ್ರಿಯ ನೋಟ ದಕ್ಕುವುದು" ಎನ್ನುತ್ತಾರೆ.

ಚಿಕ್ಕಮಗಳೂರಿನ ಪುಟ್ಟ ಮೂಲೆಯಲ್ಲೆಲ್ಲೋ ಕುಳಿತ ನಮಗೆ ಗುಜರಾತಿನಿಂದ ಹಿಡಿದು ಕನ್ಯಾಕುಮಾರಿಯವರೆಗೂ ಬಾಂಧವ್ಯವಿದೆ. ಹಾಗೆಯೇ ನಮ್ಮ ಮುಳ್ಳಯ್ಯನಗಿರಿಯ ಒಂದು ಮರಕ್ಕೆ ಬೀಳುವ ಕೊಡಲಿಯ ಪೆಟ್ಟಿಗೂ ಮೊಳಕಾಲ್ಮೂರಿನ ಜನ ನೀರಿಲ್ಲದೇ ಕಂಗೆಡುವುದಕ್ಕೂ ಒಳನಂಟು ಇದೆ.

ನಮ್ಮೀ ಮುಳ್ಳಯ್ಯನಗಿರಿ ವೇದಾ ಮತ್ತು ಆವತಿ ಈ ಎರಡು ಜೀವ ನದಿಗಳ ತವರು. ಇವು ಕಡೂರಿನ ಕಡೆಗೆ ಹರಿದು ವೇದಾವತಿಯಾಗಿ ಮುಂದುವರೆದರೆ ಸೀತಾಳ್ಯನಗಿರಿ ತಪ್ಪಲಿನಲ್ಲಿ ಹುಟ್ಟುವ ಯಗಚಿನದಿ ಬೇಲೂರು ಕಡೆಗೆ ಹರಿದು ಬೇಲೂರು ಬಳಿಯಲ್ಲೇ ಅಣೆಕಟ್ಟು ಕಟ್ಟಿಸಿಕೊಂಡು ಮುಂದೆ ಹೇಮಾವತಿಯ ಮಡಿಲಿಗೆ ಸೇರಿ ಹೋಗುತ್ತಾಳೆ.

ಹೇಳಿದಷ್ಟೂ ಮುಗಿಯಲಾರದ ಮುಳ್ಳಯ್ಯನಗಿರಯ ಸೌಂದರ್ಯ ಲಹರಿಯ ಭಾವ ಸಂಭ್ರಮಕ್ಕೆ ಡಿ.ವಿ.ಜಿ. ಅವರ ಶಿಖರಪ್ರಾಯ ನುಡಿಯಿಂದ ತಾತ್ಕಾಲಿಕ ವಿರಾಮ ಇಡೋಣ.

**"ಕುಲಪರ್ವತ ಹೃದಯಾಂಶವೊ**
**ಇಳೆಯಾ ಕನಲಿಕೆಯ ಬುದ್ಬುದೋದ್ರೇಕಮೊ ಮೇ**
**ಣೊಲವಿನ ಪುಲಮೊ ಎನ್ನಿಪ**
**ಪೊಲು ಬೆರಾಗಿಸುವುದಿತ್ತ ಚಂದ್ರದ್ರೋಣಂ"**



Downloaded From: www.kpscvaani.com



# ಕೊರೊನಾ ಸಂಕಷ್ಟದಲ್ಲೂ ಬಂಪರ್ ಪಪಾಯ ಬೆಳೆದ ಕೃಷಿಕ

ಗವಿಸಿದ್ಧಪ್ಪ ಹೊಸಮನಿ

ರಾಜ್ಯದ ಗಡಿ ಜಿಲ್ಲೆ ಬೀದರ್‌ನ ರೈತರೊಬ್ಬರು ತೋಟಗಾರಿಕೆ ಇಲಾಖೆಯಿಂದ ಹನಿ ನೀರಾವರಿ ಅಳವಡಿಸಿಕೊಂಡು ಹಾಗೂ ನರೇಗಾ ಯೋಜನೆ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ಪಪಾಯ ಬೆಳೆದು, ಬಂಪರ್ ಇಳುವರಿಯನ್ನು ಪಡೆದಿದ್ದಾರೆ.

ರಾಜ್ಯದಲ್ಲಿ ಮಲೆನಾಡು ಹೊರತುಪಡಿಸಿದರೆ ಬಹುತೇಕ ಎಲ್ಲ ಜಿಲ್ಲೆಗಳಲ್ಲೂ ಪಪಾಯ ಬೆಳೆಯಲಾಗುತ್ತದೆ. ಅತ್ಯಂತ ವಿಶಿಷ್ಟವಾದ ಲ್ಯಾಟರೈಟ್ ಮಣ್ಣಿನ ನೆಲವಾದ ಬೀದರ್ ಜಿಲ್ಲೆಯಲ್ಲೂ ರೈತರು ಪಪಾಯ ಬೆಳೆಯುತ್ತಿದ್ದಾರೆ. ಅಂತೆಯೇ ಬೀದರ್ ತಾಲೂಕಿನ ಕಂಗನಕೋಟ ಗ್ರಾಮದ ರೈತರಾದ ಶರಣಪ್ಪ ಸಂಗ್ರಾಮಪ್ಪ ಅವರು ಮಹಾತ್ಮ ಗಾಂಧಿ ಉದ್ಯೋಗಖಾತ್ರಿ ಯೋಜನೆಯಡಿ ತೋಟಗಾರಿಕೆಯ ಹನಿ ನೀರಾವರಿ ಅಳವಡಿಸಿಕೊಂಡು ಬಂಪರ್ ಪಪಾಯ ಬೆಳೆಯುವ ಮೂಲಕ ಸುತ್ತಮುತ್ತಲಿನ ರೈತರಿಗೆ ಮಾದರಿಯಾಗಿದ್ದಾರೆ.

ರೈತ ಶರಣಪ್ಪ ಅವರು 2019ರಿಂದ ಪಪಾಯ ಕೃಷಿಯಲ್ಲಿ ತೊಡಗಿದ್ದಾರೆ. ತಜ್ಞರ ಸಲಹೆಯಂತೆ ಕೊಟ್ಟಿಗೆ ಗೊಬ್ಬರ ಜೊತೆಗೆ ಜೈವಿಕ ಗೊಬ್ಬರಗಳನ್ನು ಬೆರೆಸಿ 6 x 6 ಅಡಿ ಅಂತರದಲ್ಲಿ ಪಪಾಯ ಸಸಿಯನ್ನು ನಾಟಿ ಮಾಡಿದ್ದು, ಉತ್ತಮ ನೀರು ಹಾಗೂ ಪೋಷಕಾಂಶಗಳ ನಿರ್ವಹಣೆಯನ್ನೂ ಮಾಡಿದ್ದಾರೆ. ತೋಟಗಾರಿಕಾ ಇಲಾಖೆಯ ಅಧಿಕಾರಿಗಳ ಸಲಹೆಯಂತೆ ವೈಜ್ಞಾನಿಕ ಬೆಳೆ ಪದ್ಧತಿ ವಿಧಾನ ಅನುಸರಿಸಿ ಪಪಾಯ ಕೃಷಿಯನ್ನು ಮಾಡಿರುವುದು ವಿಶೇಷ.

ಈ ಮೊದಲು ನಾನು ಕಬ್ಬು ಬೆಳೆಯುತ್ತಿದ್ದೆ. ಇದೀಗ ಕಳೆದ ಒಂದು ವರ್ಷದಿಂದ ಒಂದೂವರೆ ಎಕರೆ ಹೊಲದಲ್ಲಿ ತೋಟಗಾರಿಕಾ ಇಲಾಖಾ ಅಧಿಕಾರಿಗಳ ಸಲಹೆಯಂತೆ ಪಪಾಯ ಬೆಳೆಯುತ್ತಿರುವೆ ಎಂದು ತಿಳಿಸುವ ಶರಣಪ್ಪ ಅವರು, ಅದೇ ಜಮೀನಿನಲ್ಲಿ ಪಪಾಯ ಜೊತೆಗೆ ಹಸಿಶುಂಠಿಯನ್ನು ಕೂಡ ಬೆಳೆಯುತ್ತಿರುವುದು ಮತ್ತೊಂದು ವಿಶೇಷತೆಯಾಗಿದೆ.

ಕಳೆದೊಂದು ವರ್ಷದ ಅವಧಿಯಲ್ಲಿ ರೋಗ ಮತ್ತು ಕೀಟಗಳನ್ನು ಕೂಡ ಯಶಸ್ವಿಯಾಗಿ ಹತೋಟಿ ಮಾಡಿದ್ದಾರೆ. ಇದೀಗ ಕಟಾವಿಗೆ ಬಂದಿರುವ ಪಪಾಯ ಕಾಯಿಗಳು ಪ್ರತಿ ಗಿಡಕ್ಕೆ 50 ಕೆ.ಜಿ.ಗೂ ಹೆಚ್ಚಿನ ತೂಕ ಹೊಂದಿದ್ದು, ಟನ್ ವೊಂದಕ್ಕೆ 10,000 ರೂ. ನಂತೆ ಈಗಾಗಲೆ 12 ಟನ್‌ಗಳಷ್ಟು ಪಪಾಯ ಮಾರಾಟ ಮಾಡಿದ್ದಾರೆ.

ತೋಟಗಾರಿಕೆ ಇಲಾಖೆಯ ಮಾರ್ಗದರ್ಶನದಂತೆ ಬೆಳೆದ ಪಪಾಯ ಉತ್ತಮ ಫಸಲು ನೀಡಿದೆ. ಉತ್ತಮ ಬೆಲೆಯಿಂದ ನಮ್ಮ ಆರ್ಥಿಕ ಸ್ಥಿತಿ ಸುಧಾರಿಸುತ್ತಿದೆ. 2019-20ನೇ ಸಾಲಿನಲ್ಲಿ ಮಹಾತ್ಮಗಾಂಧಿ ಉದ್ಯೋಗಖಾತ್ರಿ ಯೋಜನೆಯಡಿಯಲ್ಲಿ ಪಪಾಯ ನಾಟಿ ಮಾಡುವಂತೆ ಸಲಹೆ ಮಾಡಿದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಶಿವಪುತ್ರ ಶಂಭು ಅವರು ನೀಡಿದ ಮಾರ್ಗದರ್ಶನ ಮರೆಯಲಾರೆ ಎಂದು ತಿಳಿಸುತ್ತಾರೆ ರೈತ ಶರಣಪ್ಪ. ಈ ಮಾದರಿ ರೈತನನ್ನು ಅವರ ಮೊಬೈಲ್ ಸಂಖ್ಯೆ 7996656084 ಮೂಲಕ ಸಂಪರ್ಕಿಸಬಹುದು.

**ಜಿಪಂ ಸಿಇಓ ಮೆಚ್ಚುಗೆ:** ಕೆಲವು ದಿನಗಳ ಹಿಂದೆ ಈ ರೈತನ ತೋಟಕ್ಕೆ ಭೇಟಿ ನೀಡಿದ ಬೀದರ್ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗ್ಯಾನೇಂದ್ರ ಕುಮಾರ ಗಂಗವಾರ ಅವರು ರೈತ ಶರಣಪ್ಪ ಬೆಳೆದಿರುವ ಉತ್ತಮವಾದ ಫಸಲು ಕಂಡು ಮೆಚ್ಚುಗೆ ವ್ಯಕ್ತಪಡಿಸಿದ್ದರು.

ನರೇಗಾ ಯೋಜನೆಯಡಿಯಲ್ಲಿ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ ಒಗ್ಗೂಡಿಸಿ ಹನಿ ನೀರಾವರಿ ಅಳವಡಿಸಿಕೊಂಡು ಉತ್ತಮ ಪಪಾಯ ಫಸಲು ಬೆಳೆದ ರೈತ ಶರಣಪ್ಪನಂತೆ ಈ ಭಾಗದ ಅನೇಕ ರೈತರು ಪಪಾಯ ಅಷ್ಟೇ ಅಲ್ಲದೇ ನುಗ್ಗೆ, ಸೀಬೆ ಮುಂತಾದ ತೋಟಗಾರಿಕೆ ಬೆಳೆಗಳನ್ನು ಬೆಳೆದು ಸ್ವಾವಲಂಬನೆ ತೋಟಗಾರಿಕೆಯತ್ತ ಹೆಜ್ಜೆ ಇಡುತ್ತಿದ್ದಾರೆ ಎಂಬುದು ತೋಟಗಾರಿಕಾ ಇಲಾಖೆಯ ಉಪ ನಿರ್ದೇಶಕರಾದ ಮಲ್ಲಿಕಾರ್ಜುನ ಬಾವುಗೆ ಅವರ ಅಭಿಪ್ರಾಯವಾಗಿದೆ.

ರೈತರು ಅವೈಜ್ಞಾನಿಕವಾಗಿ ಬೆಳೆಗಳನ್ನು ಬೆಳೆದು ಆರ್ಥಿಕ ನಷ್ಟಕ್ಕೆ ಗುರಿಯಾಗುವ ಬದಲು ಶರಣಪ್ಪ ಅವರಂತೆ ಕೃಷಿ ಇಲಾಖೆಯ ಅಧಿಕಾರಿಗಳಿಂದ ಸಲಹೆ ಸೂಚನೆಗಳನ್ನು ಪಡೆದುಕೊಂಡು ವ್ಯವಸಾಯದಲ್ಲಿ ಅಳವಡಿಸಿಕೊಳ್ಳುವ ಮೂಲಕ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ■



Downloaded From: www.kpscvaani.com

## ರಾಷ್ಟ್ರೀಯ

# ಏಕತಾ ಮೂರ್ತಿಗೆ ನಮನ

ಡಾ.ಕೆ.ಎನ್.ಕವನ



**ಪ್ರತಿ ವರ್ಷ ಅಕ್ಟೋಬರ್ 31 ರಂದು 'ರಾಷ್ಟ್ರೀಯ ಏಕತಾ ದಿವಸ' ಅಥವಾ 'The National Unity Day' ಅನ್ನು ಆಚರಿಸಲಾಗುತ್ತದೆ. ಭಾರತ ಕಂಡ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ, ಮಾಜಿ ಉಪ ಪ್ರಧಾನಿ ಸರ್ದಾರ್ ವಲ್ಲಭಾಯಿ ಪಟೇಲ್ ಅವರ ಹುಟ್ಟುಹಬ್ಬವನ್ನು ಏಕತಾ ದಿವಸವಾಗಿ ಆಚರಿಸಲಾಗುತ್ತದೆ.**

**ಭಾ**ರತಕ್ಕೆ ಹಂಚಿಕೆಯಾದ ಬ್ರಿಟಿಷ್ ವಸಾಹತು ಶಾಹಿ ಪ್ರಾಂತ್ಯಗಳನ್ನು ಹೊಸದಾಗಿ ಸ್ವಾತಂತ್ರ್ಯ ಹೊಂದಿದ ರಾಷ್ಟ್ರವನ್ನಾಗಿ ಯಶಸ್ವಿಯಾಗಿ ಏಕೀಕರಿಸಿ ಸಂಯುಕ್ತ ಭಾರತವನ್ನು ರೂಪಿಸುವ ಕಾರ್ಯವನ್ನು ಮುನ್ನಡೆಸಿದರು. ಅವರು ಬ್ರಿಟೀಷ್ ಆಳ್ವಿಕೆಯಿಂದ ಇದ್ದ ಸುಮಾರು 565 ಸಂಸ್ಥಾನಗಳನ್ನು 1947ರ ಇಂಡಿಯನ್ ಇಂಡಿಪೆಂಡೆನ್ಸ್ ಆಕ್ಟ್ ಅಡಿ ಬಿಡಿಗಡೆ ಮಾಡಿಸಿದ್ದರು. ಅದ್ದರಿಂದ ಇವರನ್ನು "ಭಾರತ ನಾಗರಿಕ ಸೇವಕರ ಪೋಷಕ ಸಂತ", "ಭಾರತ ಏಕೀಕರಣ ನೇತಾರ", "ಉಕ್ಕಿನ ಮನುಷ್ಯ" ಅಂತಲೂ ಜನ ನೆನಪಿಸಿಕೊಳ್ಳುತ್ತಾರೆ.

1875ರಲ್ಲಿ ಗುಜರಾತಿನ ನಾದಿಯಾದಿನಲ್ಲಿ ಜನಿಸಿದ ಸರ್ದಾರ್ ವಲ್ಲಭಾಯಿ ಪಟೇಲರು ರಾಷ್ಟ್ರ ಕಂಡ ಶ್ರೇಷ್ಠ ರಾಜಕಾರಣಿಗಳಲ್ಲಿ ಪ್ರಮುಖರು. ಜವಾಹರ್ ಲಾಲ್ ನೆಹರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಇವರು ದೇಶದ ಪ್ರಥಮ ಉಪ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದರು. ಅಲ್ಲದೆ ಭಾರತದ ಮೊದಲ ಗೃಹ ಸಚಿವರಾಗಿಯೂ ಹೆಸರು ಪಡೆದರು. ಇವರು ನವಭಾರತದ ಏಕೀಕರಣದ ನಿರ್ಮಾತೃ ಎಂದರೆ ತಪ್ಪಾಗದು.

Downloaded From: www.kpscvaani.com



ವಕೀಲರಾಗಿ ವೃತ್ತಿ ಆರಂಭಿಸಿ ನಂತರ ವಿದೇಶದಲ್ಲಿ ವ್ಯಾಸಂಗ ಮಾಡಿ ತಮ್ಮ ಸ್ವಂತ ಪರಿಶ್ರಮದಿಂದ ಅವರು ಬೆಳೆದು ಬಂದ ರೀತಿ ಎಲ್ಲರಿಗೂ ಮಾದರಿಯೆನಿಸುತ್ತದೆ. ಬ್ರಿಟೀಷರು ತಮ್ಮ ಮೋಸದ ತೆರಿಗೆಯಿಂದ ವಶಪಡಿಸಿಕೊಳ್ಳಲಾದ ಕೃಷಿಕರ ಭೂಮಿಯನ್ನು ಚಳುವಳಿಯಿಂದ ಕೃಷಿಕರಿಗೆ ಮರಳಿಸುವಲ್ಲಿ ಯಶಸ್ವಿಯಾದರು. ಇದರಿಂದ ಅವರಿಗೆ 'ಸರ್ದಾರ್' ಅಂದರೆ ನಾಯಕ ಎಂಬ ಬಿರುದು ಬಂದಿತು. ಮಹಾತ್ಮಾ ಗಾಂಧಿಯವರ ಜೊತೆಗೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದ ಇವರು  ಬ್ರಿಟಿಷರ ವಿರುದ್ಧ ಅಸಹಕಾರ ಚಳುವಳಿ, ಉಪ್ಪಿನ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಮುಂತಾದ ಚಳುವಳಿಯಲ್ಲಿಯೂ ಪ್ರಮುಖ ಪಾತ್ರ ವಹಿಸಿದ್ದರು. ಇವರಿಗೆ 1991ರಲ್ಲಿ ಮರಣೋತ್ತರವಾಗಿ ಭಾರತದ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ 'ಭಾರತ ರತ್ನ' ನೀಡಲಾಯಿತು.

2014 ರಲ್ಲಿ ಕೇಂದ್ರ ಸರ್ಕಾರ ಎಲ್ಲಾ ಶಾಲಾ ಕಾಲೇಜು, ಸರ್ಕಾರಿ ಕಚೇರಿಗಳಲ್ಲಿ ಏಕತಾ ದಿನವನ್ನು ಆಚರಿಸಿ, ಏಕತಾ ಪ್ರತಿಜ್ಞಾ ವಿಧಿ ಸ್ವೀಕರಿಸುವಂತೆ ಆದೇಶಿತು. ಇದರಲ್ಲಿ ದೇಶದ ಸಮಸ್ತರು ರಾಷ್ಟ್ರದ ಸ್ವಾತಂತ್ರ್ಯ ಕಾಪಾಡಲು, ರಕ್ಷಣೆ ಮಾಡಲು ತಮ್ಮ ತನು, ಮನ, ಧನದಿಂದ ನಿಷ್ಠರಾಗಿ, ಎಂದಿಗೂ ಹಿಂಸೆ, ಭಯೋತ್ಪಾದನೆಯ ಪ್ರಯೋಗ ಮಾಡದೆ ಮಾನವ ಜೀವ ಹಾಗೂ ಮೌಲ್ಯಗಳನ್ನು ನಾಶಪಡಿಸುವ ವಿನಾಶಕಾರಿ ಶಕ್ತಿಯ ವಿರುದ್ಧ ಹೋರಾಡುವುದಾಗಿ ಪ್ರತಿಜ್ಞಾ ವಿಧಿ ಸ್ವೀಕರಿಸುವರು.

**ರಾಜರಿಂದ ಆಳಲ್ಪಟಿದ್ದ ಭಾರತದ ಪುಟ್ಟ ಪುಟ್ಟ ರಾಜ್ಯಗಳನ್ನು ಒಂದು ಗೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಕಾರಣ ಇವರನ್ನು ಉಕ್ಕಿನ ಮನುಷ್ಯ ಎಂದು ಕರೆಯಲಾಯಿತು.**

### ರಾಷ್ಟ್ರೀಯ ಏಕತಾ ಮೂರ್ತಿ

ಗುಜರಾತಿನ ರಾಜ್ಪಿಪ್ಲಾ ಬಳಿಯ ನರ್ಮದಾ ನದಿ ದಂಡೆಯ ಮೇಲಿನ ಕೇವದಿಯ ಕಾಲೋನಿಯಲ್ಲಿ ಸರ್ದಾರ್ ವಲ್ಲಭಾಯಿ ಪಟೇಲರ 597 ಅಡಿ ಎತ್ತರದ **'ಏಕತೆಯ ಮೂರ್ತಿ'** ಅಕ್ಟೋಬರ್ 31, 2018 ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಂದ ಲೋಕಾರ್ಪಣೆಗೊಂಡಿತು. ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾದ ಖ್ಯಾತ ಶಿಲ್ಪಿ ರಾಮ್.ವಿ.ಸುತಾರ ಅವರು ವಿನ್ಯಾಸಗೊಳಿಸಿರುವ ಈ ಮೂರ್ತಿಯು ವಿಶ್ವದ ಅತೀ ಎತ್ತರದ ಮೂರ್ತಿ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಪ್ರತಿನಿತ್ಯ ನೂರಾರು ಪ್ರವಾಸಿಗರು ಇಲ್ಲಿಗೆ ಭೇಟಿ ನೀಡುತ್ತಾರಲ್ಲದೆ ಇದನ್ನು ಪ್ರವಾಸಿ ತಾಣವಾಗಿ ಸಹ ಅಭಿವೃದ್ಧಿ ಪಡಿಸಲಾಗಿದೆ.

ರಾಷ್ಟ್ರದ ಏಕತೆ, ಭದ್ರತೆ, ಸೌಹಾರ್ದತೆಯನ್ನು ಎತ್ತಿಹಿಡಿಯುವ ಈ  ರಾಷ್ಟ್ರೀಯ ಏಕತಾ ದಿವಸದ ಆಚರಣೆಯಲ್ಲಿ ನಾವೆಲ್ಲರೂ ಭಾಗಿಯಾಗಿ, ದೇಶದ ರಕ್ಷಣೆಯಲ್ಲಿ ತೊಡುಗುವುದಾಗಿ ಪ್ರತಿಜ್ಞಾ ವಿಧಿ ಸ್ವೀಕರಿಸುವ ಮೂಲಕ ದೇಶದ ರಕ್ಷಣೆಯ ಕಾರ್ಯದಲ್ಲಿ ತೊಡಗೋಣ.



Downloaded From: www.kpscvaani.com



# ಹಸಿದವರ ಹೊಟ್ಟೆ ತಣಿಸುವ ಕಾರ್ಯದಲ್ಲಿ ನಿರತರಾಗಿರುವ ಯುವರಾಜ

ಉಷಾ ವಿಶ್ವನಾಥ್



ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಎಂದು ಆ ಕಾಲದಲ್ಲೇ ದಾಸರು ಹೇಳಿದ್ದಾರೆ. ಭೂಮಿಯ ಮೇಲೆ ಜೀವಿಸುವ ಮನುಷ್ಯನಿರಲಿ, ಪ್ರಾಣಿ, ಪಕ್ಷಿ, ಜೀವಜಂತುಗಳು ಆಹಾರವಿಲ್ಲದೆ ಬದುಕಲಾರವು ಹಾಗಾಗಿ ಎಲ್ಲರಿಗೂ ಬದುಕಲು ಆಹಾರ ಪ್ರಮುಖವಾಗುತ್ತದೆ.

ನಮ್ಮ ಹಿರಿಯರು ಅನ್ನಕ್ಕೆ ಎಷ್ಟು ಗೌರವ ಕೊಡುತ್ತಿದ್ದರೆಂದರೆ, ಮೊದಲು ಅನ್ನವನ್ನು ಕಣ್ಣಿಗೆ ಒತ್ತಿಕೊಂಡು ಅನ್ನಪೂರ್ಣೇಶ್ವರಿ ದೇವಿಯನ್ನು ಮನದಲ್ಲಿ ನೆನೆದು ಒಂದು ತುತ್ತು ಅನ್ನವನ್ನು ಭೂದೇವಿಗೆ ಅರ್ಪಿಸಿದ ನಂತರವೇ ಊಟ ಮಾಡುತ್ತಿದ್ದರು. ಭೂದೇವಿಗೆ ಅನ್ನ ಅರ್ಪಿಸುತಿದ್ದುದರ ಉದ್ದೇಶ, ಪ್ರಾಣಿ ಪಕ್ಷಿಗಳಿಗೆ ಆಹಾರವನ್ನು ಒದಗಿಸುವುದಾಗಿತ್ತು. ಅಲ್ಲದೆ ಅನ್ನವನ್ನು ದೇವರೆಂದು ಭಾವಿಸುತ್ತಿದ್ದರಿಂದ ಅನ್ನವನ್ನು ವ್ಯರ್ಥ ಮಾಡುತ್ತಿರಲಿಲ್ಲ. ಆದರೆ ಇಂದಿನ ಪೀಳಿಗೆಯ ಜನರು ಆಹಾರದ ಪ್ರಾಮುಖ್ಯತೆಯನ್ನೇ ಮರೆತಿರುವಂತೆ ಕಾಣುತ್ತದೆ. ಹಾಗಾಗಿ ಆಹಾರವನ್ನು ವ್ಯರ್ಥ ಮಾಡುತ್ತಾರೆ.

ಯಾವುದೇ ದೇಶ, ಎಷ್ಟೇ ಅಭಿವೃದ್ಧಿ ಹೊಂದಿದ್ದರೂ ಕೂಡ ತಮ್ಮ ಎಲ್ಲಾ ಪ್ರಜೆಗಳಿಗೆ ಹೊಟೆ ತುಂಬಾ ಉಟ ಕೊಡಲು ಸಾಧ್ಯವಾಗುತ್ತಿಲ್ಲ. ಒಂದು ಅಧ್ಯಯನದ ಪ್ರಕಾರ, ವಿಶ್ವದಲ್ಲಿ ಪ್ರತಿ ಹತ್ತು ಸೆಕೆಂಡಿಗೆ ಒಬ್ಬ ವ್ಯಕ್ತಿಯು ಹಸಿವೆಯಿಂದ ಮರಣ ಹೊಂದುತ್ತಿದ್ದಾರೆ. ಅದರಲ್ಲೂ ಹಸಿವಿನಿಂದ ಸಾಯುವವರಲ್ಲಿ ಮಕ್ಕಳೇ ಹೆಚ್ಚು ಎಂಬುದು ಆಘಾತಕಾರಿ ವಿಷಯವಾಗಿದೆ.

1945 ಅಕ್ಟೋಬರ್ 16 ರಲ್ಲಿ ವಿಶ್ವಸಂಸ್ಥೆಯಲ್ಲಿ ಆಹಾರ ಮತ್ತು ಕೃಷಿ ಸಂಘಟನೆಯನ್ನು ಸ್ಥಾಪನೆ ಮಾಡಲಾಯಿತು. 1979 ರಲ್ಲಿ ಹಂಗೇರಿ ದೇಶದಲ್ಲಿ ಜರುಗಿದ 20 ನೇ ವಿಶ್ವ ಆಹಾರ ಮತ್ತು ಕೃಷಿ ಸಂಘಟನೆಯ 20 ನೇ ಸಾಮಾನ್ಯ ಸಮ್ಮೇಳನದಲ್ಲಿ ನಿಯೋಗದವರ ಒತ್ತಾಸೆಯ ಮೇರೆಗೆ ಅಕ್ಟೋಬರ್ 10 ರ ದಿನವನ್ನು ಬಡತನ ಮತ್ತು ಹಸಿವನ್ನು ನೀಗಿಸಲು ಜಾಗೃತಿಯನ್ನು ಮೂಡಿಸುವ ಮಹೋದ್ದೇಶದಿಂದ ವಿಶ್ವ ಆಹಾರ ದಿನವನ್ನಾಗಿ ಆಚರಿಸಲು ತೀರ್ಮಾನಿಸಲಾಯಿತು. 2030 ರ ಅಂತ್ಯಕ್ಕೆ ವಿಶ್ವವನ್ನು ಹಸಿವು ಮುಕ್ತ ವಿಶ್ವವನ್ನಾಗಿ ಮಾಡಬೇಕೆಂಬುದು ವಿಶ್ವಸಂಸ್ಥೆಯ ಉದ್ದೇಶವಾಗಿದೆ.



Downloaded From: www.kpscvaani.com




**ಕೊರೊನಾ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾರಂಭಗಳು ನಡೆಯುತ್ತಿಲ್ಲ. ನಡೆದರೂ ಸೀಮಿತಗೊಳಪಟ್ಟು ನಡೆಯುತ್ತಿರುವುದರಿಂದ ಇತ್ತೀಚಿಗೆ ಆಹಾರ ನೀಡುವವರ ಸಂಖ್ಯೆ ಕೂಡ ಕ್ಷೀಣಿಸಿದೆ. ಹಾಗಾಗಿ ನನ್ನ ಸ್ನೇಹಿತ ಬಳಗದವರು ಹಸಿದವರಿಗೆ ಆಹಾರವನ್ನು ನೀಡುವ ಸಲುವಾಗಿ ಅಡುಗೆ ಮಾಡಿಸಿ ಕೊಡುತ್ತಿದ್ದಾರೆ.**

**–ಯುವರಾಜ**

ಹಾಗಾಗಿ ಅಕ್ಟೋಬರ್ 16 ರಂದು ವಿಶ್ವ ಆಹಾರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಅಂದು ಸಂಘಸಂಸ್ಥೆಗಳು, ಎನ್.ಜಿ.ಓಗಳು ಆಹಾರವನ್ನು ಅನಗತ್ಯವಾಗಿ ವ್ಯರ್ಥ ಮಾಡದಂತೆ ಮತ್ತು ಆಹಾರದ ಪ್ರಾಮುಖ್ಯತೆಗಳನ್ನು ಸಾರ್ವಜನಿಕರಿಗೆ ಮನದಟ್ಟು ಮಾಡಿಕೊಡುವ ಸಲುವಾಗಿ ಜಾಗೃತಿ ಅಭಿಯಾನಗಳನ್ನು ನಡೆಸುತ್ತವೆ.

ನಾವು, ನಮ್ಮ ಸ್ನೇಹಿತರು, ಬಂಧುಗಳ ಮದುವೆ ಮತ್ತಿತರ ಸಮಾರಂಭದಲ್ಲಿ ಪಾಲ್ಗೊಂಡಿದ್ದಾಗ ಹಾಕಿಸಿಕೊಂಡ ಊಟವನ್ನು ಹಾಗೆಯೇ ಎಲೆಯ ಮೇಲೆ ಬಿಟ್ಟು ವ್ಯರ್ಥ ಮಾಡುವವರನ್ನು ನೋಡಿ ಮನಸ್ಸಿನಲ್ಲಿಯೇ ಯಾಕೆ ಜನರಿಗೆ ಇನ್ನು ಬುದ್ಧಿ ಬಂದಿಲ್ಲ. ಎಷ್ಟು ಬೇಕೋ ಅಷ್ಟು ಹಾಕಿಸಿಕೊಳ್ಳಬಾರದಾ... ಎಂದು ಕೊಳ್ಳುತ್ತೇವೆ. ಸಮಾರಂಭ ಮುಗಿದ ಮೇಲೆ ಉಳಿದು ಹೋಗುವ ಆಹಾರನ್ನು ಏನಪ್ಪಾ ಮಾಡುವುದು, ನಮ್ಮ ಊರಾಗಿದ್ದರೆ ಅಕ್ಕಪಕ್ಕದ ಮನೆಯವರಿಗೆಲ್ಲಾ ಹಂಚಬಹುದಿತ್ತು. ಬೆಂಗಳೂರಿನಲ್ಲಿ ಅಕ್ಕಪಕ್ಕದ ನಿವಾಸಿಗಳು ಅಪರಿಚಿತರಂತೆ ಇರುವಾಗ, ಉಳಿದ ಆಹಾರ ಏನು ಮಾಡುವುದು ಎಂದು ಚಿಂತೆ ಕಾಡುತ್ತದೆ.

ಆದರೆ ಇನ್ನು ಮುಂದೆ ಬೆಂಗಳೂರಿನ ನಿವಾಸಿಗಳು ಆ ರೀತಿ ಮಾಡುವ ಪ್ರಮೇಯ ಬರುವುದಿಲ್ಲ. ಕಾರಣ ಉಳಿದ ಆಹಾರನ್ನು ಪಡೆದುಕೊಂಡು ಹಸಿದವರ ಹೊಟ್ಟೆ ತುಂಬಿಸಲು ವ್ಯಕ್ತಿಯೊಬ್ಬರು ಟೊಂಕ ಕಟ್ಟಿ ಸದಾ ಸಿದ್ಧರಾಗಿ ನಿಂತಿದ್ದಾರೆ. ಆತನೆ ಚಾಮರಾಜಪೇಟೆಯ ನಿವಾಸಿಯಾದ ಯುವರಾಜ. ಈತ ಕಳೆದ ಮೂರ್‍ನಾಲ್ಕು ವರ್ಷದಿಂದ ಸಾರ್ವಜನಿಕರಲ್ಲಿ ಆಹಾರವನ್ನು ವ್ಯರ್ಥ ಮಾಡದಂತೆ ಜಾಗೃತಿ ಅಭಿಯಾನ ನಡೆಸುತ್ತಿದ್ದಾರೆ. ಅಲ್ಲದೆ ಚಾಮರಾಜಪೇಟೆಯ ಸುತ್ತ ಮುತ್ತಲಿನ ಹಲವಾರು ಕಲ್ಯಾಣಮಂಟಪಗಳಲ್ಲಿ ಆಹಾರ ವ್ಯರ್ಥ ಮಾಡದಂತೆ ಸೂಚನಾ ಫಲಕಗಳನ್ನು ಹಾಕಿಸಿದ್ದಾರೆ.

ಲಯನ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯ ಅಧ್ಯಕ್ಷನಾಗಿರುವ ಯುವರಾಜ ಬಿ.ಕಾಂ. ಪದವೀಧರರು. ಅವರು ಕಲ್ಯಾಣಮಂಟಪಗಳಲ್ಲಿ ಹಾಗೂ ಇತರೆ ಸಮಾರಂಭಗಳಲ್ಲಿ ಉಳಿದು ಹೋಗುವ ಆಹಾರನ್ನು ತೆಗೆದುಕೊಂಡು ಹೋಗಿ ರೈಲ್ವೇ ನಿಲ್ದಾಣ, ಮೆಜೆಸ್ಟಿಕ್ ಮುಂತಾದ ಸ್ಥಳಗಳಲ್ಲಿ ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲದೆ ಬೀದಿ ಬದಿಯಲ್ಲಿ ವಾಸಿಸುವ ಹಸಿದವರಿಗೆ ಬಾಳೆ ಎಲೆ ನೀಡಿ ಆಹಾರನ್ನು ಬಡಿಸಿ ಬರುತ್ತಾರೆ. ಅವರ ಈ ಕೆಲಸಕ್ಕೆ ಸಮಾನ ಮನಸ್ಸಿನ ಸ್ನೇಹಿತರು ಬೆಂಬಲ ನೀಡುತ್ತಿದ್ದಾರೆ.

ಅನ್ನದ ಹಿಂದೆ ರೈತನ ಶ್ರಮವಿದೆ ಎಂದು ಹೇಳುವ ಯುವರಾಜ ಆಹಾರವನ್ನು ವ್ಯರ್ಥ ಮಾಡುವ ಹಕ್ಕು ಯಾರಿಗೂ ಇಲ್ಲ ಎನ್ನುತ್ತಾರೆ. ಮೂರು ವರ್ಷಗಳ ಹಿಂದೆ ಮಡಿಕೇರಿಯ ಕೃಷಿ ನಿರ್ದೇಶಕರ ಕಚೇರಿಗೆ ಭೇಟಿ ನೀಡಿದಾಗ ಆ ಕಚೇರಿಯ ಸೂಚನಾ ಫಲಕದಲ್ಲಿ ಆಹಾರ ವ್ಯರ್ಥ ಮಾಡದಂತೆ ಹಾಕಲಾಗಿದ್ದ ಘೋಷಣೆಯ ಕರಪತ್ರವನ್ನು ಓದಿದ ನನಗೆ ವ್ಯರ್ಥವಾಗುವ ಆಹಾರವನ್ನು ಏನಾದರೂ ಮಾಡಬೇಕೆಂದು ಅನಿಸಿದ ಫಲಶೃತಿಯೇ ನಾನು ಈ ಕೆಲಸ ಮಾಡಲು ಸ್ಫೂರ್ತಿಯಾಯಿತು ಎಂದು ಹೇಳುತ್ತಾರೆ.

ಈ ಅಭಿಯಾನವನ್ನು ಕೈಗೊಂಡ ಹೊಸತರಲ್ಲಿ ಇವರಿಗೆ ಉಳಿದಿರುವ ಆಹಾರನ್ನು ಪಡೆಯುವಂತೆ ತಿಂಗಳಿಗೆ ಒಂದು ಅಥವಾ ಎರಡು ದೂರವಾಣಿ ಕರೆಗಳು ಬರುತ್ತಿದ್ದವು. ಆದರೆ ಈಗ ಅವರಿಗೆ ಬೆಂಗಳೂರಿನ ವಿವಿಧ ಭಾಗಗಳಿಂದ ವಾರಕ್ಕೆ ನಾಲ್ಕೈದು ಕರೆಗಳು ಬರಲಾರಂಭಿಸಿದೆಯಂತೆ. ಇವರ ಈ ಸೇವೆಗೆ ಸರ್ಕಾರ ಕೂಡ ಅಭಿನಂದನೆ ಸಲ್ಲಿಸಿದೆ.

ಹೀಗೆ ಹಸಿದವರ ಹೊಟ್ಟೆ ತಣಿಸುತ್ತಿರುವ ಯುವರಾಜ ವ್ಯರ್ಥ ಆಹಾರನ್ನು ಮೊದಲು ಸ್ವತಃ ತಾವೇ ತಿಂದು ಆಹಾರ ಕೆಟ್ಟಿಲ್ಲವೆಂದು ಪರೀಕ್ಷಿಸಿದ ನಂತರವಷ್ಟೇ ಇವರು ಹಸಿದವರಿಗೆ ನೀಡುತ್ತಾರೆ. ರಾತ್ರಿ 7 ಗಂಟೆಯ ನಂತರ ಆಹಾರನ್ನು ಪಡೆಯುವುದಿಲ್ಲ. ಬೆಳಿಗ್ಗೆ, ಮಧ್ಯಾಹ್ನ ನಡೆಯುವ ಸಮಾರಂಭದಲ್ಲಿ ವ್ಯರ್ಥವಾದ ಆಹಾರವನ್ನಷ್ಟೇ ಪಡೆದುಕೊಳ್ಳುತ್ತಾರೆ. ಇಲ್ಲದಿದ್ದಲ್ಲಿ ಊಟದ ಸಮಯಕ್ಕೆ ಹಸಿದವರಿಗೆ ಆಹಾರ ನೀಡಲು ಸಾಧ್ಯವಾಗುವುದಿಲ್ಲ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವರದಿಯ ಪ್ರಕಾರ ಬೆಂಗಳೂರಿನ ಕಲ್ಯಾಣ ಮಂಟಪಗಳಿಂದ ವರ್ಷಕ್ಕೆ 350 ರಿಂದ 400 ಕೋಟಿ ರೂ ಮೌಲ್ಯದ ಆಹಾರ ವ್ಯರ್ಥವಾಗುತ್ತಿದೆ. ಇದರಲ್ಲಿ ಬಡಿಸಿ ಪೋಲಾಗುವ ಆಹಾರದ ಪ್ರಮಾಣ ಅಂದಾಜು 9,500 ಟನ್‌ಗಳಾದರೆ, ಬಡಿಸದೇ ಪೋಲಾಗುವ ಆಹಾರದ ಪ್ರಮಾಣ 4,500 ಟನ್‌ಗಳಷ್ಟು. ಆಹಾರ ಪದಾರ್ಥಗಳನ್ನು ವ್ಯರ್ಥ ಮಾಡಿದರೆ ಅದು ದೇಶದ ಆರ್ಥಿಕ ಪರಿಸ್ಥಿತಿಯ ಮೇಲೂ ಪರಿಣಾಮ ಬೀರಲಿದೆ ಎನ್ನುವ ಯುವರಾಜ, ಹಸಿದವರಿಗೆ ಊಟ ನೀಡುವ ಜೊತೆಗೆ ಆಹಾರ ಅಪವ್ಯಯ ಮಾಡದಂತೆ ಜನರಲ್ಲಿ ಜಾಗೃತಿಯನ್ನು ಕೂಡ ಮೂಡಿಸುತ್ತಿದ್ದಾರೆ.

ಇನ್ನು ಮುಂದೆ ನಿಮ್ಮ ಮನೆಯ ಯಾವುದೇ ಸಮಾರಂಭಗಳಲ್ಲಿ ಆಹಾರವೇನಾದರು ಉಳಿದರೆ ಕೂಡಲೇ ಯುವರಾಜ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ಆ ಮೂಲಕವಾದರು ಹಸಿದವರಿಗೆ ಅನ್ನದಾನ ಮಾಡಿ ಪುಣ್ಯಕಟ್ಟಿಕೊಳ್ಳಿ. ಬನ್ನಿ ಹಾಗಾದರೆ, ಎಲ್ಲರೂ ವಿಶ್ವ ಆಹಾರ ದಿನದಂದು ಆಹಾರವನ್ನು ಪೋಲು ಮಾಡುವುದಿಲ್ಲ ಎಂಬ ಶಪಥ ಮಾಡೋಣ.

(ಯುವರಾಜರ ಮೊಬೈಲ್ ಸಂಖ್ಯೆ– 8050802019)



Downloaded From: www.kpscvaani.com



## ಮೊಟ್ಟೆ ದ್ರಾವಣ ಸಿಂಪಡಿಸಿ

# ಅಧಿಕ ಇಳುವರಿ ಪಡೆದ ರೈತ

**ಬೆಳೆಯ ರೋಗ ನಿವಾರಣೆಗೆ ಮೊಟ್ಟೆ ಮತ್ತು ಶೇಂಗಾ ಎಣ್ಣೆ ಮಿಶ್ರಣವನ್ನು ಸಿಂಪಡಿಸಿ ಯಶಸ್ವಿಯಾಗಿರುವ ಹನುಮನಾಳ ಗ್ರಾಮದ ರೈತನ ಹೊಸ ಆವಿಷ್ಕಾರವನ್ನು ಗ್ರಾಮದ ಸುತ್ತಲಿನ ಜನರು ಅಳವಡಿಸಿಕೊಳ್ಳಲು ಮುಂದಾಗಿದ್ದಾರೆ.**

ಕಿಶನ್‌ರಾವ್ ಕುಲಕರ್ಣಿ



ಇದೇನಪ್ಪಾ..... ಬೆಳೆಗೂ, ಕೋಳಿ ಮೊಟ್ಟೆಗೂ, ಏನು ಸಂಬಂಧ? ಎಂದು ಆಶ್ಚರ್ಯವಾಗಬಹುದು. ಆದರೆ ಈ ಪ್ರಯೋಗ ನಡೆಸಿ, ಅಧಿಕ ಇಳುವರಿಯನ್ನು ಪಡೆದಿದ್ದಾರೆ ರೈತ ಮುತ್ತನಗೌಡ. ಸದ್ಯ ಬೆಳೆಯ ಇಳುವರಿಗಿಂತ ಬೆಳೆ ತೆಗೆಯುವಲ್ಲಿ ರೈತನಿಗಾಗುವ ಖರ್ಚು ಹೆಚ್ಚು. ಬೆಳೆಗೆ ತಗುಲುವ ವಿವಿಧ ರೋಗಗಳ ನಿಯಂತ್ರಣಕ್ಕಾಗಿ ಗೊಬ್ಬರ ಅಂಗಡಿ ವ್ಯಾಪಾರಸ್ಥರು ನೀಡುವ ಜೈವಿಕ ಕ್ರಿಮಿನಾಶಕ ಸಿಂಪಡಣೆ ಮಾಡಿ ರೈತರು ಹೈರಾಣಾಗುತ್ತಾರೆ. ಇಂತಹ ರೈತರ ಮಧ್ಯೆ ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕಿನ ಹನುಮನಾಳ ಗ್ರಾಮದ ರೈತ ಮುತ್ತನಗೌಡ ಪೊಲೀಸ ಪಾಟೀಲ ತಮ್ಮ ತರಕಾರಿ ಬೆಳೆಗೆ ತಗುಲಿರುವ ರೋಗ ನಿಯಂತ್ರಣಕ್ಕೆ ಕೋಳಿ ಮೊಟ್ಟೆ ಹಾಗೂ ಶೇಂಗಾ ಎಣ್ಣೆ ಮಿಶ್ರಣದ ದ್ರಾವಣವನ್ನು ಬೆಳೆಗಳ ಮೇಲೆ ಸಿಂಪಡಿಸಿ, ರೋಗಗಳನ್ನು ಹತೋಟಿಗೆ ತಂದಿದ್ದಾರೆ. ಅಷ್ಟೇ ಅಲ್ಲ ಈ ಮೊದಲಿಗಿಂತಲೂ ಬೆಳೆಯಲ್ಲಿ ಅತ್ಯಧಿಕ ಇಳುವರಿ ಪಡೆಯುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಹಾಗಾಗಿ ಸುತ್ತಲಿನ ರೈತರು ಕೋಳಿ ಮೊಟ್ಟೆ ಹಿಡಿದುಕೊಂಡು ಮುತ್ತಣ್ಣನವರ ಬಳಿ ಬಂದು ಬೆಳೆಗಳಿಗೆ ಮೊಟ್ಟೆ ಚಿಕಿತ್ಸೆ ಪಾಠ ಹೇಳಿಕೊಡುವಂತೆ ಕೇಳುತ್ತಿದ್ದಾರೆ.



Downloaded From: www.kpscvaani.com



### ಇಸ್ರೇಲ್ ಮಾದರಿ ಕೃಷಿ:

ಇದು ಇಸ್ರೇಲ್ ಮಾದರಿಯ ಪದ್ಧತಿಯಾಗಿದೆ. ಈ ಮೊಟ್ಟೆ ದ್ರಾವಣ ಸಿಂಪಡಣೆ ಮಾಡುವುದರಿಂದ ಬೆಳೆಗಳಿಗೆ ಮುರುಟು ರೋಗ, ಜಿಗಿ ರೋಗ ಸೇರಿದಂತೆ ವಿವಿಧ ರೋಗಗಳನ್ನು ನಿಯಂತ್ರಣ ಮಾಡಬಹುದು. ಅಲ್ಲದೆ ಬೆಳೆಗಳಿಗೆ ಅಧಿಕ ಪೋಷಕಾಂಶಗಳೂ ಒಳಸುರಿಯಾಗಿ ಲಭಿಸುತ್ತದೆ. ಇದು ರಾಸಾಯನಿಕ ಗೊಬ್ಬರ ಹಾಗೂ ಕೀಟ ನಾಶಕ ಬಳಸಿ ಕೃಷಿ ಮಾಡುವ ಪದ್ಧತಿಯ ಖರ್ಚಿಗಿಂತ ಎಣ್ಣೆ ಬಳಸಿ ಕೃಷಿ ಮಾಡುವುದರಿಂದ ಕೇವಲ ಶೇ.10ರಷ್ಟು ಹಣವನ್ನು ಖರ್ಚು ಮಾಡಬಹುದು ಎಂದು ಮೊಟ್ಟೆ ದ್ರಾವಣದಿಂದ ಯಶಸ್ಸು ಕಂಡಿರುವ ರೈತರು ಅಭಿಪ್ರಾಯಪಡುತ್ತಾರೆ.

ವಿಶೇಷವಾಗಿ ಚಳ್ಳಂಬರಿ ಮತ್ತು ಅವರೆ ಕಾಯಿಗಳಿಗೆ ಕಾಯಿ ಕೊರಕ ಕೀಟಗಳ ಹಾವಳಿ ಜಾಸ್ತಿ. ಕಾಯಿ ಕೊರಕ ಕೀಟಗಳನ್ನು ಹತೋಟಿಗೆ ತರುವುದು ರೈತರಿಗೆ ಭಾರಿ ತಲೆ ನೋವಾಗಿ ಪರಿಣಮಿಸಿತ್ತು. ಈ ಹಿಂದೆ ರೈತರೊಂದಿಗೆ ಧಾರವಾಡದ ಕೃಷಿ ಮೇಳಕ್ಕೆ ತೆರಳಿದ್ದಾಗ ರೈತರ ಮಧ್ಯೆ ನಡೆದ ಚರ್ಚೆಯಲ್ಲಿ ಎಣ್ಣೆ ಸಿಂಪಡಣೆ ಮಾಡುವುದರಿಂದ ಬೆಳೆಗಳ ಮೇಲೆ ಬೀಳಬಹುದಾದ ಕ್ರಿಮಿ ಕೀಟಗಳನ್ನು ಹತೋಟಿಗೆ ತರಬಹುದು ಎಂಬ ಅಭಿಪ್ರಾಯ ಅಲ್ಲಿ ಮುತ್ತಣ್ಣ ಅವರಿಗೆ ತಿಳಿದುಬಂತು. ಹಾಗಾಗಿ ಈ ಪ್ರಯೋಗವನ್ನು ಮಾಡಿ ನೋಡೋಣ ಎಂಬ ತೀರ್ಮಾನಕ್ಕೆ ಬಂದರು. 6 ಕೋಳಿ ಮೊಟ್ಟೆ ಹಾಗೂ ಒಂದು ಲೀಟರ್ ಶೇಂಗಾ ಎಣ್ಣೆಯನ್ನು ಒಂದು ಬಕೇಟ್‌ನಲ್ಲಿ ಮಿಶ್ರಣ ಮಾಡಿ ದ್ರಾವಣವನ್ನು ಸಿದ್ಧಪಡಿಸಿಕೊಂಡರು. 15 ಲೀಟರ್ ಶುದ್ಧ ನೀರಿಗೆ ಈ ಮಿಶ್ರಣವನ್ನು ಸೇರಿಸಿಕೊಂಡು ಅವರೆ ಹಾಗೂ ಚಳ್ಳಂಬರಿ ಬೆಳೆಗಳಿಗೆ ಸಿಂಪಡಿಸಿದರು. ಇದರಿಂದ ಕ್ರಮೇಣ ರೋಗಭಾದಕ ಕೀಟಗಳನ್ನು ನಿಯಂತ್ರಿಸುವಲ್ಲಿ ಮುತ್ತಣ್ಣ ಯಶಸ್ವಿಯಾದರು.

### ತರಕಾರಿ ಮೇಲೆ ಮೊಟ್ಟೆ ಪ್ರಯೋಗ:

ಸಾಮಾನ್ಯವಾಗಿ ಕೀಟಗಳು ಎಲೆ ಹಾಗೂ ಕಾಯಿಗಳ ಮೇಲೆ ಕೂಡುವಷ್ಟರಲ್ಲಿಯೇ ಎಣ್ಣೆ ಹಾಗೂ ಮೊಟ್ಟೆಯ ಜಿಗುಟು ಕೀಟಗಳ ಕಾಲು, ರೆಕ್ಕೆ ಸೇರಿದಂತೆ ಮೈಗೆ ಅಂಟಿಕೊಂಡು ಕೀಟಗಳು ಅಲ್ಲಾಡದಂತೆ ಹಿಡಿಯುತ್ತದೆ. ಇದರಿಂದಾಗಿ ಕೀಟಗಳು ಕೆಲವೇ ಸಮಯದಲ್ಲಿ ಸಾವನ್ನಪ್ಪುತ್ತವೆ. ಜೊತೆಗೆ ಕೀಟಗಳು ಬೆಳೆಯ ಯಾವ ಭಾಗದಲ್ಲಿಯೂ ಮೊಟ್ಟೆ ಇಡಲು ಸಾಧ್ಯವಾಗದಂತಾಗಿ ಕೀಟಗಳ ವಂಶಾಭಿವೃದ್ಧಿಗೆ ದೊಡ್ಡ ಪ್ರಮಾಣದಲ್ಲಿ ತಡೆಯಾಗುತ್ತದೆ.

ಇನ್ನು ಮೊಟ್ಟೆಯಲ್ಲಿರುವ ಪ್ರೋಟೀನ್ ಗುಣಮಟ್ಟ ಹಾಗೂ ಸಮೃದ್ಧತೆಯನ್ನು ಪರಿಗಣಿಸಿದರೆ ಪ್ರೋಟೀನ್‌ಯುಕ್ತ ಆಹಾರಗಳಲ್ಲಿಯೇ ಮೊಟ್ಟೆ ಅಗ್ರಸ್ಥಾನ ಪಡೆಯುತ್ತದೆ. ಇದು ಉತ್ತಮ ಗುಣಮಟ್ಟದ ಪ್ರೋಟೀನ್ ಮಾತ್ರವಲ್ಲ, ಇದರಲ್ಲಿ ಸಮೃದ್ಧ ಪ್ರಮಾಣದ ಆ್ಯಂಟಿ ಆಕ್ಸಿಡೆಂಟುಗಳು, ವಿಟಮಿನ್ ಎ, ಬಿ12, ರೈಬೋಫ್ಲೇವಿನ್, ಗಂಧಕ ಹಾಗೂ ಕೋಲೈನ್‌ಗಳೂ ಇವೆ. ಇವು ಸಸ್ಯಗಳಿಗೆ ಲಘುಪೋಷಕಾಂಶಗಳಾಗಿ ಪರಿವರ್ತನೆಗೊಂಡು ಬೆಳೆಗಳು ಸಮೃದ್ಧ ಇಳುವರಿ ನೀಡಲು ಕಾರಣವಾಗುತ್ತದೆ ಎಂಬುದು ರೈತ ಮುತ್ತನಗೌಡ ಪಾಟೀಲ ಅವರ ಅನುಭವದ ಮಾತು.

ಅಡುಗೆ ಎಣ್ಣೆಗಳಾದ ಪಾಮ್, ಶೇಂಗಾ, ಕೊಬ್ಬರಿ ಹಾಗೂ ಹತ್ತಿ ಕಾಳು ಎಣ್ಣೆ, ಸೋಯಾಬಿನ್ ಎಣ್ಣೆ ಹೀಗೆ



ಯಾವುದಾದರೊಂದು ಎಣ್ಣೆಗೆ ಕೋಳಿ ಮೊಟ್ಟೆ ಮಿಶ್ರಣ ಮಾಡಿ ವಾರಕ್ಕೊಮ್ಮೆ ಬೆಳೆಗಳಿಗೆ ಸಿಂಪಡಣೆ ಮಾಡಬಹುದು.

### ಮೊಟ್ಟೆ ದ್ರಾವಣದಿಂದ ಉತ್ತಮ ಇಳುವರಿ:

ವಾರದಲ್ಲಿ ಸುಮಾರು 10 ಪುಟ್ಟಿ ತರಕಾರಿ ಬೆಳೆಯುತ್ತಿದ್ದ ಮುತ್ತಣ್ಣ ಈ ವಿನೂತನ ಪ್ರಯೋಗದಿಂದಾಗಿ ಈಗ ವಾರಕ್ಕೆ ಸುಮಾರು 30 ಪುಟ್ಟಿಯಷ್ಟು ತರಕಾರಿ ಪಡೆಯಲು ಸಾಧ್ಯವಾಗಿದೆ. ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ತಿಂಗಳಿಗೆ 4 ರಿಂದ 5 ಬಾರಿ ಕ್ರಿಮಿನಾಶಕ ಸಿಂಪಡಣೆ ಮಾಡುವ ಪ್ರಮೇಯವೂ ತಪ್ಪಿದೆ. ಕ್ರಿಮಿನಾಶಕಗಳಿಗೆ ಖರ್ಚುಮಾಡಬೇಕಾಗಿದ್ದ ಹಣ, ಕೂಲಿಗಳ ಪಗಾರ ಹಾಗೂ ಸಮಯದ ಉಳಿತಾಯದ ಜೊತೆಗೆ ಬೆಳೆಯಲ್ಲಿ ಅತ್ಯಧಿಕವಾಗಿ ಇಳುವರಿ ಕಂಡಿದ್ದು ರೈತನ ಖುಷಿಗೆ ಪಾರವೇ ಇಲ್ಲದಂತಾಗಿದೆ.

ಮಳೆಗಾಲಕ್ಕಿಂತ ಚಳಿಗಾಲ ಹಾಗೂ ಬೇಸಿಗೆ ಕಾಲದ ಸಮಯದಲ್ಲಿ ಬೆಳೆಗಳಿಗೆ ಎಣ್ಣೆ ಹಾಗೂ ಮೊಟ್ಟೆ ದ್ರಾವಣದ ಸಿಂಪಡಣೆ ಪ್ರಯೋಗವು ಉತ್ತಮ. ಅಲ್ಲದೆ ಹತ್ತಿ, ಭತ್ತ, ಮೆಣಸಿನಕಾಯಿ ಬೆಳೆಗಳಿಗೆ ಅಂಟಿಕೊಳ್ಳುವ ರೋಗಕ್ಕೆ ಈ ಪ್ರಯೋಗ ಮಾಡಬಹುದು ಎಂದು ಹೇಳುತ್ತಾರೆ. ಹಾಗಂತ ಅಡುಗೆ ಎಣ್ಣೆ ಇಲ್ಲದೆ ಬರಿ ಮೊಟ್ಟೆ ದ್ರಾವಣ ಸಿಂಪಡಣೆ ಮಾಡಿದರೆ ಕ್ರಿಮಿಗಳು ಸಾಯುವುದರ ಬದಲು ಮೊಟ್ಟೆ ಸೇವಿಸಿ ಮತ್ತಷ್ಟು ದಪ್ಪಗಾಗುತ್ತವೆ ಎಂದು ಮುತ್ತಣ್ಣ ಎಚ್ಚರಿಕೆ ನೀಡುತ್ತಾರೆ. ಸದ್ಯ ಹನುಮನಾಳ ಭಾಗದ ಬಹುತೇಕ ರೈತರು ಜೈವಿಕ ಕ್ರಿಮಿನಾಶಕದ ಬದಲು ಮೊಟ್ಟೆ ದ್ರಾವಣಕ್ಕೆ ಮುಂದಾಗಿರುವುದರಿಂದ ಸಹಜವಾಗಿ ಮೊಟ್ಟೆಗಳ ದರ ಏರಿದೆಯಂತೆ. ಹೆಚ್ಚಿನ ಮಾಹಿತಿಗೆ ಮುತ್ತಣ್ಣ ಅವರ ಮೊಬೈಲ್ ಸಂಖ್ಯೆ 9741353398ಕ್ಕೆ ಕರೆ ಮಾಡಬಹುದು.



Downloaded From: www.kpscvaani.com



# ಆದಿಕವಿ ವಾಲ್ಮೀಕಿಯ ಅಂತರಂಗ

ಡಾ ಗುರುರಾಜ ಪೋಶೆಟ್ಟಿಹಳ್ಳಿ

ಶ್ರೀಮದ್ರಾಮಾಯಣದಿಂದ ವಾಲ್ಮೀಕಿ ಆದಿಕವಿ ಎಂದೆನಿಸಿ ಕಾವ್ಯ ಪ್ರಪಂಚದ ಪರಮೋನ್ನತ ಸ್ಥಾನವನ್ನಲಂಕರಿಸಿದನೋ ಅಥವಾ ಕೋಗಿಲೆಗಳ ಕೋಕಿಲನಾದ ವಾಲ್ಮೀಕಿಯಿಂದ ರಚನೆಯಾದುದರಿಂದ ಆ ಕೃತಿ ಶ್ರೇಷ್ಠ ಕೃತಿಯೆನಿಸಿ ಅಂದಿಗೂ ಇಂದಿಗೂ ಮುಂದೆ ಎಂದೆಂದಿಗೂ ಅತ್ಯುನ್ನತ ಶಿಖರ ಗ್ರಂಥವೆಂಬ ಹೆಗ್ಗಳಿಕೆ ಪಡೆದಿದೆಯೋ–ನಿಜಕ್ಕೂ ಮಂಥಿಸಬೇಕಾದ ವಿಷಯ. ಶ್ರೀಮದ್ರಾಮಾಯಣ ಪುರಾಣವೂ ಹೌದು ಶ್ರೇಷ್ಠ ಕಾವ್ಯವೂ ಹೌದು. ವಿಷಯ ವೈವಿಧ್ಯ, ಸಾಗರೋಪಮವಾದ ಆ ಗ್ರಂಥದ ವಿಶಾಲತೆ, ದೇವ–ದಾನವ ಸಂಘರ್ಷ, ಪುರುಷೋತ್ತಮ ಶ್ರೀರಾಮನ ಸತ್ಯ ಸಂಧತೆ, ಭ್ರಾತೃತ್ವ, ಇತ್ಯಾದಿಗಳು ಅದನ್ನು ಪುರಾಣದ ದಂಡೆಯಲ್ಲಿ ನಿಲ್ಲಿಸಿದರೆ, ಏಕ ಕವಿಯ ಆ ಕೃತಿ ಆ ಕಾಲದ ಸಂಸ್ಕೃತಿ ದರ್ಶನ, ರಾಗ ತೀಕ್ಷ್ಣತೆ, ರಸಾವೇಶ ಪ್ರಸಂಗಗಳಿಂದ ಸುಮಧುರ ಕಾವ್ಯಪುಷ್ಪವಾಗಿ ಕಂಗೊಳಿಸುತ್ತದೆ. ಈ ಎತ್ತರದ ಕೃತಿಯನ್ನು ಕವಿ ಶ್ರೇಷ್ಠನನ್ನು ಪಡೆದ ನಾವು ನಿಜಕ್ಕೂ ಧನ್ಯರು.

ಶ್ರೀಮದ್ರಾಮಾಯಣದ ಹೆಸರನ್ನು ಕೇಳದವರು ಯಾರಾದರೂ ಇದ್ದಾರೇನು? ರಾಮನ ಹೆಸರನ್ನು ಕೇಳದ ಭಾರತೀಯನೂ ಇರುವನೇನು? ಶ್ರೀರಾಮ ದೇಗುಲವಿಲ್ಲದ ಊರು–ಹಳ್ಳಿ ಎಲ್ಲಿಯಾದರೂ ಇದೆಯೆ? ಇಂತಹ ಕವಿ ಕೋಕಿಲವನ್ನು ಓದದವರ‍್ಯಾರು? ಹಾಡದವರು ಯಾರು? ಹೊಗಳದವರು ಯಾರು? ಅಂದರೆ ಎಲ್ಲರಿಗೂ ವಾಲ್ಮೀಕಿಯ ಪರಿಚಯವಿದೆ ಅಂದೇ ಅರ್ಥ.

ಆಶ್ವಯುಜ ಶುಕ್ಲ ಪಕ್ಷ ಹುಣ್ಣಿಮೆ– ವಾಲ್ಮೀಕಿ ಜಯಂತಿ. ಶ್ರೀರಾಮಭಕ್ತ ಮಹಾತ್ಮ ಗಾಂಧೀಜಿಯವರ ಜನ್ಮದಿನ ಅಕ್ಟೋಬರ್ ಮಾಸದಲ್ಲಿ ಬಂದಿರುವುದು ಅರ್ಥಪೂರ್ಣ. ವಾಲ್ಮೀಕಿ ಜಯಂತಿಯನ್ನು ಆಚರಿಸುವುದೆಂದರೆ ರಾಮಾಯಣದ ಹುಟ್ಟುಹಬ್ಬವನ್ನು ಆಚರಿಸಿದಂತೆ. ಭಾರತೀಯರ ಅಂತರಾಳದ ಆಧ್ಯಾತ್ಮಿಕ ಜ್ಯೋತಿಯನ್ನು ಬೆಳಗಿದಂತೆ. ಹಿಂದೂ ಸಂಸ್ಕೃತಿಯ ಆರಾಧನೆ ಮಾಡಿದಂತೆ. ಆ ಆಚರಣೆ ಕೇವಲ ವಾಲ್ಮೀಕಿಯ ಚಿತ್ರಪಟಕ್ಕೆ ಹೂಹಾರ ಹಾಕಿ ಜಯಕಾರ ಕೂಗುವುದರಲಿಲ್ಲ. ಜಯಂತಿಯ ಸಾರ್ಥಕತೆ ಎಂದರೆ ಅಮರ ರಾಮಾಯಣ ಕಾವ್ಯದ ರಸಾಸ್ವಾದನೆ. ಆಸ್ವಾದನೆ ಸುಲಭ ಸಾಧ್ಯವಲ್ಲ. ನಮ್ಮ ಬಾಳು ಉತ್ಕರ್ಷವಾಗಬೇಕಾದರೆ. ಆ ಕೃತಿ ನೀಡುವ ಪ್ರತಿಮೆಗಳು, ಸಾಂಕೇತಿಕ ಮೌಲ್ಯಗಳು, ಭೌತಿಕತೆಯ ದರ್ಶನವಾಗಬೇಕು. ಆ ಮಹಾ ದರ್ಶನಕ್ಕೆ ಸಂಸ್ಕೃತ ಪಂಡಿತರಷ್ಟೆ ಸಾಲದು ಕವಿ ಹೃದಯದ ವಿದ್ವಜ್ಜನ ಬೇಕು.

ಇಂದು ಮಹರ್ಷಿಗಳು ಋಷಿ ಸ್ಥಾನದಿಂದ ದೈವತ್ವಕ್ಕೇರಿದ್ದಾರೆ. ಅವರ ಹೆಸರಿನಲ್ಲಿ ಅನೇಕ ಮಂದಿರಗಳು, ದೇಗುಲಗಳು ಭಾರತಾದ್ಯಂತ ಕಂಡುಬರುತ್ತವೆ. ಅದರಲ್ಲಿ ದೆಹಲಿಯಲ್ಲಿರುವ ವಾಲ್ಮೀಕಿ ದೇಗುಲ ಪುರಾತನವೆಂದು ಹೇಳುತ್ತಾರೆ. ವಾಲ್ಮೀಕಿಯ ಪ್ರತಿಮೆಯ ಜೊತೆಯಲ್ಲಿ ಶ್ರೀರಾಮ–ಸೀತೆಯರ ವಿಗ್ರಹಗಳೂ ಇದ್ದು, ಪ್ರತಿ ದಿನವೂ ಪೂಜೆ, ದೀಪಾಲಂಕಾರಗಳು ನಡೆಯುತ್ತಿವೆ. ದೆಹಲಿಯಲಲ್ಲದೆ ಅಮೃತಸರ, ಹರಿದ್ವಾರ, ತಮಿಳುನಾಡಿನ ತಿರುವಾನ್ಮಯೂರ್‌ಗಳಲ್ಲಿಯೂ ವಾಲ್ಮೀಕಿ ಮಂದಿರಗಳಿವೆ. ಪಾಕಿಸ್ತಾನದ ಲಾಹೋರ್‌ನಲ್ಲಿಯೂ ವಾಲ್ಮೀಕಿ ಮಂದಿರವಿರುವುದು ಉಲ್ಲೇಖನೀಯ. ವಾಲ್ಮೀಕಿ ಬೇರೆಯಲ್ಲ, ರಾಮಾಯಣ ಬೇರೆಯಲ್ಲ. ಹೀಗಾಗಿ ಜಗತ್ತಿನಲ್ಲಿ



Downloaded From: www.kpscvaani.com

**ವಾಲ್ಮೀಕಿಯವರು ಸಂಸ್ಕೃತ ಭಾಷೆಯಲ್ಲಿ ರಚಿಸಿರುವ ಮಹಾಕಾವ್ಯ "ರಾಮಾಯಣ"ದಲ್ಲಿ ಶ್ರೀರಾಮನ ಸರ್ವಶ್ರೇಷ್ಠತೆಯನ್ನು, ಯುಗ-ಯುಗಗಳ ಇತಿಹಾಸವನ್ನು ಮತ್ತು ರಾಮರಾಜ್ಯವನ್ನು ಬಹಳ ಸುಂದರವಾಗಿ ವರ್ಣಿಸಿದ್ದಾರೆ. ಹಾಗೆಯೇ ಅನೇಕ ಜನರ ಜೀವನವನ್ನು ಈ ಮಹಾಕಾವ್ಯವು ಬದಲಾಯಿಸಿದೆ.**



ಎಲ್ಲಿಯವರೆವಿಗೆ ರಾಮಾಯಣವಿರುವುದೋ ಅಲ್ಲಿಯವರೆವಿಗೆ ವಾಲ್ಮೀಕಿಗಳು ಚಿರಂತನ. ಕವಿ ಕೋಗಿಲೆಗೆ ನಮ್ಮ ನಮನವನ್ನು ಹೀಗೆ ಸಲ್ಲಿಸೋಣ:

**ನಮಸ್ತಸ್ಯೈ ಮುನೀಶಾಯ ಶ್ರೀಯುತಾಯ ತಪಸ್ವಿನೇ**
**ಸ್ತಬ್ಧ ಜ್ಞಾನಾದಿ ವಾಸಾಯ ತಸ್ಮೈ ವಾಲ್ಮೀಕಯೇ ನಮಃ**

**ಅವಿಸ್ಮರಣೀಯ ಪರಿವರ್ತನೆ**

ಮಹರ್ಷಿ ವಾಲ್ಮೀಕಿಯ ಪೂರ್ವನಾಮ ರತ್ನಾಕರ. ಮೂಲತಃ ಬೇಡ ಜನಾಂಗದವರು. ಆತನ ಮುಖ ದುಂಡಾಗಿತ್ತು ಎನ್ನುವ ಕಾರಣಕ್ಕೆ ದುಂಡ ಅಂತಲೂ ಕರೆಯುತ್ತಾರೆ. ಮತ್ತೆ ಇನ್ನು ಕೆಲವು ಗ್ರಂಥಗಳಲ್ಲಿ ಶಂಖಚೂಡಾ ಎಂದೂ ಕರೆಯುತ್ತಾರೆ. ರತ್ನಾಕರ ಒಮ್ಮೆ ಜಿಂಕೆ, ಮೊಲ ಎಲ್ಲವನ್ನೂ ಬೇಟೆಯಾಡಿಕೊಂಡು ಬಂದು ದಾರಿಯ ಮಗ್ಗುಲ ಮರದ ಕೆಳಗೆ ಕುಳಿತುಕೊಳ್ಳುತ್ತಾನೆ. ಅದು ಋಷಿ ಮುನಿಗಳು, ಮಹಾ ತಪಸ್ವಿಗಳು ವಾಸ ಮಾಡುವ ಹಿಮಾಲಯದ ತಪ್ಪಲು ಪ್ರದೇಶ, ಆಗ ಒಬ್ಬ ಗುರುವಿನ ಆಗಮನ ಆಗುತ್ತದೆ. ಬೇಟೆಯಾಡಿರುವ ಪ್ರಾಣಿಯ ದೇಹಕ್ಕೆ ಬಾಣ, ಭರ್ಜಿ ನೆಟ್ಟಿರುವುದರಿಂದ ರಕ್ತ ಚಿಮ್ಮಿರುವುದನ್ನು ನೋಡಿ ಗುರುಗಳಿಗೆ ಬಹಳ ಕಸಿವಿಸಿ, ನೋವು ಆಗುತ್ತದೆ. ಆಗ ರತ್ನಾಕರನಿಗೆ ಕೇಳುತ್ತಾನೆ. 'ನೀನು ಮಾಡುವ ಹಿಂಸೆ ಇದೆಯಲ್ಲ, ಅದು ಮಹಾಪಾಪ. 'ಅದು ನಿನ್ನನ್ನು ನರಕಕ್ಕೆ ತಳ್ಳುತ್ತದೆ' ಎಂದು ಹೇಳುತ್ತಾರೆ. ಆಗ ರತ್ನಾಕರ ಪ್ರಶ್ನೆ ಮಾಡುತ್ತಾನೆ. 'ಅದು ಹೇಗೆ ಗುರುಗಳೇ? ಈ ಪ್ರಾಣಿ ಪಕ್ಷಿಗಳೆಲ್ಲ ನಾವು ತಿನ್ನಲಿಕ್ಕೆ ಬದುಕಿವೆ' ಎಂದು ಸಮರ್ಥಿಸಿಕೊಳ್ಳುತ್ತಾನೆ. ಆಗ ಗುರು ಹೇಳುತ್ತಾನೆ. 'ಇಲ್ಲಪ್ಪಾ ನಮ್ಮ ಹಾಗೇನೇ ಈ ಪ್ರಾಣಿ ಪಕ್ಷಿಗಳಿಗೂ ಕೂಡಾ ಜೀವ ಇದೆ. ಹಾಗಾಗಿ, ಪ್ರಾಣಿ ಹಿಂಸೆ ಮಹಾಪಾಪ. ಪ್ರಾಣಿ ಹಿಂಸೆ ತೊರೆದು ನೀನು ಸಾತ್ವಿಕ ಮಾರ್ಗದಲ್ಲಿ ನಡೆಯಬೇಕು. ಪರಮಾತ್ಮ ನಮಗೆ ಹಣ್ಣು, ಹಂಪಲು, ಗೆಡ್ಡೆ, ಗೆಣಸು ಇಂತಹ ಸಾತ್ವಿಕ ಆಹಾರ ಕೊಟ್ಟಿದ್ದಾನೆ. ನಾವು ಅದನ್ನು ಸೇವಿಸಿ ಜೀವಿಸಬಹುದು ಎಂದು ಹೇಳುತ್ತಾರೆ. ಆಗ ರತ್ನಾಕರನಿಗೆ ಎಲ್ಲೋ ಒಂದು ಕಡೆ ಪಶ್ಚಾತ್ತಾಪ ಆಗುತ್ತದೆ. ಗುರುವಿನ ಮಾತುಕೇಳಿ ಪರಿವರ್ತನೆ ಆಗುತ್ತಾನೆ.

ಮೂಲತಃ ಮಾಂಸ ಆಹಾರದ ಹಿನ್ನೆಲೆ ಇರುವ ಸಮುದಾಯಗಳಲ್ಲಿ ಹುಟ್ಟಿದ್ದರೂ ಕೂಡಾ ಗುರುವಿನ ಉಪದೇಶ ತೆಗೆದುಕೊಂಡು, ಮಾಂಸಹಾರ ತ್ಯಜಿಸಿ, ಸಾತ್ವಿಕ ಜೀವನ ನಡೆಸುವ ಅನೇಕರು ನಮ್ಮ ಸಮಾಜದಲ್ಲಿ ಸಿಗುತ್ತಾರೆ. ಹಾಗೆ ರತ್ನಾಕರ ಪರಿವರ್ತನೆ ಆಗುತ್ತಾನೆ. ನಂತರ ನಾನೇನು ಮಾಡಬೇಕು ಎಂದು ಪ್ರಶ್ನೆ ಮಾಡುತ್ತಾನೆ. ಆಗ ಗುರುಗಳು ಆತನಿಗೆ ತಾರಕ ಮಂತ್ರವನ್ನು ಜಪ ಮಾಡಲಿಕ್ಕೆ ಹೇಳುತ್ತಾರೆ.

**ತಾರಕ ಮಂತ್ರ ಜಪ**

ತಾರಕ ಮಂತ್ರವನ್ನು ರತ್ನಾಕರ ಜಪಿಸುತ್ತಾ ಹೋಗುತ್ತಾನೆ. ಅದು ಎಷ್ಟರ ಮಟ್ಟಿಗೆ ಸಿದ್ಧಿಯಾಗುತ್ತದೆ ಎಂದರೆ, ಆತ ಮುಂದೆ ಮಹಾನ್ ತಪಸ್ವಿ ಆಗುತ್ತಾನೆ. ಹಾಗೆ ಆತ ತಪಸ್ಸನ್ನು ಮಾಡುತ್ತಾ ಮಾಡುತ್ತಾ ಸಿದ್ಧಿ ಪಡೆದುಕೊಳ್ಳುತ್ತಾನೆ. ಮತ್ತೆ ಆ ಮಾರ್ಗದಲ್ಲಿ ಗುರು ಹೋಗುವ ಸಂದರ್ಭದಲ್ಲಿ ಅವನನ್ನು ಎಬ್ಬಿಸಿ ನಿನ್ನಿಂದ ಈ ಲೋಕ ಕಲ್ಯಾಣ ಆಗಬೇಕು. ನೀನೊಂದು ಮಹಾನ್ ಕಾರ್ಯಕ್ಕೆ ಬಂದಿದ್ದೀಯ. ಹುತ್ತ ಅಂದರೆ ಅದು ಜಡತ್ವ, ಹುತ್ತದಿಂದ ಬರುವುದೆಂದರೆ ಅದು ಸಜೀವವಾಗಿರುವಂತಾದ್ದು. ಜ್ಞಾನ, ಚೇತನ ವಸ್ತು ಹಾಗಾಗಿ ಹುತ್ತವೆನ್ನುವ ಜಡತ್ವದಿಂದ ಹೊರ ಹೊಮ್ಮಿ ಜ್ಞಾನಿಯಾದ. ಹುತ್ತ ಅಂದರೆ ವಾಲ್ಮೀಕ. ಜಡತ್ವದಿಂದ ಜ್ಞಾನದ ಕಡೆ ಬಂದವನು. ಆತನನ್ನು ಹರಸಿ, ಮುಂದಿನ ಕಾರ್ಯಕ್ಕೆ ಅಣಿಗೊಳಿಸುತ್ತಾರೆ.

ಇಡೀ ಜಗತ್ತಿಗೆ ವಿಶೇಷವಾಗಿ ನಮ್ಮ ಭಾರತ ದೇಶಕ್ಕೆ ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆಗೆ ರಾಮಾಯಣ ಮಹಾಕಾವ್ಯವನ್ನು ಕೊಟ್ಟಿ ಕೊಡುತ್ತಾರೆ. ಆದಿ ಕವಿ ವಾಲ್ಮೀಕಿ ಮಹರ್ಷಿ ಅವರ ರಾಮಾಯಣವು ಹಲವಾರು ದೃಷ್ಟಿಕೋನಗಳಿಂದ ಕೂಡಿದೆ. ರಾಮ ಅಂದರೆ ಆತ್ಮ. ಈ ಭೂಮಿಯಲ್ಲಿ ಎಲ್ಲರೂ ಆತ್ಮವನ್ನು ಧರಿಸಿಕೊಂಡು ಹುಟ್ಟಿದ್ದಾರೆ. ಸಮಾಜದಲ್ಲಿ ನಾವು ಯಾವ ರೀತಿ ನಡೆಯಬೇಕು, ನನ್ನ ಕರ್ತವ್ಯವೇನು ? ರಾಮ ಒಬ್ಬ ರಾಜ. ರಾಮನ ಆದರ್ಶಗಳು ಸಮಾಜಕ್ಕೆ ಹೇಗೆ ಪೂರಕವಾಗಿವೆ. ರಾಮಾಯಣವು ಸಾಮಾಜಿಕ ಜೀವನದಲ್ಲಿ ಪಾತ್ರಗಳನ್ನು ಕಟ್ಟಿಕೊಡುವಂತ ಹಿನ್ನೆಲೆಯನ್ನು ಹೊಂದಿದೆ. ಇಂತಹ ಮಹಾಕಾವ್ಯ ಕೊಟ್ಟಿರುವಂತ ಆದಿಕವಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ನಾಡಿನಾದ್ಯಂತ ಪ್ರತಿವರ್ಷ ಶುಕ್ಲ ಪಕ್ಷ ಹುಣ್ಣಿಮೆಯಲ್ಲಿ ಆಚರಿಸಲಾಗುತ್ತದೆ.

ವಾಲ್ಮೀಕಿ ಜಯಂತಿಯಲ್ಲಿ ಬೇಡ ಸಮುದಾಯದವರು ಮಾತ್ರ ಒಳಗೊಳ್ಳದೆ ಎಲ್ಲಾ ಜಾತಿ ಸಮುದಾಯಗಳ ವಿಶ್ವಾಸ ಪಡೆದು, ಕೂಡಿಕೊಂಡು ಆಚರಣೆ ಮಾಡಬೇಕಿದೆ. ಜಾತಿದ್ವೇಷಗಳು ಬೆಳೆಯದ ಹಾಗೆ ಜಾತ್ಯಾತೀತ ತಿಳಿವನ್ನು ಹಂಚುವ ವೇದಿಕೆಗಳಾಗಿ ವಾಲ್ಮೀಕಿ ಜಯಂತಿ ಆಚರಣೆ ರೂಪುಗೊಳ್ಳಬೇಕಿದೆ. ಹಾಗೆಯೇ ವಾಲ್ಮೀಕಿ ಜಯಂತಿಯು ಪುರಾಣದ ಪುನರಾವರ್ತಿತ ಸಂಗತಿಯಾಗದೆ, ವರ್ತಮಾನದಲ್ಲಿ ಸಮುದಾಯ ಆತ್ಮಾವಲೋಕನ ಮಾಡಿಕೊಳ್ಳುವ ವೇದಿಕೆಯಾಗಬೇಕಿದೆ.



Downloaded From: www.kpscvaani.com



## ಅಳಿವ ಅಂಚಿನಲ್ಲಿರುವ

# ಖಾದಿ ರಕ್ಷಣೆ ನಮ್ಮೆಲ್ಲರ ಹೊಣೆ.

ರೇಣುಕಾ ಎಂ ಎಂ

**ಪ್ರತಿಯೊಬ್ಬರು ಖಾದಿ ಮತ್ತು ಕೈಮಗ್ಗದಿಂದ ತಯಾರಿಸಿದ ಉಡುಗೆಗಳನ್ನು ಬಳಸುವ ಮೂಲಕ ಮಹಾತ್ಮ ಗಾಂಧೀಜಿ ಅವರ ಕನಸು ನನಸು ಮಾಡುವುದು ನಮ್ಮೆಲ್ಲರ ಹೊಣೆಗಾರಿಕೆಯಾಗಿದೆ.**



ಇತ್ತೀಚಿನ ದಿನಗಳಲ್ಲಿ ಹಾನಿಕಾರಕ ರಾಸಾಯನಿಕ ಮಿಶ್ರಣ ಹೊಂದಿರುವ ಪಾಲಿಸ್ಟರ್, ಸಿಂತಟಿಕ್, ಟೆರಿಕಾಟ್, ಬಟ್ಟೆಗಳು ಮಾರುಕಟ್ಟೆಗೆ ಬರುತ್ತಿವೆ. ಅವುಗಳನ್ನು ಬಳಸುವವುದರಿಂದ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು, ಆರೋಗ್ಯದ ದೃಷ್ಟಿಯಿಂದ ಮತ್ತು ಆಯಾ ಕಾಲಮಾನಕ್ಕೆ ಮತ್ತು ನಮ್ಮ ದೇಶದ ಹವಾಮಾನಕ್ಕೆ ಅನುಗುಣವಾಗಿ ಖಾದಿ ಮತ್ತು ಕೈ ಮಗ್ಗದಿಂದ ನೇಯ್ದ ಕಾಟನ್ ಹಾಗೂ ದೇಸಿಯ ಬಟ್ಟೆಗಳು ಆರೋಗ್ಯಕ್ಕೆ ಸೂಕ್ತವಾಗಿವೆ. ಅಷ್ಟೆ ಅಲ್ಲದೆ ಗಾಂಧಿ ಪರಿಕಲ್ಪನೆಯಂತೆ ಸಣ್ಣ ಮತ್ತು ಗುಡಿ ಕೈಗಾರಿಕೆ, ನಿರುದ್ಯೋಗ ನಿವಾರಣೆಗೆ ನೇಕಾರಿಕೆಯು ಒಂದು ಮಹತ್ವದ ಕಾರ್ಯ ಕ್ಷೇತ್ರವಾಗಿದೆ.



Downloaded From: www.kpscvaani.com

**ನೇಕಾರರು ಮಾರಾಟ ಮಾಡಲಾಗದ ಸೀರೆಗಳನ್ನು ನೇಕಾರ ಸಹಕಾರಿ ಸಂಘದವರೇ ಖರೀದಿಸುವ ಮೂಲಕ ನೇಕಾರರಿಗೆ ಆರ್ಥಿಕವಾಗಿ ಸಹಾಯ ಒದಗಿಸುತ್ತಿರುವ ಜೊತೆಗೆ ಸೀರೆ ಉತ್ಪಾದನೆಗೆ ಬೇಕಾಗುವ ಕಚ್ಚಾ ಸಾಮಗ್ರಿಗಳನ್ನು ಒದಗಿಸುತ್ತಾರೆ**



ಕರ್ನಾಟಕದ ಸಾಂಪ್ರದಾಯಿಕ ಸೀರೆಗಳನ್ನು ನೇಯುವುದರಲ್ಲಿ ಹೆಸರುವಾಸಿಯಾಗಿದೆ. ಅದರಲ್ಲಿಯೂ ಬಾಗಲಕೋಟೆ ಜಿಲ್ಲೆಯ ಅಮೀನಗಡದ ಸೀರೆ, ಇಳಕಲ್ ದಡಿ ಸೀರೆ, ಗುಳೆದಗುಡ್ಡದ ಖಣ, ಕಮತಗಿ ರೇಷ್ಮೆ ಸೀರೆಗಳು ಹೆಚ್ಚು ಜನಪ್ರಿಯವಾಗಿದ್ದು ಸರಿ ಸುಮಾರು 8ನೆಯ ಶತಮಾನದಿಂದ ನಮ್ಮ ಭಾಗದ ನೇಕಾರಿಕೆಯ ತಾಣವಾಗಿದೆ. ಜಿಲ್ಲೆಯಲ್ಲಿ ಕೆರೂರು, ಕಮತಗಿ, ಗುಳೆದಗುಡ್ಡ, ಸೂಳಿಬಾವಿ, ರಬಕವಿ–ಬನಹಟ್ಟಿ, ಮಹಾಲಿಂಗಪುರ ತೇರಳದಗಳಲ್ಲಿ ಅನೇಕ ನೇಕಾರ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಮಾರುಕಟ್ಟೆಗೆ ಮಾರಾಟ ಮಾಡಲು ಕಳಿಸಲಾಗದ ನೇಕಾರರ ಸೀರೆಗಳನ್ನು ಈ ಸಂಘದವರು ಖರೀದಿಸಿ ನೇಕಾರರಿಗೆ ಆರ್ಥಿಕ ಸಹಾಯ ಒದಗಿಸುವುದರ ಜೊತೆಗೆ ಸೀರೆ ಉತ್ಪಾದನೆಗೆ ಬೇಕಾಗುವ ಕಚ್ಚಾ ಸಾಮಗ್ರಿಗಳನ್ನು ಪೂರೈಸುತ್ತಾರೆ.

ಸರ್ಕಾರ ನೇಕಾರರಿಗಾಗಿ ಅನೇಕ ಯೋಜನೆಗಳನ್ನು ತಂದಿರುವುದಲ್ಲದೆ ನೇಕಾರ ನಿಗಮವನ್ನು ರಚಿಸಿಕೊಂಡಿದ್ದು ಇದರಲ್ಲಿ ಬರುವ ವಿಶೇಷ ಪ್ಯಾಕೇಜ್ ಯೋಜನೆಯಡಿಯಲ್ಲಿ ಇಳಕಲ್ಲಿನ ಕರ್ಣ ಮಹಾಂತೇಶ ಮನ್ನಾಪುರವರು 2, ಲಕ್ಷದ 25 ಸಾವಿರದ ಸಹಾಯಧನ ಪಡೆದು 4 ಲಕ್ಷ ಮೊತ್ತದಲ್ಲಿ ಒಂದು ಕೈಮಗ್ಗವನ್ನು ಪ್ರಾರಂಭಿಸಿದರು. ಮುಂದೆ ಇದರಿಂದ ಲಾಭ ಪಡೆದ ಅವರು ಮತ್ತಷ್ಟು ಕೈ ಮಗ್ಗಗಳನ್ನು ಹಾಕಿದರು. ಪ್ರಸ್ತುತ ಇವರು 8 ಕೈ ಮಗ್ಗಗಳನ್ನು ಹಾಕಿಕೊಂಡಿದ್ದಾರೆ. ಇದರಿಂದ ಅವರು ದಿನಕ್ಕೆ 2ರಿಂದ 3 ಸೀರೆಗಳನ್ನು ನೇಯುತಿದ್ದು 6 ರಿಂದ 8 ಜನ ನೇಕಾರರಿದ್ದು ಅವರಿಗೆ ಒಂದು ವಾರಕ್ಕೆ 4ರಿಂದ 5 ಸಾವಿರ ರೂ ಗಳನ್ನು ನೀಡುತ್ತಿದ್ದಾರೆ. ಇವರ ಕೈಮಗ್ಗದಲ್ಲಿ ರೇಷ್ಮೆ ಸೀರೆ, ಕಾಟನ್ ಸೀರೆ, ಇಳಕಲ್ ದಡಿ ಸೀರೆ, ಕಾಂಚೀವರಂ, ಸೀರೆಗಳನ್ನು ನೇಯುತ್ತಾರೆ. ಸೊಸೈಟಿಗೆ ಸೀರೆಗಳನ್ನು ಕಳುಹಿಸದೆ ನೇರವಾಗಿ ಬೆಂಗಳೂರು, ಕೇರಳ, ತಮಿಳುನಾಡು ರಾಜ್ಯಕ್ಕೆ ಮಾರಾಟ ಮಾಡುತ್ತಿದ್ದಾರೆ.



ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿ 3686 ಕೈಮಗ್ಗಗಳು, ಬಾದಾಮಿ ತಾಲ್ಲೂಕಿನಲ್ಲಿ 1028 ಕೈಮಗ್ಗಗಳು, ಜಮಖಂಡಿ ತಾಲ್ಲೂಕಿನಲ್ಲಿ 864 ಕೈ ಮಗ್ಗಗಳು, ಬಾಗಲಕೋಟೆಯಲ್ಲಿ 480 ಕೈಮಗ್ಗಗಳು, ಮುಧೋಳ 259, ಬೀಳಗಿ 197 ಕೈಮಗ್ಗಗಳಿದ್ದು ಒಟ್ಟು 6514 ಕೈಮಗ್ಗಗಳು 6363 ಘಟಕಗಳಿದ್ದು,17829 ವಿದ್ಯುತ್ ಮಗ್ಗಗಳಿವೆ ಹಾಗೂ 39 ಕೈಮಗ್ಗ ಸಂಘಗಳಿವೆ. ಕೈಮಗ್ಗ ಉತ್ಪನ್ನಗಳು ಕೂಡ ದೊಡ್ಡ ಸಂಖ್ಯೆಯಲ್ಲಿ ಸಿದ್ಧಗೊಳ್ಳುತ್ತಿವೆ. ನೇಕಾರಿಕೆಯಂತ ನೆಲಮೂಲದ ಕುಲಕಸಬು ಉಳಿಯಬೇಕಾದರೆ ಜನರು ಕೈಮಗ್ಗ ಉತ್ಪನ್ನಗಳನ್ನು ಖರೀದಿಸಲು ಮುಂದಾಗಬೇಕು. ಈ ನಿಟ್ಟಿನಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯು ಯುವ ಜನರಲ್ಲಿ ಹೆಚ್ಚು ಅರಿವು ಮೂಡಿಸುತ್ತಿದೆ. ಯುವಕರನ್ನು ಹಾಗೂ ಜನರನ್ನು ಆಕರ್ಷಿಸಲು ನೂತನ ವಿನ್ಯಾಸದ ಖಾದಿ ಬಟ್ಟೆಗಳ ಮಾರಾಟ ಮೇಳಗಳನ್ನು ಅಕ್ಟೋಬರ್ ಮಾಹೆಯಲ್ಲಿ ರಾಜ್ಯದ ಪ್ರಮುಖ ನಗರಗಳಲ್ಲಿ ಆಯೋಜಿಸುತ್ತದೆ. ಹಾಗೂ ಖಾದಿಗೆ ಇರುವ ಗೌರವ ಮತ್ತು ಅದರಿಂದಾಗುವ ಪ್ರಯೋಜನಗಳ ಬಗ್ಗೆ ಪ್ರಚಾರ ಮಾಡುವ ಕಾರ್ಯವನ್ನು ಮಾಡುತ್ತಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಕೈಮಗ್ಗ ಹಾಗೂ ವಿದ್ಯುತ್ ಮಗ್ಗಕ್ಕೆ ಅಗ್ರಸ್ಥಾನವಿದ್ದು, ಇಲ್ಲಿ ಹೆಚ್ಚಿನ ಜನರು ನೇಕಾರಿಕೆಯನ್ನು ಅವಲಂಬಿಸಿದ್ದಾರೆ. ಖಾದಿ ಉಳಿವಿಗಾಗಿ ಹಾಗೂ ರೈತರ ಅಭಿವೃದ್ಧಿಗಾಗಿ ಮೂಲ ಕಚ್ಚಾ ವಸ್ತು ಹತ್ತಿಯಾಗಿದ್ದು, ಕಡಿಮೆ ಸಮಯದಲ್ಲಿ ಹೆಚ್ಚು ಇಳುವರಿ ಕೊಡುವ ಜೊತೆಗೆ ಅತಿ ಹೆಚ್ಚು ಉದ್ದನೆಯ ನೂಲು ಹೊರಡುವ ಹತ್ತಿ ಬೆಳೆಯನ್ನು ಬೆಳೆಯುವ ಕಾರ್ಯವಾಗಬೇಕಾಗಿದೆ. ಇದರಿಂದ ಖಾದಿ ಉತ್ಪನ್ನಗಳಿಗೆ ಹೆಚ್ಚು ಆದ್ಯತೆ ದೊರೆಯುತ್ತದೆ. ಜೊತೆಗೆ ಸ್ವದೇಶಿ ಉತ್ಪನ್ನವಾದ ಖಾದಿ ಬಟ್ಟೆಯನ್ನು ಮಾತ್ರ ಯುವಪೀಳಿಗೆಯವರು ಬಳಸುವಂತಾಗಬೇಕು. ಆಗ ಮಾತ್ರ ಅಳಿವಿನ ಅಂಚಿನಲ್ಲಿರುವ ಖಾದಿಯನ್ನು ರಕ್ಷಣೆ ಮಾಡುವ ಜೊತೆಗೆ ನೇಕಾರರ ಬದುಕನ್ನು ಹಸನು ಮಾಡಲು ಸಾಧ್ಯ. ■



Downloaded From: www.kpscvaani.com

# ಹೈನುಗಾರಿಕೆಯಲ್ಲಿ ಸಾಧನೆ ಮಾಡಿರುವ ಯುವ ರೈತ ಮಹಿಳೆ



ಡಾ. ರವಿಪ್ರಸಾದ್ ಸಜ್ಜನ್. ಎಂ.

ಮಾನ್ವಿ ತಾಲೂಕಿನ ಕೊರವಿ ಗ್ರಾಮದ ಯುವ ರೈತ ಮಹಿಳೆ ಹರಿತಾ ಚೌಧರಿರವರು ಹೈನುಗಾರಿಕೆಯಲ್ಲಿ ಯಶಸ್ಸು ಕಾಣುವ ಮೂಲಕ ತಮ್ಮ ಕನಸನ್ನು ನನಸಾಗಿಸಿಕೊಂಡಿದ್ದಾರೆ. ಕೃಷಿ ಪಶುಸಂಗೋಪನೆ ಕಸುಬನ್ನು ತಲೆತಲಾಂತರಗಳಿಂದ ನಡೆಸುತ್ತಾ ಬಂದವರೇ ಅದನ್ನು ಮುನ್ನಡೆಸಿಕೊಂಡು ಹೋಗಲು ಏಗುವ ಇಂದಿನ ದಿನಗಳಲ್ಲಿ ಹರಿತಾ ಚೌಧರಿರವರು ಪಶುಸಂಗೋಪನೆಯನ್ನು ಸಮರ್ಥವಾಗಿ ನಿಭಾಯಿಸಿ ಯಶಸ್ಸು ಕಂಡುಕೊಂಡು ಎಲ್ಲರಿಗೂ ಮಾದರಿಯಾಗಿದ್ದಾರೆ.

ನಮಗೆ ಭಾರಿ ಗಾತ್ರದ ಜಫರದಾದಿ ತಳಿಯ ಎಮ್ಮೆಗಳ ಪಕ್ಕದಲ್ಲಿ ನಿಂತುಕೊಳ್ಳಲು ಭಯವಾಗುತ್ತದೆ. ಆದರೆ ಹರಿತಾ ಪ್ರತಿದಿನ ಈ ಎಮ್ಮೆಗಳ ಎಲ್ಲಾ ಆರೈಕೆಯನ್ನು ಆರಾಮಾಗಿ ಮಾಡುತ್ತಿದ್ದಾರೆ.

ಕಳೆದ 20 ವರ್ಷಗಳಿಂದ ಹೈನುಗಾರಿಕೆಯಲ್ಲಿ ಹರಿತಾರವರ ತಂದೆ ಜನಾರ್ದನ್‌ಚೌಧರಿ ತೊಡಗಿದ್ದರು. ಆದರೆ, ಕೆಲವು ಕಾರಣಗಳಿಂದ ಹೈನುಗಾರಿಕೆಯಲ್ಲಿ ನಷ್ಟವನ್ನು ಅನುಭವಿಸಿದರು. ಹಾಗಾಗಿ ಜನಾರ್ದನ್ ಅವರು ಮುರ್ರಾ ಎಮ್ಮೆಗಳನ್ನು ಮಾರಿ, ಹೈನುಗಾರಿಕೆಯನ್ನು ಕೈ ಬಿಡಲು ಮುಂದಾದರು. ಆಗ ಪಿ.ಯು.ಸಿ. ಓದುತ್ತಿದ್ದ ಹರಿತಾ, "ಎಮ್ಮೆ ಮಾರುವುದು ಬೇಡ, ನಾನು ಹೈನುಗಾರಿಕೆಯನ್ನು ನೋಡಿಕೊಳ್ಳುತ್ತೇನೆ" ಎಂದು ತಮ್ಮ ತಂದೆಗೆ ಧೈರ್ಯ ತುಂಬಿದರು.

ಜಫರದಾರಿ ಎಮ್ಮೆಗೆ ಮುರ್ರಾ ಕೋಣದಿಂದ ಕ್ರಾಸ್ ಮಾಡಿಸುವುದರಿಂದ ಜನಿಸುವ ಒಂದು ವರ್ಷದ ಎಮ್ಮೆ ಕರುಗಳಿಗೆ 30–40 ಸಾವಿರ ರುಪಾಯಿಯಷ್ಟು ಬೆಲೆ ಸಿಗುತ್ತದೆ. ಜಫರದಾರಿ ತಳಿಗಳು ಕನಿಷ್ಠ 20 ಕರುಗಳನ್ನು ನೀಡುತ್ತವಂತೆ. ಹಾಗಾಗಿ ಐದಾರು ಕರು ಹಾಕಿದ ಎಮ್ಮೆಗಳಿಗೆ ಏನಿಲ್ಲವೆಂದರೂ ಸುಮಾರು 10–12 ಲಕ್ಷ ರೂಪಾಯಿಗೆ ಮಾರಾಟವಾಗುತ್ತದೆ. ಈಗಾಗಲೇ ಹರಿತಾರವರ ಮುರ್ರಾ (ಬೋಡಮ್ಮ) ಬರೊಬ್ಬರಿ 9 ಎಮ್ಮೆ ಹಾಗೂ 1 ಕೋಣಕ್ಕೆ ಜನ್ಮ ನೀಡಿದೆ. ಈ ಎಮ್ಮೆಗಳನ್ನು ಆಂಧ್ರ, ತೆಲಂಗಾಣ ಭಾಗದ ರೈತರು ಹೆಚ್ಚಾಗಿ ಬಂದು ಖರೀದಿಸುತ್ತಾರೆ. ಈ ಎಮ್ಮೆಗಳು ದಿನಕ್ಕೆ 25 ಲೀಟರ್‌ಗೂ ಹೆಚ್ಚು ಹಾಲು ನೀಡುತ್ತವೆ. ಹೀಗಾಗಿ ಈ ಎಲ್ಲಾ ಕಾರಣದಿಂದಾಗಿ, ಈ ಎಮ್ಮೆಗಳು ರೈತರಿಗೆ ಲಕ್ಷಾಂತರ ಆದಾಯ ತಂದುಕೊಡುವುದರಲ್ಲಿ ಎರಡು ಮಾತಿಲ್ಲ ಎನ್ನುವುದು ಹರಿತಾರವರ ನಂಬಿಕೆಯಾಗಿದೆ.

ಜಫರದಾರಿ ತಳಿಗಳ ಎಮ್ಮೆಗಳು ಭಾರಿ ಗಾತ್ರದವಾಗಿರುವುದರಿಂದ, ಅವುಗಳಿಗೆ ಆಹಾರ ಕೂಡ ಹೆಚ್ಚಾಗಿಯೇ ಬೇಕಾಗುತ್ತದೆ. ಎಮ್ಮೆಗಳಿಗಾಗಿ 3 ಎಕರೆ ಪ್ರದೇಶವನ್ನು ಹಸಿ ಹುಲ್ಲು ಬೆಳೆಸುವುದಕ್ಕಾಗಿ ಮೀಸಲಿಟ್ಟಿದ್ದಾರೆ. ಹರಿತಾ ಅವರು ಹೇಳುವ ಪ್ರಕಾರ ಆಹಾರದಲ್ಲಿ ಹೆಚ್ಚು ಕಾಳಜಿವಹಿಸುವುದು ಅತಿ ಮುಖ್ಯವಾಗಿರುತ್ತದೆ. ಎಮ್ಮೆಗಳು ಹೆಚ್ಚು ತಿಂದಷ್ಟು ಹೆಚ್ಚು ಹಾಲು ಕೊಡುತ್ತವೆ. ಹೀಗಾಗಿ ಅವುಗಳ ನಿರ್ವಹಣೆ ಕೂಡ ತುಸು ದುಬಾರಿಯಾಗಿರುತ್ತದೆ. ದಿನಕ್ಕೆ ಒಂದು ಎಮ್ಮೆ ಸುಮಾರು 10 ಕೆ.ಜಿ.ಯಷ್ಟು ಆಹಾರ ತಿನ್ನುತ್ತದೆ. ಆದ್ದರಿಂದ ಹರಿತಾ ಅವರು ಒಣಹುಲ್ಲಿನ ಜತೆಗೆ ಹತ್ತಿ ಕಾಳು, ಗೋದಿ ಹೊಟ್ಟು, ತೊಗರಿ, ಸಜ್ಜೆಗಳನ್ನು ಕುದಿಸಿ ತಿನ್ನಲು ಕೊಡುತ್ತಾರೆ.

ಹರಿತಾರವರಿಗೆ ಸಂದ ಪ್ರಶಸ್ತಿಗಳಿಗೆ ಲೆಕ್ಕವೇ ಇಲ್ಲ. ಸಿಂಧನೂರಿನಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ–2019 ರ ಪಶು ಮತ್ತು ಮತ್ಸ್ಯ ಮೇಳದಲ್ಲಿ ಹರಿತಾರವರು ಸಾಕಿದ 16 ವರ್ಷದ (ಬೋಡಮ್ಮ) ಮುರ್ರಾ ಎಮ್ಮೆ 16 ಲೀಟರ್ ಹಾಲು ನೀಡುವ ಮೂಲಕ ಹಾಲಿನ ಸ್ಪರ್ಧೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಹರಿತಾರವರಿಗೆ ಕೀರ್ತಿ ತಂದುಕೊಟ್ಟಿತು. ಹಾಗೆಯೇ ಅವರದೇ 15 ವರ್ಷದ ಮುರ್ರಾ ಎಮ್ಮೆ 15.5 ಲೀಟರ್ ಹಾಲು ನೀಡುವ ಮೂಲಕ ದ್ವಿತೀಯ ಸ್ಥಾನವನ್ನು ಅವರೇ ಬಾಚಿಕೊಂಡರು.


ರಾಯಚೂರು ಕೃಷಿ ವಿವಿ ಹಮ್ಮಿಕೊಂಡಿದ್ದ ಕೃಷಿ ಮೇಳ–2019ರ ಜಾನುವಾರು ಪ್ರದರ್ಶನದ ವಿಭಾಗದಲ್ಲಿ ಹರಿತಾರವರ ಜಫರದಾರಿ, ಮುರ್ರಾ ಎಮ್ಮೆಗಳು ದ್ವಿತೀಯ ಸ್ಥಾನ ಪಡೆದವು. ಬೀದರ್‌ನಲ್ಲಿ ನಡೆದ ರಾಜ್ಯ ಮಟ್ಟದ (2020) ಪಶು ಮೇಳದಲ್ಲಿ ಭಾಗವಹಿಸಿ ಸತತ ಎರಡನೇ ಬಾರಿಗೆ ಪ್ರಥಮ ಸ್ಥಾನವನ್ನು ಹರಿತಾರವರು ಸ್ವಂತವಾಗಿಸಿ ಕೊಂಡರು. ಹರಿತಾ ಅವರ ಸಾಧನೆಯನ್ನು ಮೆಚ್ಚಿ, ಹಲವು ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿವೆ.

ಪ್ರತಿಯೊಂದು ಉದ್ಯಮದಲ್ಲೂ ನಷ್ಟ ಇದ್ದದ್ದೆ. ಆದರೆ ನಾವು ಎದೆಗುಂದದೆ, ಧೈರ್ಯವಾಗಿ, ಜಾಣತನದಿಂದ ಅದನ್ನು ಮುಂದುವರಿಸಿಕೊಂಡು ಹೋದರೆ ಯಶಸ್ಸು ನಮ್ಮ ಪಾಲಿಗೆ ಒಲಿಯುತ್ತದೆ ಎಂಬುದಕ್ಕೆ ಹರಿತಾಚೌಧರಿಯವರೆ ಒಂದು ನಿದರ್ಶನ. ಹೆಚ್ಚಿನ ಮಾಹಿತಿ ಬೇಕಾದವರು ಹರಿತಾರವರ ಮೊಬೈಲ್ ಸಂಖ್ಯೆಗೆ (8884706576, 7899020039) ಕರೆ ಮಾಡಬಹುದು.



Downloaded From: www.kpscvaani.com

# ಪದಬಂಧ–11




ವಿದ್ಯಾ ವಿ. ಹಾಲಭಾವಿ

**ಎಡದಿಂದ ಬಲಕ್ಕೆ**

2. ಸಂತನಿಂದ ಆನಂದ ಬಂದಿದೆಯಲ್ಲಾ? (3)
4. ನಮ್ಮ ರಾಷ್ಟ್ರಪಿತ (5)
6. ಕೆಟ್ಟ ರೂಪವಿದು (3)
8. ಜೈ ಜವಾನ್, ಜೈ ಕಿಸಾನ್ ಎಂಬ ಘೋಷಣೆಯ ಮಾಡಿದ ಇವರು ಭಾರತದ ಎರಡನೆಯ ಪ್ರಧಾನಮಂತ್ರಿ (8)
10. ನದಿಗೆ ಅಥವಾ ಕೆರೆಕೊಳಗಳಿಗೆ ನೀರು ಹರಿದು ಬರುವಪ್ರದೇಶ (8)
12. ಸೀತೆಯ ತಂದೆ (3)
14. ಶಿಕ್ಷಕರ ವರ್ಗಾವಣೆಗಾಗಿ ಶಿಕ್ಷಣ ಇಲಾಖೆ ಅಭಿವೃದ್ಧಿಪಡಿಸಿದ App ಉಲ್ಟಾ ಕಾಣುತ್ತಿದೆ (5)
16. ವಿದ್ಯೆಯೊಡನೆ ಇರಬೇಕಾದ ನಮ್ರತೆ (3)

**ಮೇಲಿಂದ ಕೆಳಕ್ಕೆ**

1. ಸುಗಮವಾಗಿ ಕಿತ್ತಿರುವ ಹೂವು (2)
2. ಅಕ್ಷರಗಳು ಒಂದುಗೂಡುವುದು (2)
3. ರುಚಿಯಾದುದನ್ನು ಹೀಗೆನ್ನಿ (2)
5. ಕಹಿರುಚಿಯ ಈ ತರಕಾರಿ ಕೊನೆಗೆ ದೀರ್ಘವಾಗಿದೆ (3)
7. ಅನ್ಯ ಹೆಂಗಸು (3)
9. ಶಿಲ್ಪಕಲೆಗಳ ಬೀಡು, ಹೊಯ್ಸಳ ನಾಡು ಎಂದೇ ಪ್ರಸಿದ್ಧವಾದ ಜಿಲ್ಲೆ (3)
10. ನೀರಿನಲ್ಲಿ ಹುಟ್ಟಿದುದು (3)
11. ನೂರು ಕಣ್ಣು ಎಂದು ಹೀಗೆ ಹೇಳಿ (3)
13. ಕವಿತೆ ಬರೆಯುವವನು (2)
14. ಮೂರರ ಗುಂಪು (2)
15. ಶಿಖರವನ್ನೇರಿದಾಗ ಕಾಣಿಸಿದ ತಲೆ (2)

**ಉತ್ತರ**

**ಎಡದಿಂದ ಬಲಕ್ಕೆ**

2.ಸಂತಸ 4.ಮಹಾತ್ಮಗಾಂಧಿ 6.ವಿರೂಪ 8.ಲಾಲಬಹಾದ್ದೂರ್‌ಶಾಸ್ತ್ರಿ 10.ಜಲಾನಯನಪ್ರದೇಶ 12.ಜನಕ 14.ತ್ರಮಿಕಕ್ಷಶಿ 16.ವಿನಯ

**ಮೇಲಿಂದ ಕೆಳಕ್ಕೆ**

1. ಸುಮ 2.ಸಂಧಿ 3.ಸವಿ 5.ಹಾಗಲಾ 7.ಪರಸ್ತ್ರೀ 9.ಹಾಸನ 10.ಜಲಜ 11.ಶತಾಕ್ಷ 13.ಕವಿ 14.ತ್ರಯ 15.ಶಿರ

**–: ಸೂಚನೆ :–**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

Downloaded From: www.kpscvaani.com




ಸೆಪ್ಟೆಂಬರ್ 11 ರಂದು ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಶ್ರೀ ಬಿ. ಎಸ್. ಯಡಿಯೂರಪ್ಪ ಅವರು ಅತ್ಯುತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಸಚಿವ ಸುರೇಶ್ ಕುಮಾರ್, ಶಿಕ್ಷಣ ಸುಧಾರಣಾ ಸಲಹೆಗಾರರಾದ ಪ್ರೊ. ಎಂ. ಆರ್. ದೊರೆಸ್ವಾಮಿ ಹಾಗೂ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.



ಸೆಪ್ಟೆಂಬರ್ 15 ರಂದು ವಿಧಾನಸೌಧದಲ್ಲಿ ಹಿರಿಯ ನಾಗರಿಕರೊಬ್ಬರಿಂದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಅಹವಾಲು ಸ್ವೀಕರಿಸಿ, ಕೊಂದುಕೊರತೆಯನ್ನು ಆಲಿಸಿದರು.

Downloaded From: www.kpscvaani.com

RNI No. KAR/KAN/2017/75029
Regd No.KA/BGGPO/2583/2018-20 Licensed to post without prepayment Licence No. PMG/BG/ WPP-365/2018-20
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26

ಆರೋಗ್ಯ ಮತ್ತು
ಕುಟುಂಬ ಕಲ್ಯಾಣ ಇಲಾಖೆ



# ಕೋವಿಡ್-19 ರಿಂದ ನೀವು ಗುಣಮುಖರಾಗಿದ್ದರೆ, ನಿಮ್ಮ ಪ್ಲಾಸ್ಮಾ ದಾನವು ಜೀವಗಳನ್ನು ಉಳಿಸಬಹುದು

## ಪ್ಲಾಸ್ಮಾ ಚಿಕಿತ್ಸೆ ಎಂದರೇನು?

ಕೊರೋನವೈರಸ್ ವಿರುದ್ಧ ಹೋರಾಡಲು ಕನ್ವೆಲೆಸೆಂಟ್ ಪ್ಲಾಸ್ಮಾ ಥೆರಪಿ ಒಂದು ಹೊಸ ಚಿಕಿತ್ಸೆಯಾಗಿದೆ. ಪ್ಲಾಸ್ಮಾ ಚಿಕಿತ್ಸೆಯು ವೈರಸ್‌ನಿಂದ ತೀವ್ರವಾಗಿ ಸೋಂಕಿಗೆ ಒಳಗಾದ ರೋಗಿಗಳಿಗೆ ಚಿಕಿತ್ಸೆ ನೀಡಲು ಕೋವಿಡ್-19 ರಿಂದ ಚೇತರಿಸಿಕೊಂಡ ವ್ಯಕ್ತಿಯ ರಕ್ತದಿಂದ ಪ್ರತಿಕಾಯಗಳನ್ನು ಬಳಸುತ್ತದೆ.

## ಪ್ಲಾಸ್ಮಾವನ್ನು ಯಾರು ದಾನ ಮಾಡಬಹುದು?

- 18 ವರ್ಷದಿಂದ 60 ವರ್ಷ ವಯಸ್ಸಿನವರಾಗಿರಬೇಕು
- ಎಲ್ಲಾ ಪುರುಷರು ಮತ್ತು ಗರ್ಭ ಧರಿಸದೆ ಇರುವ ಮಹಿಳೆಯರು ದಾನ ಮಾಡಬಹುದು
- ತೂಕ 50 ಕೆಜಿಗಿಂತ ಹೆಚ್ಚಿರಬೇಕು
- ಆಸ್ಪತ್ರೆಯಿಂದ ಬಿಡುಗಡೆಯಾದ 28 ದಿನಗಳ ನಂತರ ದಾನ ಮಾಡಬಹುದು

**ಪ್ಲಾಸ್ಮಾ ದಾನವು ಸುರಕ್ಷಿತ ಮತ್ತು ಸರಳ ವಿಧಾನವಾಗಿದೆ**

ದಾನಿಗಳ ಪೋಷಣೆ ಮತ್ತು ಆರೈಕೆಗಾಗಿ ರೂ. 5000/- ನೀಡಲಾಗುವುದು

## ಪ್ಲಾಸ್ಮಾವನ್ನು ಎಲ್ಲಿ ದಾನ ಮಾಡಬೇಕು ಮತ್ತು ಯಾರನ್ನು ಸಂಪರ್ಕಿಸಬೇಕು?

ಟ್ರಾನ್ಸ್‌ಫ್ಯೂಷನ್ ಮೆಡಿಸನ್ ವಿಭಾಗ (ರಕ್ತ ನಿಧಿ ಕೇಂದ್ರ)
ಪ್ಲಾಸ್ಮಾ ದಾನ ಕೇಂದ್ರ, ವಿಕ್ಟೋರಿಯಾ ಆಸ್ಪತ್ರೆ ಕ್ಯಾಂಪಸ್, ಕೆಆರ್ ಮಾರುಕಟ್ಟೆ
ದೂರವಾಣಿ: 080-47190606
ಇ-ಮೇಲ್: bngu.victoriahospital.bb@gmail.com

**ಕೋವಿಡ್-19 ಯೋಧರಾಗಿ - ಪ್ಲಾಸ್ಮಾ ದಾನ ಮಾಡಿ, ಜೀವಗಳನ್ನು ಉಳಿಸಿ**

Downloaded From: www.kpscvaani.com